ಶಿಲ್ಪಸಿದ್ಧಾಂತಿ ಶ್ರೀಸಿದ್ಧಲಿಂಗಸ್ವಾಮಿಗಳು

ಸಂಪಾದಕ : ಎನ್. ಮರಿಶಾಮಾಚಾರ್



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು

ಸಂಪಾದಕ

ಎನ್. ಮರಿಶಾಮಾಚಾರ್

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಮೇಲ್ಮನೆ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು– ೫೬೦ ೦೦೨

SILPA SIDDHANTI SRI SIDDALINGASWAMYGALU : A collection of Articles. Published by N. Marishamachar, Registrar, Karnataka Shilpakala Academy, 1st Floor, Kannada Bhavana, J. C. Road, Bangalore - 560 002

First Edition : 1999

Pages : vi+42+20 Pages Photos

Price : **Rs. 50-00**

Cover Design : N.M.C.

ಛಾಯಾಚಿತ್ರಗಳು : **ಎಲ್. ಶಿವಲಿಂಗಪ್ಪ**

ಕಲಾಕೃತಿಗಳ ಕೃಪೆ :
ಕರ್ನಾಟಕ ಪ್ರಾಚ್ಯ ವಸ್ತುಸಂಗ್ರಹಾಲಯ, ಮೈಸೂರು
ಎನ್. ಶಿವಾನಂದ್, ಮೈಸೂರು

ಸೂಚನೆ : ಈ ಪುಸ್ತಕದಲ್ಲಿರುವ ಲೇಖನಗಳ ಅಭಿಪ್ರಾಯಗಳು ಲೇಖಕರದೇ ಹೊರತು, ಅಕಾಡೆಮಿಯ ಅಭಿಪ್ರಾಯಗಳಲ್ಲ

Printed at :
ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
Chamarajpet
Bangalore - 560 018
6613123, 6618752

ಮೊದಲ ಮಾತು

ಶಿಲ್ಪಕಲಾ ಸಾರ್ವಭೌಮರೆನಿಸಿದ್ದ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳು ನನಗೆ ಗುರುಗಳಾಗಿದ್ದವರು. ಶಿಲ್ಪ, ಚಿತ್ರ ಕಲಾವಿದರಾಗಿ, ಗುರುಕುಲ, ಧಾರ್ಮಿಕ ಸಾಹಿತ್ಯ, ರಾಜರ್ಷಿಗಳಾಗಿದ್ದರಲ್ಲದೆ, ಮಹಾನ್ ಸಾಧಕ ಶಕ್ತಿಯಾಗಿದ್ದರು. ಸ್ವಾಮಿಗಳು ಜಗದ್ಗುರು ಕರಸ್ಥಳ ನಾಗಲಿಂಗ ಸ್ವಾಮಿಗಳ ಮಠದ ಪೀಠಾದೀಶರಾಗಿ, ಮಾನವ ಜಾಗೃತಿಗೆ ಮತ್ತು ಲೋಕ ಕಲ್ಯಾಣಕ್ಕಾಗಿ ದುಡಿದವರು. ತಮ್ಮ ಕಲಾ ನೈಪುಣ್ಯತೆಯಿಂದ ಶಿಲ್ಪ ಮತ್ತು ಚಿತ್ರಕಲಾ ಕೀರ್ತಿಯನ್ನು ವಿಶ್ವವ್ಯಾಪ್ತಿಯಾಗಿಸಿ, ಲೋಕ ವಿಖ್ಯಾತರಾಗಿದ್ದರು.

ಮೈಸೂರಿನ ರಾಮಾನುಜ ರಸ್ತೆಯು ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳ ಕಾರ್ಯಕ್ಷೇತ್ರವಾಗಿತ್ತು ಮತ್ತು ಶಿಲ್ಪ, ಚಿತ್ರಕಲೆಯ ನೆಲೆಬೀಡಾಗಿತ್ತು. ಮೈಸೂರಿನ ಕಲಾರಸಿಕರಿಗೆ ಇಲ್ಲಿನ ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲಂ, ಶ್ರೀ ಕಾಮಕಾಮೇಶ್ವರಿ ದೇವಾಲಯ, ಜಗದ್ಗುರು ಕರಸ್ಥಲ ನಾಗಲಿಂಗಸ್ವಾಮಿಗಳ ಮಠ ಇವುಗಳೆಲ್ಲಾ ಸ್ವಾಮಿಗಳ ತಪಸ್ಸಿನ ಫಲವಾಗಿತ್ತು. ಇವರು ಪರಂಪರಾನುಗತರಾಗಿ ಬಂದ ಶಿಲ್ಪಕಲಾ ಧುರೀಣರ ವಂಶಜರು. ಇವರ ವಂಶಜರು ವಿಜಯನಗರದ ಶಿಲ್ಪಕಲಾ ಪೀಳಿಗೆಯವರು. ವಿಜಯನಗರವು ಅವಸಾನವಾದ ನಂತರ ಇವರ ಹಿರಿಯರು ಮೈಸೂರು ಜಿಲ್ಲೆಯ ಕೊಳ್ಳೇಗಾಲದಲ್ಲಿ ಬಂದು ನೆಲಸಿದರು. ಅನಂತರ ಸ್ವಾಮಿಗಳು ಮೈಸೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು.

ಕರ್ನಾಟಕದಲ್ಲಿ ಶಿಲ್ಪ ಸಿದ್ಧಲಿಂಗಸ್ವಾಮಿಗಳು ರಚಿಸಿದ ಶಿಲ್ಪ, ಚಿತ್ರಗಳು ಅತ್ಯಂತ ಪ್ರಸಿದ್ಧವಾಗಿದ್ದರೂ, ಕಲಾ ಕ್ಷೇತ್ರದಲ್ಲಿ ಅವರಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲವೆಂದೇ ನನ್ನ ಅಭಿಪ್ರಾಯ. ಇದನ್ನು ಗಮನದಲ್ಲಿಟ್ಟುಕೊಂಡು, ಅವರ ಆಪ್ತರಿಂದ ಕೆಲವು ಲೇಖನಗಳನ್ನು ಬರೆಸಿ, ಪುಸ್ತಕವನ್ನು ಪ್ರಕಟಿಸಲಾಗಿದೆ. ಈ ಪುಸ್ತಕದಲ್ಲಿ ಲೇಖನಗಳನ್ನು ಬರೆದ ಶ್ರೀ ಪುಟ್ಟಣ್ಣಾಚಾರ್ ಮತ್ತು ನಾನು ಸ್ವಾಮಿಗಳ ಶಿಷ್ಯರಾಗಿ, ಬಹಳ ಹತ್ತಿರದಿಂದ ಬಲ್ಲವರು. ಶ್ರೀ ಎಲ್. ಶಿವಲಿಂಗಪ್ಪನವರು ಸಹ ಬಹಳ ದೀರ್ಘವಾಗಿ ಸ್ವಾಮಿಗಳ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಿ, ಹಲವು ಮಹತ್ತರವಾದ ವಿಷಯಗಳನ್ನು ಬರೆದಿದ್ದಾರೆ ಮತ್ತು ಸ್ವಾಮಿಯವರು ರಚಿಸಿದ, ಶಿಲ್ಪ ಮತ್ತು ಚಿತ್ರಗಳ ಛಾಯಾ ಚಿತ್ರಗಳನ್ನು ತೆಗೆದಿದ್ದಾರೆ. ಅದರಂತೆ ಈ ಪುಸ್ತಕದಲ್ಲಿ ಲೇಖನವನ್ನು ಬರೆದು, ಪುಸ್ತಕದ ಸಂಪಾದಕರಾಗಿ ಕೆಲಸ ಮಾಡಿದ, ನಮ್ಮ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎನ್. ಮರಿಶಾಮಾಚಾರ್, ಎಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುವೆ. ಈ ಪುಸ್ತಕದಲ್ಲಿ ಕೆಲವು ಕಲಾ ಕೃತಿಗಳ ಛಾಯಾಚಿತ್ರಗಳನ್ನು ಪುಸ್ತಕದಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿದ ನಿರ್ದೇಶಕರು, ಪ್ರಾಚ್ಯ ವಸ್ತುಸಂಗ್ರಹಾಲಯ ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳ ಮೊಮ್ಮಗ ಶ್ರೀ ಎನ್. ಶಿವಾನಂದ್ ಅವರಿಗೆ ಅಕಾಡೆಮಿ ವಂದನೆಗಳನ್ನು ಸಲ್ಲಿಸುತ್ತದೆ.

ನಾನು ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷನಾಗಿರುವ ಸಮಯದಲ್ಲಿ ಈ ಪುಸ್ತಕ ಪ್ರಕಟವಾಗಿರುವುದು ನನ್ನ ಭಾಗ್ಯವೆಂದೇ ತಿಳಿಯುವೆ. ಈ ಪುಸ್ತಕದಲ್ಲಿ ಹಲವು ವರ್ಣಚಿತ್ರಗಳನ್ನು ಮತ್ತು ಕೆಲವು ಅಪರೂಪದ ಕಪ್ಪು-ಬಿಳುಪು ಚಿತ್ರಗಳನ್ನು ಮುದ್ರಿಸಲಾಗಿದೆ. ಪುಸ್ತಕ ಪ್ರಕಟವಾಗಲು ಕಾರಣ ನಮ್ಮ ಅಕಾಡೆಮಿಯ ಸದಸ್ಯರು. ಅವರೆಲ್ಲರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ್ ಕುಮಾರ್ ಅವರಿಗೂ ವಂದನೆಗಳನ್ನು ಸಲ್ಲಿಸುವೆ, ನಮ್ಮ ನಾಡಿನ ಜನರು ನಮ್ಮ ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಸಿ. ಪರಮೇಶ್ವರಾಚಾರ್
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

೧೯೯೯, ಸೆಪ್ಟಂಬರ್
ಬೆಂಗಳೂರು

ಪರಿವಿಡಿ



ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು

ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರು

- ಎಲ್. ಶಿವಲಿಂಗಪ್ಪ

ಹದಿನೆಂಟು-ಹತ್ತೊಂಬತ್ತನೆ ಶತಮಾನ ಭಾರತ ಸ್ವಾತಂತ್ರ್ಯ ಚಳುವಳಿಯ ಪರ್ವಕಾಲ. ದೇಶಾದ್ಯಂತ ಪರದಾಸ್ಯದ ಬಿಡುಗಡೆಗಾಗಿ ಅವಿರತ ಹೋರಾಟ. ಮೈಸೂರು ಅದರಿಂದ ಹೊರತಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯ ಹಿಡಿತವಿದ್ದರೂ ಮೈಸೂರು ಒಡೆಯರ ಮನೆತನಕ್ಕ ರಾಜಗೌರವ ಸಲ್ಲಿಸುತ್ತಿದ್ದರು. ಇಲ್ಲಿ ದೈವಿಶಕ್ತಿ ಮನೆಮಾಡಿತ್ತು. ಅದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು (೧೮೯೫-೧೯೪೦) ಮಹಾದೈವಭಕ್ತರು ಪ್ರಜಾಚಿಂತಕರು, ಧರ್ಮದಿಂದ ಪ್ರಜಾಪರಿಪಾಲನೆ ಮಾಡುವುದೇ ಮುಖ್ಯ ಗುರಿಯಾಗಿತ್ತು. ಅದೊಂದು ರೀತಿಯ ಧಾರ್ಮಿಕ ಯುಗವು ಹೌದು. ಕಲಾಪೋಷಣೆಯ ಕೇಂದ್ರವೂ ಹೌದು. ತದನಂತರ ಶ್ರೀ ಜಯಚಾಮರಾಜ ಒಡೆಯರ ಅವರ ಆಳ್ವಿಕೆ ಕಾಲ (೧೯೪೦-೧೯೭೪) ಈ ಉಬಯ ಮಹಾರಾಜಗಳ ಆಳ್ವಿಕೆಯ ೭೯ ವರ್ಷಗಳಲ್ಲಿ ಕೊನೆಯ ನಾಲ್ಕು ವರ್ಷಗಳು ರಾಜಕೀಯ ಸ್ಥಿತ್ಯಂತರದಿಂದ ಕೂಡಿರುವುದನ್ನು ಬಿಟ್ಟರೇ ಉಳಿದ ೭೫ ವರ್ಷಗಳು ಮೈಸೂರು ಜಗದ್ವಿಖ್ಯಾತಿಯಾಗಲು, ಕಾರಣಿಭೂತವಾದ ವಾಸ್ತು, ಚಿತ್ರ, ಶಿಲ್ಪನಗರ ನಿರ್ಮಾಣ, ದೇವಾಲಯ ಸ್ಥಾಪನೆಗಳಂತವು ಅಡೆತಡೆಯಿಲ್ಲದೇ ನಡೆದವು. ಅದಕ್ಕೊಂದು ಮೂಲ ಕಾರಣವೂ ಇದೆ.

ರಾಜವಂಶಸ್ಥರ ಮದುವೆಯ ಸಂದರ್ಭದಲ್ಲಿ (೧೮೯೧) ಮರದಿಂದ ನಿರ್ಮಿತವಾದ ಅರಮನೆಯು ಅಗ್ನಿಗೆ ಆಹುತಿಯಾಯಿತು. ಆ ಸ್ಥಳದಲ್ಲಿಯೇ ನಿರ್ಮಿತವಾದದ್ದೆ ಈಗ ನಾವು ಕಾಣುವ ಸುಂದರ ಅರಮನೆ. ಹದಿನೈದು ವರ್ಷಕಾಲ (೧೮೯೭-೧೯೧೨) ನಡೆದ ವಾಸ್ತುನಿರ್ಮಾಣ ೭೪.೫೦ಮೀ ಉದ್ದ. ೪೭.೫೦ಮೀ ಅಗಲ. ೪೪.೧೦ ಮೀ ಎತ್ತರದ ವಿಸ್ತೀರ್ಣವುಳ್ಳದ್ದಾಗಿದ್ದು ಹಿಂದೂ ಹಾಗೂ ಇಸ್ಲಾಮಿಕ್ ಕಲಾಶೈಲಿಯಿಂದ ಕೂಡಿದ್ದಾಗಿದೆ. ಹೆನ್ರಿ ಇರ್ವಿನ್ ಎಂಬ ಪಾಶ್ಚಾತ್ಯ ವಾಸ್ತುಶಿಲ್ಪಿಯ ನೇತೃತ್ವದಲ್ಲಿ ಸಾವಿರಾರು ಸ್ಥಳೀಯ ತಂತ್ರಜ್ಞರು, ವಾಸ್ತುಕಾರರು. ಶಿಲ್ಪಿಗಳು ತಮ್ಮ ಶ್ರಮದ ದಾರೆಯೆರೆದರು.

ಕಟ್ಟಡ ನಿರ್ಮಾಣದ ನಂತರದಲ್ಲಿ ನಭೂತೋ, ನಭವಿಷ್ಯತಿ ಎಂಬಂತೆ ಚಿತ್ರ-ಶಿಲ್ಪಗಳ ರಚನೆಗೈದವು. ನೂರಾರು ಚಿತ್ರಗಾರರು ಶಿಲ್ಪಿಗಳು ಹಗಲಿರಳು ಶ್ರಮಿಸಿದರು. ಅವರ ಪೈಕಿ ಹೆಸರಿಸ ಬಹುದಾದವರಲ್ಲಿ ಶಿಲ್ಪ ಸಿದ್ಧಾಂತಿ ಶ್ರೀಸಿದ್ಧಲಿಂಗ ಸ್ವಾಮಿಗಳವರು, ಕೆ. ವೆಂಕಟಪ್ಪ, ಕೇಶವಯ್ಯ, ವೈ. ನಾಗರಾಜು, ವೈ. ಸುಬ್ರಮಣ್ಯರಾಜು, ಶಂಕರರಾಜು, ಎಸ್. ಎನ್. ಸ್ವಾಮಿ, ಎಸ್. ಆರ್. ಅಯ್ಯಂಗಾರ್. ನಮ್ಮೊಡನೆ ಇಂದು ಹಿರಿಯರಾಗಿರುವ ರಾಮನರಸಯ್ಯ ಪ್ರಮುಖರಾಗುತ್ತಾರೆ. ಅಲ್ಲದೇ ಕೇರಳ ಮೂಲ ದವರಾದ ರಾಜಾರವಿವರ್ಮ ಅವರು ಕೂಡಾ ತಮ್ಮ ಜೀವಿತಾವಧಿಯ ಅಂತ್ಯಕಾಲದಲ್ಲಿ ಮೈಸೂರಿ ನಲ್ಲಿಯೇ ಚಿತ್ರ ರಚಿಸಿದರೆಂದು (೧೯೦೬) ದಾಖಲೆಗಳಿಂದ ತಿಳಿದುಬರುತ್ತದೆ.

ಬಹುತೇಕ ಎಲ್ಲಾ ಕಲಾವಿದರ ಕಲಾನಿರ್ಮಾಣ, ಅರಮನೆಗೆ ಸಂಬಂಧಿಸಿದ ರಾಜಕುಟುಂಬಕ್ಕೆ ಪೂರಕವಾದವುಗಳೇ ಆಗಿದೆ. ಹಲವು ಹತ್ತು ಬಗೆಯ ರಾಜಪೋಷಾಕುದರಿಸಿದ, ಛತ್ರಿ, ಛಾಮರ, ಕುದುರೆ, ದಂಡುಗಳ ಸಾಲು ಸಾಲು, ಕರಿಕೋಟು, ಬಿಳಿಪೇಟ ದರಿಸಿದವರ, ಬಾಜಾ ಬಜಂತ್ರಿಗಳ, ಮೇಳದವರ, ವಿಲಾಸ ಸಂಭ್ರಮಗಳನ್ನು ಚಿತ್ರಿಸಿರುವುದೇ ಆಗಿದೆ. ಇದರಲ್ಲಿ ಬೆಳ್ಳಿಗಾಡಿ, ಆನೆಸಾರೋಟು, ಪಟ್ಟದ ಆನೆ, ಕುದುರೆಗಳು, ಹೀಗೆ ಒಂದೇ ಎರಡೇ ದಸರಾ ಮೆರವಣಿಗೆಯ ಚಿತ್ರಾವಳಿಗಳನ್ನೇ ಬರೆದವರು ಜಾಸ್ತಿ. ಅಂದಿನ ದಸರಾ ಇಲದಿಲ್ಲವಾದರೂ ಗತ ವೈಭವವನ್ನು ದೃಶ್ಯದ ಮೂಲಕವಾದರೂ ನೋಡಲಿಕ್ಕೆ ಸಹಾಯಕವಾಗಿವೆ.

ಇವೆಲ್ಲವುಗಳಿಗಿಂತ ಭಿನ್ನವಾದ ರೀತಿಯಲ್ಲಿ ರಚಿಸಿದವರಲ್ಲಿ ಶಿಲ್ಪಸಿದ್ಧಾಂತಿ ಶ್ರೀಸಿದ್ಧಲಿಂಗ ಸ್ವಾಮಿಗಳವರು ಅಗ್ರ ಗಣ್ಯರಾಗುತ್ತಾರೆ. ಇವರ ಚಿತ್ರಗಳು ರಾಜತ್ವವನ್ನು ಮೀರಿ ದೈವತ್ವಕ್ಕೆ ಸಂಬಂದಿಸಿದವು. ರಾಜಲೀಲೆ ಮುಖ್ಯವೆನಿಸುವುದಿಲ್ಲ ಇವರಿಗೆ. ಪ್ರಕೃತಿಯ ಸಕಲ ಚರಾಚರಗಳಿಗೆ ಉತ್ಪತ್ತಿಕಾರವಾದ ಅಗೋಚರ, ಅಗಮ್ಯ ಸ್ವರೂಪವಾದ ದೈವಲೀಲೆ ಮುಖ್ಯವೆನಿಸುತ್ತದೆ.

ಭಾರತದ ಭವ್ಯ ಪರಿಕಲ್ಪನೆಯನ್ನು ಮನಸ್ಸಲ್ಲಿ ಮೂಡಿಸುವಂತಹ ಪೌರಾಣಿಕ ಕಲಾಪ್ರಸಂಗಗಳು ಶಾಬ್ಧಿಕರೂಪದಲ್ಲಿವೆ, ಕೆಲವು ಗ್ರಂಥಸ್ಥವಾಗಿವೆ. ಈ ಎಲ್ಲಾ ಸೃಷ್ಟಿಗಳ ಮೂಲ ಸ್ವರೂಪವಾದ ಶ್ರೀ ವಿಶ್ವಕರ್ಮ ಆದಿದೇವತೆಯ ಬಗ್ಗೆ ಶ್ರೀ ಸಿದ್ದಲಿಂಗ ಸ್ವಾಮಿಗಳ

ಅಧ್ಯಯನ, ಅಧ್ಯಾಪನ, ಅನುಷ್ಠಾನಗಳು ಅನವರತ ಸಾಗಿ, ದೈವ ಸಾಕ್ಷಾತ್ಕಾರಗೊಳಿಸಿಕೊಳ್ಳುವಲ್ಲಿ ಸಾಫಲ್ಯಕಂಡಿವೆ, ಸಾಕಾರ ಗೊಂಡಿವೆ. ಸ್ವಾಮಿತ್ವದ ಸಾರ್ವಭೌಮರಾಗಿ ಸಿದ್ದಿಯನ್ನು ಪಡೆದು, ರಾಜಗುರುವಾದರು, ದೀಕ್ಷೆಯನ್ನನುಗ್ರಹಿಸಿದರು, ನೂರಾರುಜನ ಶಿಷ್ಯರನ್ನು ಪಡೆದರು. ಅಮರರಾದರು ಎಂಬುದು ಇತಿಹಾಸ ತಿಳಿಸುವ ಪಾಠ.

ಕನ್ನಡದ ಕಾವ್ಯರಚನೆಯಲ್ಲಿ ಕಾಂತಾಸಂಹಿತೆ, ಪ್ರಭುಸಂಹಿತೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ, ಶಿಲ್ಪಶಾಸ್ತ್ರ ಸಂಹಿತೆ ಯನ್ನು ಅಳವಡಿಸಿಕೊಂಡೇ ಕೃತಿ ರಚನೆ ಗೈದಿದ್ದಾರೆ. ಸ್ವಾಮೀಜಿ ಯವರ ಚಿತ್ರಗಳನ್ನಾಗಲೀ, ಶಿಲ್ಪವನ್ನಾಗಲೀ, ವಿಶ್ವಕರ್ಮ ಪ್ರಣೀತ ಶಾಸ್ತ್ರದಿಂದ ಹೊರಗಿಟ್ಟು ಶುದ್ಧಕಲೆಯನ್ನಾಗಿ ನೋಡುವುದು ಸಾಧ್ಯವಾಗಲಾರದು. ವಿಶೇಷವಾಗಿ ಕಾಶ್ಯಪ ಶಿಲ್ಪಶಾಸ್ತ್ರದ ಆಧಾರದ ಮೇಲೆ ಮೂರ್ತ ರೂಪಗೊಂಡಿವೆಯೆಂಬುದನ್ನು ಅಲ್ಲಗಳೆಯ ಲಾಗದು.

ಸ್ವಾಮಿಗಳವರ ಕಲಾಕೃತಿಗಳನ್ನು ಪ್ರಮುಖವಾಗಿ ನೋಡಲು ಲಭ್ಯವಾಗುವುದು ಜಗದ್ ವಿಖ್ಯಾತ ಮೈಸೂರು ಅರಮನೆಯ ದರ್ಬಾರ್ ಹಾಲಿನಲ್ಲಿ. ಇಡೀ ಅರಮನೆಯನ್ನು ಸುತ್ತಾಡಿ ಬಂದಾಗ ಆಗುವ ಅನುಭವಕ್ಕಿಂತ ಭಿನ್ನವಾದ ರೀತಿಯಲ್ಲಿ ಯಾವುದೋ ದೇವಾಲಯದ ಗರ್ಭಗುಡಿಯನ್ನು ಪ್ರವೇಶಿಸುತ್ತಿದ್ದೇವೆಯೋ, ಅಥವಾ ಸಾಕ್ಷಾತ್ ದೇವಿಯನ್ನೇ ದರ್ಶಿಸುತ್ತಿದ್ದೇವೋ ಎಂಬಂತೆ ಭಾಸವಾಗುತ್ತದೆ, ವೀಕ್ಷಕನನ್ನು ದಿಗ್ಮೂಢನನ್ನಾಗಿಸುತ್ತವೆ. ಅವನಿಗರಿವಿಲ್ಲದಂತೆಯೇ ಭಕ್ತಿಯಿಂದ ನಮಸ್ಕರಿಸುವಂತೆ ಮನಸ್ಸನ್ನು ಪ್ರೇರೇಪಿಸುತ್ತದೆ.

ಶಕ್ತಿ ಸಂಚಯವಾಗುವ ಮೂಲಕ ರಾಜ್ಯಾಡಳಿತ ಸಾಧ್ಯ ಎಂಬುದರ ಸಂಕೇತವೆಂಬಂತೆ ಸ್ತ್ರೀದೇವತೆಗಳ ಚಿತ್ರಗಳು ಸ್ವಾಮೀಜಿ ಯವರ ಹಸ್ತದಿಂದ ಮೂಡಿಬಂದಿವೆ. ನವದೇವತೆಗಳನ್ನು ಚಿತ್ರಿಸುವ ಉದ್ದೇಶವಿದ್ದರೂ ಸಾಧ್ಯವಾದದ್ದು ಅಷ್ಟದೇವತೆಗಳು ಮಾತ್ರ. ಮಹಾರಾಜರು ನಡೆಸುವ ಸಭೆ (ದರ್ಬಾರ್‌ಹಾಲ್) ಸಿದ್ದಲಿಂಗ ಸ್ವಾಮಿಗಳವರ ದೃಷ್ಟಿಯಲ್ಲಿ ಇಂದ್ರ ಸಭೆ. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಸಂಸ್ಕೃತ ವಾಣಿಯಂತೆ ಅಲ್ಲಿನ ಸಕಲವೂ ಸಜ್ಜುಗೊಳ್ಳ ಬೇಕೆಂಬ ಆ ಶಕ್ತಿತಳೆದು ಅರಮನೆಗೆ ದೈವಸ್ವರೂಪದ ಕಳೆ ತರಲು ಹಗಲಿರಳು ಶ್ರಮಿಸಿದರು. ಮಹಾರಾಜರು ಕೂಡಾ ಅವರಲ್ಲಿರುವ ವಿದ್ವತ್‌ಗೆ ಕಲಾ ನೈಪುಣ್ಯತೆಗೆ, ತಲೆಬಾಗಿ ತಲೆ ತಲಾಂತರಕ್ಕೂ ಶಾಶ್ವತವಾಗಿ ನೆಲೆಗೊಳ್ಳಬಹುದಾದ ಚಿತ್ರ, ಶಿಲ್ಪರಚನೆಗೆ ಮುಕ್ತ ಅವಕಾಶ ನೀಡಿದರು. ತತ್ಫಲವೇ ಸುಂದರ ಸಭಾಂಗಣದಲ್ಲಿ ಕಾಳಿಕಾದೇವಿ, ನವದುರ್ಗಾದೇವಿ, ಮಹಿಷಾಸುರ ಮರ್ಧಿನಿ, ಸರಸ್ವತಿ, ಲಕ್ಷ್ಮಿ, ಭುವನೇಶ್ವರಿ, ಗಾಯತ್ರಿ, ರಾಜ ರಾಜೇಶ್ವರಿ ಮೂರ್ತಗೊಂಡಿವೆ. ಒಂಬತ್ತನೇಯದಾದ ಮನೋನ್ಮಯಿ ಅನಾರೋಗ್ಯದ ಕಾರಣ ಪೂರ್ಣಗೊಳ್ಳಲಿಲ್ಲ. ಈ ತೈಲ ಚಿತ್ರಗಳು ಒಂದೊಂದು ವೈಶಿಷ್ಟಪೂರ್ಣವಾಗಿ, ಕಲಾತ್ಮಕವಾಗಿವೆ ಅನ್ನುವುದ ಕ್ಕಿಂತ ಹೆಚ್ಚಾಗಿ ಧ್ಯಾನಶ್ಲೋಕದ ಆಧಾರವಾಗಿ ರೂಪಗೊಂಡಿವೆ ಯಾದ್ದರಿಂದ ವೀಕ್ಷಕನು ಅವುಗಳನ್ನು ದರ್ಶಿಸುತ್ತಿದ್ದಂತೆ ಭಕ್ತಿ ಪರವಶನಾಗುತ್ತಾನೆ.

ಸ್ವಾಮಿಗಳ ದೃಷ್ಟಿಯಲ್ಲಿ ಧರ್ಮದೇವತೆ ಎಂಬುದು ಮನುಷ್ಯ. ಮನುಷ್ಯನಾಗಿ ಬಾಳಲು, ಅವನ ನಂಬಿಕೆ ಉಳಿಸಿ ಕೊಳ್ಳಲು ಸಾಧನ ಮಾರ್ಗ. ಒಂದೊಂದು ದೇವತೆಯದು ಒಂದೊಂದು ತೆರನಾದ ಹಿನ್ನಲೆಯುಳ್ಳ ಕಥಾರೂಪಕವಾಗಿದೆ. ಅವುಗಳ ಹಿನ್ನಲೆಯಲ್ಲಿಯೇ ರಚಿಸಿರುವ ಕಾಳಿಕಾಮಾತೆ (೧೯೪೬) ನೀಲವರ್ಣದ ದೇಹವನ್ನು ಹೊಂದಿದ್ದು, ಅಷ್ಟ ಬಾಹುಗಳಿಂದ ವಿವಿಧ ರೀತಿಯ ಶಸ್ತ್ರಾಯುಧಗಳನ್ನು, ಜೊತೆಗೆ ಶಂಖ ಚಕ್ರ ಪಡೆದಿರುವ ಹಸ್ತಗಳನ್ನು ಹೊಂದಿವೆ. ರಕ್ತವರ್ಣದ ಸೀರೆ, ಕ್ರೌರ್ಯದ ಸಂಕೇತವೆನಿಸಿದರೂ ನೀಲ ವರ್ಣದ ಮುಖವು ಮಾತ್ರ ಸೌಮ್ಯವೆನಿಸಿದೆ. ಎಡಪಾದವನ್ನು ಬಲತೊಡೆಯ ಮೇಲಿಟ್ಟು ಕೊಂಡಿರುವ ಸುಖಾಸೀನಮುದ್ರೆ. ಕುಳಿತಿರುವ ಪದ್ಮಪೀಠದ ತಳಭಾಗವನ್ನು ದೈತ್ಯಾಸುರರು ತಲೆ ಮೇಲೆ ಹೊತ್ತು ಕುಳಿತಂತೆ ಚಿತ್ರಿತವಾಗಿದೆ. ಕುಳಿತ ಪೀಠದ ಬೆನ್ನಿಗೆ ಅಂಟಿಕೊಂಡಂತೆ ಇರುವ ವಿಶಾಲವಾದ ಪ್ರಭಾವಳಿ, ಕಿರೀಟದಿಂದ ಸ್ವಲ್ಪ ಎತ್ತರಕ್ಕಿರುವ ವ್ಯಾಘ್ರಮುಖದಿಂದ ಮೇಲಕ್ಕೆ ಛತ್ರಿಯೊಂದು ಹರಡಿ ಕೊಂಡಿರುವುದನ್ನು ಕಾಣಬಹುದಾಗಿದೆ. ಹಿನ್ನಲೆಯಲ್ಲಿ ಮಕರ ವ್ಯಾಳಿ ಯನ್ನು ಹೊಂದಿರುವ ಕಾಷ್ಠಸ್ತಂಭದ್ವಯಗಳು ಚಿತ್ರಕ್ಕೆ ಹೆಚ್ಚಿನ ಶೋಭೆಯನ್ನು ತಂದಿವೆ.

ಕಾಳಿಕಾದೇವಿಯನ್ನು ದರ್ಶಿಸಿ ಪಕ್ಕಕ್ಕೆ ನಡೆದರೇ ನವ ದುರ್ಗಾದೇವಿ. ಈ ದೇವತೆಯು ಅಷ್ಟದಶ ಭುಜಗಳನ್ನು (೧೮) ಹೊಂದಿದ್ದು ವಿವಿದ ರೀತಿಯ ಆಯುಧಗಳನ್ನು ಹಿಡಿದು, ಸಸ್ಯಶ್ಯಾಮಲ ವರ್ಣದ ಪೀತಾಂಬರವನ್ನು ತೊಟ್ಟು ಕುಳಿತ ಸುಂದರ ಚಿತ್ರ. ಬಲಹಸ್ತವೊಂದರಲ್ಲಿ ಎರಡು ರುಂಡಗಳನ್ನು ಸಿಕ್ಕಿಸಿಕೊಂಡ ಪಾಶವೊಂದನ್ನೇ ಪಿಡಿದಂತಿದೆ. ಹಾಗೆಯೇ ಎಡಹಸ್ತವೊಂದರಲ್ಲಿ ದುಷ್ಟನೋರ್ವನ ಶಿರವಂ ಕಡಿದು ಪಿಡಿದಂತೆ ತೋರ್ವ ಹಸ್ತ ಕುಳಿತಿರುವ ಕಮಲ ಪೀಠವನ್ನು ಚತುರ ದಿಕ್ಕುಗಳಲ್ಲಿಯೂ ಆನೆಯು ಹೊತ್ತು ಕುಳಿತಂತ್ತಿದೆ. ಹಾಗೆಯೇ ದುರ್ಗೆಯು ಕುಳಿತ ಆಸನದ ಅಕ್ಕಪಕ್ಕಗಳಲ್ಲಿ ಈರ್ವರೂ ರೆಕ್ಕೆಗಳನ್ನು ಹೊಂದಿರುವ ಕಿನ್ನರ ಕಿಂ-ಪುರುಷ ದೇವತೆಗಳು ಕೈಮುಗಿದು ಅಂಜಲೀ ಬದ್ಧರಾಗಿ ಯಾನಿಕ ಕಿರುಚಿತ್ರ, ಮೂಲೆಗಳಿಗೆ ಹೊಂದಿ ಕೊಂಡಂತಿದೆ.

ಇಲ್ಲಿನ ಮತ್ತೊಂದು ವಿಶೇಷವೆಂದರೇ ಈ ನವದುರ್ಗಿಗೆ ಈರ್ವರೂ ಛಾಮರದಾರಿಣಿಯರು, ಓರ್ವರು ಎಡಗೈಯಲ್ಲಿ,

ಮತ್ತೋರ್ವರು ಬಲಗೈಯಲ್ಲಿ ನವಿಲುಗರಿಯ ಮೂಲಕ ಗಾಳಿಯನ್ನು ಬೀಸುವಂತೆ ಚಾಮರಧಾರಿಣಿಯರು ದ್ವಿಭಂಗ ಲಕ್ಷಣದ ಚಿತ್ರ. ಇಡೀ ಕಲಾಕೃತಿಯ ಒಟ್ಟಂದಕ್ಕೆ ಪೂರಕವಾಗಿವೆ, ಪ್ರೇರಕವಾಗಿವೆ. ನವದುರ್ಗಾದೇವಿಯು ಕುಳಿತ ಪೀಠದ ಹಿನ್ನಲೆಯಲ್ಲಿ ರಚಿತವಾಗಿರುವ ಮಂಟಪ ಅದಕ್ಕೆ ಹೊಂದಿಕೊಂಡಂತಿರುವ ಸ್ತಂಭಾಗಳಾಗಲೀ, ಕಮಾನುಗಳಾಗಲೀ, ಬೇರೆಯವುಗಳಿಗಿಂತ ಭಿನ್ನವಾಗಿವೆ. ಕಂಭದ ಮೇಲ್ಭಾಗದಲ್ಲಿ ಮಕರ ವ್ಯಾಳಿಗೆ ಹೊಂದಿ ಕೊಂಡಂತೆ ಕಮಾನು ಗಳಿಂದ ಕೂಡಿದ್ದು, ಅವುಗಳ ಮಧ್ಯದಲ್ಲಿ ಒಂದೊಂದು ಕಿರು ಮಂಟಪವಿದೆ. ಅದರೊಳಗೊಂದು ದೇವತಾ ಮೂರ್ತಿ. ಈ ತೆರನಾದ ಮಂಟಪಗಳ ರಚನಾ ವಿಧಾನವನ್ನು ಜೈನ ಕಲಾಶಿಲ್ಪ ಗಳಲ್ಲಿ ಕಾಣಬಹುದಾಗಿದೆ. ಶ್ವೇತವರ್ಣದ ಬಳಕೆ ಹೆಚ್ಚಿನ ಪ್ರಮಾಣ ದಲ್ಲಿದ್ದು ಅಮೃತ ಶಿಲೆಯ ಮಂಟಪವೆಂಬಂತೆ ಭಾಸವಾಗುತ್ತದೆ. ಅಲ್ಲಿರುವ ಎಲ್ಲಾ ದೇವತೆಗಳಿಗಿಂತ ಹೆಚ್ಚಿನ ರೀತಿಯ ಬಾಹುಗಳಿಂದ ಕೂಡಿದ ನವದುರ್ಗೆಗೆ ನಮಿಸಿ ಮುಂದೆ ನಾಲ್ಕು ಹೆಜ್ಜೆ ಇಟ್ಟರೇ ಕಾಣುವುದೇ ಮಹಿಷಾಸುರ ಮರ್ಧಿನಿ. ಇಂತಹವುದೇ ನವದುರ್ಗಾ ದೇವಿಯ ವಿಗ್ರಹವನ್ನು ಶ್ರೀಮನ್ ಮಹಾರಾಜರ ಅಪೇಕ್ಷೆ ಮೇರೆಗೆ ಸ್ವಾಮೀಜಿಯವರು ಚಿನ್ನದಲ್ಲಿ ಮಾಡಿಕೊಟ್ಟು ನಿತ್ಯಪೂಜೆಗೆ ಅನುವು ಮಾಡಿಕೊಟ್ಟರೆಂದು ತಿಳಿದುಬರುತ್ತದೆ.

ಮೈಸೂರು ಅರಸರ ಮನೆದೇವತೆ ಚಾಮುಂಡೇಶ್ವರಿ, ಮಹಿಷಮರ್ಧಿನಿ (೧೯೩೫) ಚಿತ್ರದ ವಿಶೇಷವೆಂದರೇ ದೇವತೆ ಯಾವ ಪೀಠದ ಮೇಲೂ ಕುಳಿತಿಲ್ಲ. ಇದೊಂದು ರೀತಿ ಕಾರ್ಯನಿರತ ಚಿತ್ರ (Action Figure) ಸಿಂಹಕ್ಕೆ ಒರಗಿ ನಿಂತಂತಿದೆ. ಮನುಷ್ಯದೇಹ ಎಮ್ಮೆಯ ತಲೆ ಕೈಯಲ್ಲಿ ಮಚ್ಚನ್ನು ಹಿಡಿದಿರುವ ರಾಕ್ಷಸನಿದ್ದು, ಮಹಿಷಮರ್ಧಿನಿಯ ಬಲಗಾಲು ರಾಕ್ಷಸನ ದೇಹವನ್ನು ತುಳಿದಿದ್ದರೇ, ಎಡಗಾಲು ತಲೆಯನ್ನು ಮೆಟ್ಟಿನಿಂತಂತಿದೆ. ಅಷ್ಟಭುಜಗಳನ್ನು ಹೊಂದಿದ ದೇವಿಯ ಬಲದಲ್ಲಿರುವ ನಾಲ್ಕು ಕೈಗಳಲ್ಲಿ ಕತ್ತಿ, ಚಕ್ರ ತ್ರಿಶೂಲವನ್ನು ಹಿಡಿದಿದ್ದರೇ, ಒಂದು ಹಸ್ತ ಮಾತ್ರ ಭಿನ್ನವಾಗಿದ್ದು ಇದಕ್ಕೆ ಯಾವುದೇ ಆಯುಧವಿಲ್ಲದಿದ್ದರೂ ಎಚ್ಚರವಾಗಿರಿ ದುಷ್ಟರಿರಾ ಎಂಬಂತೆ ತೋರುವ ಹಸ್ತಮುದ್ರಿಕೆ ಯುಳ್ಳದ್ದಾಗಿದೆ. ಎಡಭಾಗದಲ್ಲಿ ಒಂಟಿಶೂಲ, ಗುರಾಣಿ, ಶಂಖ, ಬಿಲ್ಲನ್ನು ಹಿಡಿದಿದ್ದು ದುಷ್ಟ ಸಂಹಾರ ಶಿಷ್ಟ ಪರಿಪಾಲನೆ ಮೂಲಕ ನಾಡಿನ ಜನತೆಗೆ ನೆಮ್ಮದಿ ತರುವಂತೆ ತೋರುವ ಈ ಚಿತ್ರದ ಮುಖದಲ್ಲಿ ಯಾವುದೇ ತೆರನಾದ ಕೋಪ, ಭಯಚ್ಛಾದಿತ ಭಾವನೆಗಳಿಲ್ಲ. ಅತ್ಯಂತ ಸಹಜವಾಗಿ ತೋರುವ ಪ್ರಶಾಂತತೆಯ ಕೋಲ್ಮುಖವುಳ್ಳದ್ದಾಗಿದೆ. ಮಹಿಷಮರ್ಧಿನಿಯ ಮುಖ್ಯವಾಹನ ವಾದ ಸಿಂಹದ ಕಲಾರಚನೆಯನ್ನೆ ಸ್ವಾಮಿಗಳು ಅತ್ಯಂತ ಸಹಜವಾಗಿ ನಿಜವಾದ ಸಿಂಹವೇನೋ ಎಂಬ ಭ್ರಮೆ ಹುಟ್ಟಿಸಿರು ವಂತಹ ವರ್ಣವಿನ್ಯಾಸಗೊಳಿಸಿದ್ದಾರೆ. ಮಹಿಷಿಯು ತೊಟ್ಟ ಸೀರೆ ರಕ್ತವರ್ಣದ್ದಾಗಿ ನೀಲಿ ಕುಪ್ಪಸ ಯುಕ್ತವಾಗಿದ್ದು ಶರೀರವು ಸಹಜ ವರ್ಣವುಳ್ಳದ್ದಾಗಿದೆ. ಚಿತ್ರದ ಹಿನ್ನಲೆ ಒಂದೆಡೆ ಜಲಪಾತ, ಕಾನನದ ಕಗ್ಗತ್ತಲೆಯಲ್ಲಿ ಕಾಣುವ ಹಸಿರುಮರಗಳ ರಮ್ಯನೋಟ. ಮಹಿಷಾಸುರ ಬಿದ್ಧ ತಳಭಾಗ ಮಂದವರ್ಣಗಳಿಂದ ಕೂಡ್ದಿದು ಸಂಜೆಯ ಇಳಿಹೊತ್ತನ್ನು ಸೂಚಿಸುವಂತಹ ಅಪೂರ್ವ ಚಿತ್ರವಿದಾಗಿದೆ.

ಮಹಿಷಿಯನ್ನು ಮುದದಿಂದ ನೋಡಿ ಮುನ್ನಡೆದರೆ ಕಾಣುವುದೇ ಸರಸ್ವತಿ ಮತ್ತು ಲಕ್ಷ್ಮಿಯರ ಚಿತ್ರ. (೧೯೪೨) ರಾಜ್ಯವಾಗಲೀ, ರಾಜನಾಗಲೀ, ವ್ಯಕ್ತಿಯಾಗಲೀ, ವ್ಯಕ್ತಿತ್ವವಾಗಲಿ ಬೆಳೆಯಬೇಕಾದರೇ ಬುದ್ಧಿಯಬಲ ಮತ್ತು ಆರ್ಥಿಕಬಲ ಅತ್ಯಗತ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇವೆರಡರ ಆದಿದೇವತೆಗಳಾದ ಸರಸ್ವತಿ ಮತ್ತು ಲಕ್ಷ್ಮಿಯರ ಚಿತ್ರವನ್ನು ಸ್ವಾಮಿಗಳವರು ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ನೋಡಿದರೇ ಮತ್ತೊಮ್ಮೆ, ಮಗದೊಮ್ಮೆ ನೋಡಬೇಕೆನ್ನುವ ಈ ಚಿತ್ರಗಳನ್ನು ಇದುವರೆಗೆ ಪ್ರಕಟವಾಗಿರುವ ಯಾವ ಚಿತ್ರಪಟದಲ್ಲಿಯೂ (Calender) ಕಾಣಲಾರಿರಿ. ಇದೊಂದು ಅಪರೂಪದ ಧ್ಯಾನ ಶ್ಲೋಕದಿಂದ ಕೂಡಿದ ಚಿತ್ರವಾಗಿದೆ.

ಈ ಎರಡು ಚಿತ್ರಗಳು ಅಗಲದಲ್ಲಿ ಕಡಿಮೆ ಇದ್ದು ಎತ್ತರದಲ್ಲಿ ಎಲ್ಲಾ ಚಿತ್ರಗಳಂತೆ ಸರಿಸಮನಾಗಿದೆ. ಬಹುಶಃ ಸಭಾಂಗಣದಲ್ಲಿ ನಿರ್ಮಿಸಿದ ಕಮಾನುಳ್ಳ ಕಿರುಗೂಡಿಗೆ ಹೊಂದಾಣಿಕೆ ಆಗುವಂತೆ ಚಿತ್ರಿಸಿರಬಹುದು. ತ್ರಿಭಂಗ ಲಕ್ಷಣದಿಂದ ನಿಂತಿರುವ ಸರಸ್ವತಿ ಲಕ್ಷ್ಮಿಯರು ಕ್ರಮವಾಗಿ ಶ್ವೇತ ಮತ್ತು ಹಳದಿ ವಸ್ತ್ರದಾರಿಣಿಯರಾಗಿ ಕಂಗೊಳಿಸುತ್ತಾರೆ. ಆ ತುಂಬು ವಸ್ತ್ರವಾದ ಸೀರೆಯುಡಿಗೆಗಳು ನೆರಿಗೆ, ವಸ್ತ್ರವಿನ್ಯಾಸದ ವೈಖರಿ, ನಿಂತನಿಲವು ಮಂದಸ್ಮಿತ ಮುಖಕಮಲ ಆಕರ್ಷಿಸುತ್ತವೆ.

ಸರಸ್ವತಿಯ ಚಿತ್ರದ ಹಿನ್ನೆಲೆ ವಿವಿಧ ಕೋನಗಳಿಂದ ಕೂಡಿದ ಉತ್ತಮ ವಾಸ್ತುವಿನ್ಯಾಸವನ್ನೊಂದಿದೆ. ಶೀತಲ ವರ್ಣಗಳ ಬಳಕೆ ಮೂಲಕ ಹಿನ್ನಲೆ ಮಬ್ಬುಗತ್ತಲೆಯಂತಿದ್ದರೂ ಆ ವರ್ಣಗಳಲ್ಲಿಯೇ ತೋರಿಸಿರುವ ದುಂಡುತನ ಉಬ್ಬು ತಗ್ಗು, ಏರಿಳಿಕೆ, ಬೆಳಕು ನೆರಳುಗಳ ಅತ್ಯಂತ ತೆಳುಛಾಯೆ ಸ್ವಾಮಿಗಳವರ ಕಲಾಪ್ರೌಢಿಮೆಗೆ ಸಾಕ್ಷಿಭೂತವಾಗಿವೆ. ಚತುರ ಬಾಹುಗಳಿಂದ ಕೂಡಿದ ಸರಸ್ವತಿ ಎಡಗೈಲಿ ಕಮಂಡಲ, ಶಾಸ್ತ್ರದಕಟ್ಟು, ಬಲಗೈಯಲ್ಲಿ ದರ್ಪಣ ಮತ್ತು ಜಪಸರ್ಪವನ್ನೊಂದಿದೆ.

ಮುದ್ದಾದ ಮುಖಲಕ್ಷಣ ನೀಳವಾದ ಮೂಗು, ಕೆಂದುಟಿ ಪ್ರಶಾಂತ ಮುಖಮುದ್ರೆ ವಿದ್ಯಾದಾಹಿಗಳಿಗೆ ಜ್ಞಾನಚಕ್ಷುವಿನ ಅನುಗ್ರಹ ತೋರುವಂತಹ ನೇತ್ರಗಳು, ಕಿವಿಯಲ್ಲಿ ತ್ರಿದಲ ಪುಷ್ಪದಂತೆ ನೇತಾಡುವ ಕಿವಿಯಾಭರಣ, ಎರಡು ಕಿವಿಯ ಮೇಲೂ ಒಂದೊಂದು ಕಮಲದ ಹೂ ಮುಡಿದಂತಿದ್ದು ಅಲ್ಲಿಂದ

ಇಳಿಬಿಟ್ಟಿರುವ ಪುಷ್ಪಮಾಲೆ ಮುಖಕ್ಕೆ ಹೆಚ್ಚಿನ ಅಂದ ನೀಡುತ್ತವೆ. ಕಿರೀಟವಂತೂ ಮುತ್ತು ರತ್ನಗಳಿಂದ ಅಲಂಕಾರಮಾಡಿರುವ ಹಾಗೆ ಕಾಣಿಸುತ್ತಿದ್ದು ಕಿರೀಟದ ಅಗ್ರಭಾಗ ಕಳಸಹೊಂದಿದೆ. ನವರತ್ನ ಖಚಿತವಾದ ಹಾರ ಧರಿಸಿದ್ದು ಒಂದು ಕೊರಳ ಕಂಠವನ್ನು ಬಳಸಿದ್ದರೇ ಮತ್ತೊಂದು ಎದೆಯ ಮೇಲ್ಭಾಗದಲ್ಲಿ ಕಾಣಿಸುವಂತಿದ್ದು ಎದೆಯಾವರಣಕ್ಕೆ ಶೋಭೆ ತಂದಿದೆ. ನಡುವಿನ ಮೇಲಿನ ಒಡ್ಯಾಣವಂತೂ ಬಿಳಿ ಸೀರೆಯ ಮೇಲೆ ಅತ್ಯಂತ ಸೊಗಸಾಗಿ ಕಾಣುತ್ತದೆ.

ಲಕ್ಷ್ಮಿಯ ಚಿತ್ರದ ಹಿನ್ನಲೆ ಸರಸ್ವತಿ ಚಿತ್ರದ ಹಿನ್ನಲೆಗಿಂತ ಭಿನ್ನವಾದದ್ದು. ಜಲಾವೃತವಾದ ತಾವರೆಯ ಕಮಲದ ಎಲೆ ಮೇಲೆ ನಿಂತಂತೆ ಚಿತ್ರಿಸಿದ್ದು ದಟ್ಟವಾದ ಹಸಿರು ಕಾನನದ ನಡುವೆ ಕಂಗೊಳಿಸುವ ಕಟ್ಟಡವೊಂದಿದೆ. ಅತ್ಯಂತ ಮಂದವರ್ಣ ಬಳಸಿದ್ದಾರೆ. ಚತುರ ಬಾಹುಗಳುಳ್ಳ ಲಕ್ಷ್ಮಿ ಎಡ ಮತ್ತು ಬಲ ಕೈಗಳಲ್ಲಿ ಕಮಲವನ್ನು ಹಿಡಿದಿದ್ದು ಉಳಿದೆರಡು ಹಸ್ತವು ಅಭಯ ಮತ್ತು ಡಮರುಗವನ್ನು ಹಿಡಿದಂತಿದೆ. ನೀಳಮುಖವನ್ನು ಹೊಂದಿರುವ ಲಕ್ಷ್ಮಿಯು ತ್ರಿನೇತ್ರದಾರಿಣಿಯಾಗಿ ಸರ್ವಾಭರಣ ಭೂಷಿತಳಾಗಿದ್ದಾಳೆ. ವೀಕ್ಷಕನು ತಾಯೇ ನಿನಗೆ ನಮನ. ನೀನಲ್ಲದೇ ಹೋದರೇ ನಾವೆಲ್ಲಿ ಎಂದು ಸರಸ್ವತಿ ಲಕ್ಷ್ಮಿಯರನ್ನು ನೆನೆದು ಒಂದೆರಡು ಹೆಜ್ಜೆ ಇಟ್ಟರೇ ಕಾಣುವುದೇ ಭುವನೇಶ್ವರಿ.

ಪದ್ಮಾಸನದಲ್ಲಿ ಕುಳಿತಿರುವ ಭುವನೇಶ್ವರಿಯು (೧೯೪೫) ಚತರು ಬಾಹುಗಳನ್ನು ಹೊಂದಿದ್ದು ಮೇಲಕ್ಕೆತ್ತಿರುವ ಎರಡು ಕೈಗಳಲ್ಲಿ ಶೂಲ ಮತ್ತು ಘಾಶದಂತಹ ಆಯುಧಗಳನ್ನು, ಮತ್ತೆರಡು ಕೈಗಳಲ್ಲಿ ಅಭಯ ಮತ್ತು ವರದ ಹಸ್ತವನ್ನೊಂದಿದೆ. ಶ್ವೇತ ಪೀತಾಂಬರ ದಾರಿಯಾದ ಭುವನೇಶ್ವರಿ ಮುಖವರ್ಣಕೆ ಸಹ ಶ್ವೇತಃಯಂತೆ ಬಣ್ಣವುಳ್ಳ ತ್ರಿನೇತ್ರದಾರಿಣಿ. ಕಮಲದ ಪೀಠದ ಮೇಲೆ ಕುಳಿತಿದ್ದು ಗಜಗಳೆರಡು ಹೊತ್ತುನಿಂತಂತಿದೆ. ಮುಖ್ಯವಾಗಿ ಭುವನೇಶ್ವರಿ ಕಿರೀಟವು ಎಲ್ಲಾ ಕಿರೀಟಗಳಿಗಿಂತ ವಿಶೇಷವಾದದ್ದು. ಪಂಚಕಳಸ ಗಳಿಂದ ಕೂಡಿದೆ. ಹಾಗೆಯೇ ಪ್ರಭಾವಳಿ ಸಹ ಎಲ್ಲವುಗಳಿಗಿಂತ ಭಿನ್ನವಾಗಿದ್ದು ಷೋಡಶ (೧೬) ಪರಿವಾರ ದೇವತೆಗಳು ಬಳ್ಳಿಯೊಳಗೆ ಬೆಸೆದಂತೆ ಚಿತ್ರ ರಚಿಸಿದ್ದಾರೆ. ಕುಳಿತಾಸನ ಹಿನ್ನಲೆಯಲ್ಲಿ ಸುಂದರ ಸಭಾಮಂಟವಿದ್ದು ಚಾಲುಕ್ಯಶೈಲಿಯ ಸ್ತಂಭಗಳೆರಡು ಅಪರೂಪದ ಕಲಾ ವಿನ್ಯಾಸವನ್ನೊಳಗೊಂಡಿದೆ. ಭುವನೇಶ್ವರಿ ಯನ್ನು ಬಂದವರೆಲ್ಲರೂ ದರ್ಶಿಸಿ ಪಕ್ಕಕ್ಕೆ ಹೊರಳಿದರೇ ಸಾಕು ಗಾಯತ್ರಿ ದರ್ಶನ.

ಗಾಯತ್ರಿಯು (೧೯೪೨) ಸ್ವಾಮಿಗಳು ರಚಿಸಿರುವ ಸ್ತ್ರೀದೇವತಾ ಚಿತ್ರಗಳಲ್ಲೇ ವಿಶೇಷವಾಗಿದ್ದು ಪಂಚಮುಖ ಮತ್ತು ದಶಬುಜಗಳನ್ನ ಹೊಂದಿರುವ ಏಕಮೇವ ಶರೀರಣೆ. ಗಾಯತ್ರಿಯ ಪಂಚಮುಖಗಳಿಗೂ ವಿವರ ವರ್ಣಗಳನ್ನು ಬಳಸಿದ್ದರೂ ಮುಖಹೋಲಿಕೆ ಮಾತ್ರ ಏಕ ಪ್ರಕಾರವಾಗಿದೆ. ನೀಲ ವರ್ಣದ ಸೀರೆಯನ್ನು ದರಿಸಿದ್ದು ಸುಖಾಸೀನ ಮುದ್ರೆಯಲ್ಲಿ ತಾವರೆಯ ಹೂವಿನ ಮೇಲೆ ಕುಳಿತಿರುವಂತಿದೆ. ಅತ್ಯಂತ ನೈಜ ಬಣ್ಣಗಳಿಂದ ಕೂಡಿದ ತಾವರೆಯು ಸರೋವರದ ಕೇಂದ್ರ ಸ್ಥಾನದಲ್ಲಿದ್ದು ಅಲ್ಲಲ್ಲಿ ಬೆಳೆದಿರುವ ತರುಲತೆ. ಬಳ್ಳಿಗಳು ಕಿರುತಾವರೆಯ ಮೊಗ್ಗುಗಳು ಸ್ವಚ್ಛಂದವಾಗಿ ಜಲದಲ್ಲಿ ಮಿಂದು ಮುನ್ನೆಡೆಯುವಂತೆ ತೇಲುತ್ತಿರುವ ಹಂಸ ಪಕ್ಷಿ ದ್ವಯಗಳು ಇರುವುದನ್ನು ಕಾಣುತ್ತೇವೆ. ಸರೋವರವೇ ನಭಕ್ಕೆ ಅಂಟಿಕೊಂಡಿದೆಯೋ ಏನೋ ಎಂಬಂತೆ ಚಿತ್ರಿತವಾಗಿರುವ ಮೋಡ ತುಂಬಿದ ಆಕಾಶ ಸರೋವರದ ದೂರಗಾಮಿತ್ವದ ವರ್ಣ ಸಂಯೋಜನೆ ಅತಿ ಸೊಗಸಿದೆ.

ಗುಂಗರು ಗುಂಗುರಾಕಾರವಾಗಿ ತೇಲಿಬರುವ ಮೋಡಗಳಲ್ಲಿ ಒಂದೆಡೆ ಬ್ರಹ್ಮನ ಮಡದಿ ಸರಸ್ವತಿ ಕಮಂಡಲದಾರಿಯಾಗಿ ಹಂಸತೂಲಿಕಾತಲ್ಪದಲ್ಲಿ ಕುಳಿತು ಬರುತ್ತಿದ್ದರೇ (ಬಲಕ್ಕೆ) ಮತ್ತೊಂದು ಭಾಗದಲ್ಲಿ (ಎಡಕ್ಕೆ) ಶಕ್ತಿಸ್ವರೂಪಿಣಿ ಪಾರ್ವತಿಯು ಚತುರಬುಜ ಗಳನ್ನು ಹೊಂದಿ ವೃಷಭವಾಹನರೂಡರಾಗಿ ಬಂದಂತಿದೆ. ಹಾಗೆಯೇ ಮದ್ಯಭಾಗದಲ್ಲಿ ಗರುಡವಾಹನೆಯಾಗಿ ಚತುರಬುಜ ವುಳ್ಳ ಲಕ್ಷ್ಮಿಯು ಆಗಮನವಾಗುತ್ತಿದೆ. ಒಟ್ಟಾರೆ ಗಾಯತ್ರಿಯ ಸ್ವರೂಪವನ್ನು ವೀಕ್ಷಿಸಿದಾಗ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣರಾದ ತ್ರಿಮೂರ್ತಿಗಳ ಮಡದಿಯರು ಶುಭ ಹಾರೈಸಿ ತಮ್ಮಲ್ಲಿರುವ ದಿವ್ಯಶಕ್ತಿಯನ್ನು ಅನುಗ್ರಹಿಸಿದಂತಿದೆ. ಹಿನ್ನಲೆಯ ನಿಸರ್ಗದ ರಮ್ಯನೋಟ ಪಾಶ್ಚಾತ್ಯ ಚಿತ್ರಕಲಾವಿದ ರೆಂಬ್ರಾಂಟ. ಕಾನ್‌ಸ್ಟೇಬಲ್‌ನ ಪ್ರಕೃತಿ ಚಿತ್ರದಂತೆ ತೋರುತ್ತದೆ.

ಸ್ವಾಮಿಗಳವರ ಶ್ರೇಷ್ಠ ಕೃತಿ ದರ್ಬಾರ್ ಹಾಲಿನಲ್ಲಿರುವ ಎಂಟನೇ ಚಿತ್ರ ರಾಜರಾಜೇಶ್ವರಿ, ಈ ಚಿತ್ರ ಕಲಾಸಾಧನೆಯ ಉತ್ತುಂಗತೆಯನ್ನು ಕಾಣಬಹುದಾಗಿದೆ. ಸುಖಾಸೀನ ಮುದ್ರೆಯಲ್ಲಿ ತೂಗುಯ್ಯಾಲೆ ಮೇಲೆ ಕುಳಿತಿರುವ ದೇವಿ ಚತುರ್ ಬಾಹುಗಳನ್ನು ಹೊಂದಿದ್ದು ಅಂಕುಶ (ಬಲ) ಪಾಶ (ಎಡ)ಗಳ ಜೊತೆಯಲ್ಲಿ ಮತ್ತೊಂದು ಬಲಗೈಯಲ್ಲಿ ಹೂವಿನ ದಂಡವಿದ್ದು ಅದರ ತುದಿಯಲ್ಲಿ ಕೆಂಗುಲಾಬಿ ಶ್ವೇತವರ್ಣದ ಅರಳಿದ ಮಲ್ಲಿಗೆಯ ಹೂವನ್ನು ಒಳ ಗೊಂಡಿದೆ. ಎಡಕೈಯಲ್ಲಿ ಹಿಡಿದಿರುವ ಕಬ್ಬು ನಿಜವಾದ ಕಬ್ಬನ್ನೇ ಇಟ್ಟಿರುವರೇನೋ ಎಂಬ ಭ್ರಮೆ ತರಿಸುವ ನೈಜವರ್ಣ ಯುಕ್ತವಾಗಿದೆ, ರಕ್ತವರ್ಣದ ಸೀರೆಗೆ ಸಸ್ಯಶ್ಯಾಮಲ ವರ್ಣದ ಕುಪ್ಪಸ, ಆಭರಣಗಳಂತೂ ಕೊರಳ ತುಂಬಾ ಅಲಂಕರಿಸಿವೆ. ತಲೆಯಲ್ಲಿ ದರಿಸಿರುವ ಕಿರೀಟದ ಎಡಭಾಗಕ್ಕೆ ಅರ್ಧ ಚಂದ್ರನ ದಾರಣೆಯಾಗಿದೆ.

ರಾಜರಾಜೇಶ್ವರಿ ಕುಳಿತ ಪೀಠದ ಹಿಂದೆ ಪವಡಿಸಿರುವ ಪರಮೇಶ್ವರನ ಚಿತ್ರವಿದೆ. ಪರಮೇಶ್ವರ ಒಂದು ಕೈಯಲ್ಲಿ ಹರೀಣ (ಜಿಂಕೆ) ಮತ್ತೊಂದು ಕೈಯನ್ನು ತಲೆಗೆ ಒತ್ತಿಕೊಂಡು ಶಾಂತಮುಖ

ಮುದ್ರೆಯಿಂದೊಡಗೂಡಿದ್ದಾನೆ. ನಂಜನ್ನು ಉಂಡ ನಂಜುಂಡ, ವಿಷವನ್ನು ಕುಡಿದ ವಿಷಕಂಠ ಇತ್ಯಾದಿ ಗುಣಗಳುಳ್ಳ ಶಿವನ ಚಿತ್ರಕ್ಕೆ ನೀಲ ಮತ್ತು ನೇರಳೆ ವರ್ಣವನ್ನು ಬಳಸಿರುವುದು ವಿಶಿಷ್ಟ ರೀತಿಯುಳ್ಳದ್ದಾಗಿದೆ.

ಶಿವ, ಶಕ್ತಿಯರು ಬೇರೆ ಬೇರೆಯಲ್ಲ, ಯಾವುದೂ ಹೆಚ್ಚಲ್ಲ, ಕಡಿಮೆಯಲ್ಲ, ಎಂಬುದರ ಸಂಕೇತವೋ ಏನೋ ಎಂಬಂತೆ ಶಿವನು ನಿರ್ಲಿಪ್ತನಾಗಿ ಅರೆಮುಚ್ಚಿದ ಕಣ್ಣಗಳಿಂದ ರಾಜರಾಜೇಶ್ವರಿಯ ಪಾದದ ಕಡೆಗೆ ನೋಡುತ್ತಿರುವನೋ ಅಥವಾ ಬಂದ ಭಕ್ತರ ಕಡೆಗೆ ನೋಡುತ್ತಿರುವನೋ ಎಂಬಂತೆ ಕಣ್ಗಳ ಕಂಗೊಳಿಸುವಿಕೆಯ ನೋಟವಿದೆ. ಈ ದೃಷ್ಟಿಯ ನೇತ್ರೋನ್ಮಿಲನ ವಿಧಾನವನ್ನು ನೋಡಿದರೇ ಪಾಶ್ಚಾತ್ಯ ಕಲಾವಿದ ಲಿಯೋನಾರ್ಡೊ ಡ. ವಿಂಚಿಯ ಮೊನೋಲಿಸಾ ಕೃತಿಯ ಕಣ್ಗಳ ಚಿಲವು ನೆನಪಿಗೆ ಬರುತ್ತದೆ. ಇಂತಹ ರಾಜರಾಜೇಶ್ವರಿಯ ಚಿತ್ರವು ಎಲ್ಲಿಯೂ ಕಂಡುಬರುವುದಿಲ್ಲ.

ರಾಜ ರಾಜೇಶ್ವರಿ ಹಿಂದೆ ಅರೆವೃತ್ತಾಕಾರವಿದ್ದು ಅದರ ಮೇಲೆ ವ್ಯಾಘ್ರವ್ಯಾಳಿಯ ಚಿತ್ರ ರಚಿಸಿದ್ದಾರೆ. ಸೌಮ್ಯಸ್ವರೂಪದ ಮುಖ, ತ್ರಿನೇತ್ರ ಹೊಂದಿದೆ. ಪೀಠದ ಆಸನ ಸೀರೆ ಜರಿ ಅಂಚು ಆಭರಣ ಕಿರೀಟ ಎಲ್ಲವೂ ಕುಶರಿ ಕೆಲಸದಿಂದ ಕೂಡಿದೆ. ತೂಗುಯ್ಯಾಲೆಯ ಸರಪಳಿಯಂತೂ ಅತ್ಯಂತ ನೈಜಯುಕ್ತವಾಗಿದ್ದು, ಮುಂಚಾಚಿದ ತೂಗುಯ್ಯಾಲೆಯ ಪಾದಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಚಿತ್ರವನ್ನಳವಡಿಸಿದ್ದಾರೆ. ನೆಲಹಾಸುವಿನ ಮೇಲೆ ಈರ್ವರೂ ಛಾಮರ ದಾರಿಯರು ದ್ವಿಭಂಗ ಲಕ್ಷಣದಲ್ಲಿ ನಿಂತಿದ್ದಾರೆ. ಇಲ್ಲಿ ಸರಸ್ವತಿ, ಲಕ್ಷ್ಮಿಯರೇ ಛಾಮರ ಬೀಸುತ್ತಿದ್ದಾರೆ. ಈ ಹಿಂದೆ ನೋಡಿದ ಸರಸ್ವತಿ, ಲಕ್ಷ್ಮಿಯರ ಚಿತ್ರದ ಮುಖ ಹೋಲಿಕೆ, ತೊಟ್ಟಿರುವ ವಸ್ತ್ರವಿನ್ಯಾಸಗಳು ಯಥಾವತ್ತಾಗಿರುವುದನ್ನು ಕಾಣಬಹುದಾಗಿದೆ. ಹಿನ್ನೆಲೆಯಲ್ಲಿ ಹೊಯ್ಸಳ ಮಾದರಿಯ ಕಲ್ಕಂಬಗಳೆರಡು ಚಿತ್ರಿಸಿದ್ದು ಮುನ್ನೆಲೆಯ ಚಿತ್ರಕ್ಕೆ ಭಾದಕವಾಗದಂತೆ ಅರೆಛಾಯೆಯ ವರ್ಣಸಂಯೋಜನೆ ಮಾಡಿರುವ ಪೂರ್ಣ ಪ್ರಮಾಣದ ಚಿತ್ರದ ಸಾಲಿನಲ್ಲಿ ಕೊನೆಯದಾಗಿದೆ.

ಸುಂದರ ಹಾಗೂ ಕಲಾತ್ಮಕ ಚೌಕಟ್ಟಿನೊಳಗೆ ಬಂದಿಸಿರುವ ಈ ತೈಲಚಿತ್ರದ ಅಡಿಯಲ್ಲಿ ಆಯಾಯ ದೇವತೆಗಳನ್ನು ಕುರಿತ ಧ್ಯಾನ ಶ್ಲೋಕವನ್ನು ಬರೆದಿದ್ದಾರೆ. ಅಧ್ಯಯನಾಶಕ್ತರಿಗೆ ಉಪಯುಕ್ತ ಮಾಹಿತಿಯೊದಗುವ ಈ ದೇವತೆಯರ ಚಿತ್ರಗಳಂ ದರ್ಶಿಸಿ ಮುಂದೆ ಸಾಗಿ ತಲೆ ಎತ್ತಿದರೇ ಸಾಕು ಅರಮನೆಯ ಸಭಾಭವನಕ್ಕೆ ಶೋಭೆ ತರುವ ಮೇಲ್ಛಾವಣಿಯ ಚಿತ್ರಗಳು. ಇದಕ್ಕೊಂದು ಇತಿಹಾಸವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಚಿತ್ರಗಳು. ಇದಕ್ಕೊಂದು ಇತಿಹಾಸವಿದೆ. ಅವರು ಭಾರತೀಯ ಸಂಸ್ಕೃತಿಗನುಗುಣವಾದ ಅದರಲ್ಲಿಯೂ ರಾಜಭವನಕ್ಕೆ ಸೂಕ್ತವಾದ ಚಿತ್ರವನ್ನು ಮೇಲ್ಛಾವಣಿಯಲ್ಲಿ ಬರೆಸಬೇಕೆಂದು ಚಿಂತಿಸಿ ಕಲಾವಿದರಿಗೆ, ಶಿಲ್ಪಿಗಳಿಗೆ ಕರೆ ನೀಡಿದರು. ಸೂಕ್ತ ಸಲಹೆ ಮತ್ತು ಮಾದರಿ ಚಿತ್ರದೊಡನೆ ಕಳಿಸಿಕೊಡಬೇಕೆಂದು ರಾಜಾಜ್ಞೆಯಾಯಿತು. ದೇಶ ವಿದೇಶಗಳಿಂದ ನೂರಾರು ಚಿತ್ರಗಳು, ಸಲಹೆಗಳು ಬಂದವು. ಅಂತಿಮವಾಗಿ ಸ್ವಾಮಿಗಳವರ ಸಲಹೆ ಮಾದರಿ ಚಿತ್ರಗಳೇ ಅಂಗೀಕಾರವಾದವು. ಆ ಸ್ಪರ್ಧೆಯ ಪ್ರಥಮ ಬಹುಮಾನ ಐದುಸಾವಿರ ರೂಪಾಯಿ ಮತ್ತು ಪಾರಿತೋಷಕವನ್ನೊಳಗೊಂಡಿತ್ತು.

ಸ್ವಾಮಿಗಳವರು ಇಂತಹ ಪಾರಿತೋಷಕಗಳಿಗಾಗಿ ಆಸೆಪಟ್ಟವರಲ್ಲ ಅವರಿಗೆ ರಾಜರ ಆಸ್ಥಾನಕ್ಕನುಗುಣವಾಗಿ ಸಾಕ್ಷಾತ್ ಇಂದ್ರಸಭೆಯಂತೆ ಅರಮನೆಯ ದರ್ಬಾರ್‌ಹಾಲನ್ನು ಕಲಾತ್ಮಕಗೊಳಿಸಬೇಕೆಂಬುದೇ ಪರಮ ಧ್ಯೆಯ. ಸಭಾಭವನದ ಮೇಲ್ಛಾವಣಿ ಏಳು ಅರೇವೃತ್ತಾಕಾರದ ಕಮಾನಿನಂತಿವೆ. ಅವುಗಳಿಗನುಗುಣವಾಗಿ ಸಪ್ತಲೋಕದ ಕಲ್ಪನೆ ಮೂಡಿಸಿ ಪುರಾಣ ಕತೆಗಳ ಹಂದರವನ್ನೆಣೆದು ಸುತ್ತಲೂ ಅತ್ಯಂತ ಮನೋಜ್ಞ ಚಿತ್ತಾವಳಿ (Design) ಯನ್ನು ರಚಿಸಿದ್ದರು. ಅದರಲ್ಲಿ ಮುಖ್ಯವಾಗಿ ಮಹಾರಾಜರು ಸಿಂಹಾಸನ ರೂಡರಾಗುತ್ತಿದ್ದ ಕೇಂದ್ರ ಭಾಗ ದಲ್ಲಿರುವ ಕಮಾನಿನಲ್ಲಿ ಮೇಲ್ಛಾವಣಿಯಲ್ಲಿ ಪತ್ನಿಸಹಿತವಾದ ಬ್ರಹ್ಮ, ವಿಷ್ಣು, ಮಹೇಶ್ವರರ ಮತ್ತು ಅರಸರ ಕುಲದೇವತೆ ಚಾಮುಂಡೇಶ್ವರಿನ್ನೊಳಗೊಂಡ ಚಿತ್ರಣವಿದೆ. ಅವುಗಳ ಸುತ್ತಲೂ ನಕಾಶೆಯಿದ್ದು ಅವುಗಳನ್ನು ಸಹ ಪುಷ್ಪಗುಚ್ಛ ಅರ್ಪಿಸುವ, ಘೋಷವಾದ್ಯ ನುಡಿಸುವ ದೇವ ದೇವತೆಯರ ಚಿತ್ರಣ ಕಾಣ ಬಹುದಾಗಿದೆ. ಅಂತೆಯೇ ಅದರ ಪಕ್ಕದಲ್ಲಿರುವ ಮೇಲ್ಛಾವಣಿಯಲ್ಲಿ ಶಿವನ ಒಡ್ಡೋಲಗದ ಚಿತ್ರವಿದೆ.

ಈ ಚಿತ್ರಗಳನ್ನು ಗಮನಿಸಿದಾಗ ಇದು ಸಿದ್ಧಲಿಂಗ ಸ್ವಾಮಿಗಳವರ ಕಲಾರಚನೆಯಂತೆ ಕಂಡುಬರುವುದಿಲ್ಲ. ಅಷ್ಟ ದೇವತೆಯರ ಕಲಾಚಾತುರ್ಯಕ್ಕೂ ಇವುಗಳಿಗೂ ಅಗಾದ ವ್ಯತ್ಯಾಸವಿದೆ. ಇವುಗಳನ್ನು ಶ್ರೀಸ್ವಾಮಿಗಳವರ ಸಲಹೆಯಂತೆ ಇತರ ಕಲಾವಿದರೂ ರಚಿಸಿರಬಹುದು. ಹೊಳಪು ಬಣ್ಣಗಳನ್ನೇ (Enamel) ಬಳಸಿದಂತೆ ತೋರುತ್ತದೆ. ಸ್ವಾಮಿಗಳವರು ಆ ದೇವತಾ ಮೂರ್ತಿಗಳ ಚಿತ್ರರಚನೆಯಲ್ಲಿಯೇ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡ ಕಾರಣ ಅದನ್ನು ಅವರ ಶಿಷ್ಯರು, ಸಹೋದರರು ಕೂಡಿ ಮಾಡಿದಂತಿದ್ದು ಅದರಲ್ಲಿ ಶ್ರೀ ಅಪ್ಪಾಜಿಸ್ವಾಮಿ ಮತ್ತು ಶ್ರೀ ನಾಗೇಂದ್ರಸ್ಥಪತಿಗಳವರು ಮುಖ್ಯರೆನಿಸುತ್ತಾರೆ. ಆ ಮೇಲ್ಛಾವಣಿಗೆ ಚೌಕಾಕಾರ ಹಲಗೆಗಳನ್ನು ಹೊಂದಿಸಿದಂತೆ ಇದ್ದು ಅವುಗಳ ಮೇಲೆ ಕಲಾರಚನೆಗೊಂಡಿದೆ. ಕೆಳಗೆ ಮೊದಲು ಸಿದ್ಧಪಡಿಸಿ, ಅನಂತರ ಅವುಗಳನ್ನು ಜೋಡಿಸಿರ ಬಹುದೆಂದು ಊಹಿಸಬಹುದಾಗಿದೆ.

ಅರಮನೆಯ ದರ್ಬಾರ್‌ಹಾಲ್‌ನಲ್ಲಿರುವ ಅಷ್ಟದೇವತೆಯರ ಚಿತ್ರಗಳಲ್ಲಿ ಎದ್ದು ಕಾಣುವ ಪ್ರಮುಖ ಅಂಶವೆಂದರೇ ಎಲ್ಲಾ

ದೇವತೆಗಳಿಗೆ ದರಿಸಿರುವ ಕಿರೀಟ ಮತ್ತು ಆಭರಣಗಳು ಎಷ್ಟು ವರ್ಣಿಸಿದರೂ ಸಾಲದು ಎಷ್ಟು ವೀಕ್ಷಿಸಿದರೂ ಸಾಲದು. ಒಂದರಂತೆ ಮತ್ತೊಂದು ಇಲ್ಲ. ಕಿರೀಟದಲ್ಲಿರುವ ವರ್ಣ ಸಂಯೋಜನೆ ಎಂತಹ ಭ್ರಮೆ ಹುಟ್ಟಿಸುತ್ತವೆಯೆಂದರೇ ಹರಳು ಗಳನ್ನೇ ಅದರಲ್ಲಿ ಮೆತ್ತಿರಬಹುದು. ಹೇಗಿದ್ದರೂ ರಾಜರ ಗೃಹವಲ್ಲವೆ, ಮುತ್ತು ರತ್ನಗಳಿಗೇನು ಕೊರತೆ ಎಂದು ವಿಚಾರ ಮಾಡಬಹುದು. ಖಂಡಿತವಾಗಿಯೂ ಯಾವ ಮುತ್ತು ಅಂಟಿಸಿಲ್ಲ ಆ ಕಲ್ಪನೆ ಬರುವಂತೆ ಅದು ಕೆಂಪೇ ಇರಲಿ, ನೀಲವೇ ಆಗಿರಲಿ, ಅಥವಾ ಗೋಮೇದಿಕ, ಪುಷ್ಪರಾಗ ಹರಳುಗಳಾಗಿರಲೀ ಅದರ ನೈಜವರ್ಣ ದುಂಡುತನ ಕಾಣಲು ಬಳಸಿರುವ ವರ್ಣಸಂಯೋಜನೆ ವಿಧಾನ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಜರೀ ಅಂಚಿನ ಸೀರೆ, ನಡುವಿಗೆ ದರಿಸಿದ ಒಡ್ಯಾಣ, ಕೈ, ಕಾಲು, ಪಾದಗಳಲ್ಲಿ ದರಿಸಿದ ವಿವಿಧ ಬಗೆಯ ಆಭರಣಗಳು ಅಷ್ಟೇ ಏಕೆ ಅವರುಗಳು ಹಿಡಿದಿರುವ ವಿವಿಧ ಬಗೆಯ ಆಯುಧಗಳು ಸಹ ಆಭರಣಯುಕ್ತ ವಾಗಿವೆಯೆಂಬಂತೆ ಕುಶರಿಕೆಲಸದಿಂದ ಕೂಡಿ, ಚಿಕಣಿ ಚಿತ್ರದಂತೆ ತೋರುತ್ತದೆ. ಹಾಗೆಯೇ ಪ್ರತಿದೇವತೆಗಳ ಶಿರೋ ಭಾಗದಲ್ಲಿ ತೋರ್ಪಡಿಸುವ ಪ್ರಭಾವಲಯ ಕೂಡಾ ಹಿತಮಿತವಾದ ವರ್ಣಸಂಯೋಜನೆಯಾಗಿದೆ.

ಸ್ವಾಮಿಗಳವರ ಯಾವ ಚಿತ್ರವೇ ಅಥವಾ ಶಿಲ್ಪವೇ ಆಗಲೀ, ನಿಶ್ಚಿತಗುರಿ ಇಟ್ಟುಕೊಂಡೇ ರಚಿತವಾದವು. ಬರೀ ಕ್ಯಾನ್ವಾಸ್ ತುಂಬಿಸುವಂತಹದಲ್ಲ. ಇಡೀ ಕ್ಯಾನ್ವಾಸ್ ಪರಿಪೂರ್ಣವಾಗಿ ಮುಖ್ಯ ಕೃತಿಗೆ ಪೂರಕವಾಗಿ ರಚಿಸಿದಂತಹುಗಳೇ ಎಂಬುದಕ್ಕೆ ಅವರ ದೇವಿ ಕೃತಿಗಳ ಪೂರ್ಣದೃಶ್ಯವೇ ಸಾಕ್ಷಿಯಾಗಿವೆ. ಸ್ವಾಮಿಗಳವರ ಚಿತ್ರದಲ್ಲಿ ಪ್ರೇಕ್ಷಕ ಮತ್ತು ಕಲಾವಿದ ಹತ್ತಿರ ವಾಗುತ್ತಾ ಹೋಗುತ್ತಾನೆ. ಪ್ರೇಕ್ಷಕ ತಾನಾಗಿಯೇ ಇದನಾರು ಬರೆದವರೆಂದು ಗುರುತಿಸುತ್ತಾ ಹೋಗುತ್ತಾರೆ. ಲೌಕಿಕದಿಂದ ಅಲೌಕಿಕ್ಕೆಳೆಯುವ, ಮುದುಡಿದ ಮನಸ್ಸಿಗೆ, ಆಶೆಹೊತ್ತು ಕಣ್ಗಳಿಗೆ, ಬದುಕಿನ ನೆಮ್ಮದಿಗೆ, ಸನ್ಮಾರ್ಗದ ಸುಗಮ ಹಾದಿಗೆ ಸಹಕಾರಿ ಯಾಗುತ್ತವೆ ಇವರ ಕಲಾ ಚಿತ್ರಗಳು.

ಇಂತಹದೇ ಚಿತ್ರಗಳ ಸಮುಚ್ಛಯವನ್ನು ಸ್ವಾಮಿಗಳ ಪೌತ್ರರಾದ (ಮೊಮ್ಮಗ) ಶಿಲ್ಪಿ ಎನ್. ಶಿವಾನಂದ ಅವರ ಖಾಸಗೀ ಸಂಗ್ರಹದಲ್ಲಿ ಕಾಣಬಹುದು. ಆದರೇ ಇವುಗಳು ಗಾತ್ರದಲ್ಲಿ, ಕಿರಿದಾದವು. ಸ್ವಾಮಿಗಳವರ ಕಲಾಸಾಧನೆಯ ಸಮೀಕ್ಷಾ ದೃಷ್ಟಿಯಿಂದ ಅತ್ಯಮೂಲ್ಯವೆನಿಸುತ್ತವೆ. ಏಕಮುಖ ಮತ್ತು ತ್ರಿಮುಖನಾದ ಈಶ್ವರನ ಎದೆಮೊಗದ ಚಿತ್ರ, (Burst) ಸರಸ್ವತಿ, ಭಿಕ್ಷಾಟನ ಮೂರ್ತಿ, ಶಿವಪಾರ್ವತಿ, ಅಶೋಕವನದಲ್ಲಿ ಸೀತಾ ಆಂಜನೇಯ, ಇವು ತೈಲ ಚಿತ್ರವಾದರೇ ಸ್ವಾಮಿಗಳವರ ಮೂಲಗುರುಗಳಾದ ಕರಸ್ಥಲದ ನಾಗಲಿಂಗ ಸ್ವಾಮಿಗಳವರ ಜೀವನ ಚರಿತ್ರೆ ಕುರಿತಾದ ಜಲವರ್ಣದ ಸರಣಿ ಕೃತಿಗಳು ಹಾಗೂ ಲಿಂಗಾಪೂಜಾ ನಿರತ ಗುರುಗಳ ಚಿತ್ರ ಕಾಣಬಹುದಾಗಿದೆ.

ಏಕಮುಖ ಮತ್ತು ತ್ರಿಮುಖ ಪರಮೇಶ್ವರನ (೧೯೪೯) ಚಿತ್ರದಲ್ಲಿ ಮುಖಹೋಲಿಕೆ, ಕಟ್ಟಿರುವ ಜಟೆ, ಕಿವಿಗೆ ದರಿಸಿದ ಮಕರ ಕುಂಡಲ, ತಲೆಯಲ್ಲಿ ದರಿಸಿದ ಕಿರುಪ್ರಮಾಣದ ಕಿರೀಟ ಒಂದೇ ತೆರನಾಗಿದ್ದರೂ ಏಕಮುಖ ಶಿವನಲ್ಲಿ ನೇತ್ರಗಳು ಅದೋಮುಖವಾಗಿ ಧ್ಯಾನಮಗನ್ನಾಗಿರುವಂತೆ ತೋರುತ್ತದೆ. ಜಟೆಯು ಬೆನ್ನ ಮೇಲೆಲ್ಲಾ ಗುಂಗುರು ಗುಂಗುರಾಕಾರವಾಗಿ ಹರಡಿದೆ. ಕೊರಳ ಬಳಸಿರುವ ಹಾವು ಬಾಯ್ತೆರದು ಬಲಕ್ಕೆ ತಿರುಗಿ ಯಾವುದನ್ನೋ ನಿರೀಕ್ಷಿಸುವಂತಿದೆ. ಶಿರದಲ್ಲಿ ದರಿಸಿರುವ ಕಿರುಪ್ರಮಾಣದ ಕಿರೀಟದ ಭ್ರೂಮಧ್ಯಕ್ಕೆ ಸರಿಯಾಗಿ ನಾಗಲಿಂಗವಿದೆ. ಎಡಕ್ಕೆ ಚಂದ್ರನಿದ್ದಾನೆ. ನೀಲಚ್ಛಾಯೆಯುಳ್ಳ ಮುಖವರ್ಣಿಕೆ ಹಾಗೂ ಶರೀರ ಕೊರಳಲ್ಲಿ ರುದ್ರಾಕ್ಷಿಸರ ಆಭರಣಯುಕ್ತವಾದ ಕೊರಳಹಾರ ದರಿಸಿರುವ ಭಸ್ಮವಂತೂ ಅತ್ಯಂತ ನೈಜಯುಕ್ತವಾಗಿದ್ದು ಯಜ್ಞೋಪವೀತದಾರಿಯಾಗಿದ್ದಾನೆ ಪರಮೇಶ್ವರ.

ತ್ರಿಮುಖವುಳ್ಳ ಪರಮೇಶ್ವರನ ದೇಹಕಾಂತಿ ಸಹಜವಾದ ಮೈಬಣ್ಣಗಳಿಂದ ಕೂಡಿದ್ದು ನೇತ್ರಗಳು ನಮ್ಮನ್ನೇ ನೋಡುವಂತಿವೆ. ಮುನ್ನೋಟ ಮತ್ತು ಪಾರ್ಶ್ವನೋಟಗಳು ಮಂದಸ್ಮಿತ ಕಿರುನಗೆಯಿಂದ ಕೂಡಿದ್ದು ಮುಖಕ್ಕೆ ಕಾಂತಿಯನ್ನು ಹೆಚ್ಚಿಸಿವೆ. ಈ ಚಿತ್ರದಲ್ಲಿ ಶಿವನಿಗೆ ಹಾವನ್ನೇ ಯಜ್ಞೋಪವೀತದ ರೀತಿಯಲ್ಲಿ ದೇಹದ ಮೇಲೆ ಸುತ್ತವರೆದಿರುವುದನ್ನು ಕಾಣಬಹುದಾಗಿದ್ದು, ಕಂಠಾಭರಣ ಭೂಷಿತ ಶಿವ ಕಣ್ಮನಗಳನ್ನು ತುಂಬುತ್ತಾನೆ.

ಈ ಎರಡು ಶಿವನ ಚಿತ್ರಗಳಲ್ಲಿಯೂ ಎದೆಮುಗದವರೆಗೆ ಮಾತ್ರ ಚಿತ್ರಸಿದ್ದು ಸುತ್ತಲೂ ಕತ್ತಲವರ್ಣಗಳಿಂದ (Dark colours) ಆವೃತವಾಗಿ, ದೇಹಕಾಂತಿಗೆ ಪೋಷಕವಾಗಿ ಆಕರ್ಷಿಸುವಂತೆ ಮಾಡುವಲ್ಲಿ, ಸ್ವಾಮಿಗಳವರ ದಟ್ಟವಾದ ಅನುಭವ ವ್ಯಕ್ತಪಡಿಸಿರುವ ಜಾಣ್ಮೆ ನಿಬ್ಬೆರಗಾಗುವಂತೆ ಮಾಡುತ್ತದೆ.

ಸ್ವಾಮಿಗಳ ಮತ್ತೊಂದು ತೈಲಚಿತ್ರ ಸರಸ್ವತಿ (೧೯೪೯) ಅರಮನೆಯಲ್ಲಿರುವ ಚಿತ್ರಕ್ಕಿಂತ ಭಿನ್ನವಾಗಿದ್ದು, ವೀಣೆಯನ್ನು ನುಡಿಸುವಂತಿದೆ. ಕುಳಿತಿರುವ ಪೀಠವಾದರೂ ಅತ್ಯಂತ ಸಾಧಾರಣ ವಾದದ್ದು. ಚತುರ ಬಾಹುಗಳನ್ನು ಹೊಂದಿದ್ದು ವೀಣೆ ನುಡಿಸುವ ಎರಡು ಕೈಗಳಾದರೇ ಉಳಿದೆರಡು ಜಪಸರ (ಬಲ) ಮತ್ತು ಶಾಸ್ತ್ರದ ಕಟ್ಟು (ಎಡ)ಗಳನ್ನು ಹಿಡಿದಂತಿದೆ. ಯಾವದೋ ರಾಗದಲ್ಲಿ ತಲ್ಲೀನತೆಗೊಂಡ ಮುಖಮುದ್ರಿಕೆಯುಳ್ಳದ್ದಾಗಿದೆ. ಶ್ವೇತವಸ್ತ್ರ ಪೀತಾಂಬರದಾರಿಣಿಯಾದ ಸರಸ್ವತಿಯ ಬಲಪಾದ ಬಳಿ ಹಂಸಪಕ್ಷಿಯೊಂದು ರಾಗದಲಿ ತನ್ಮಯವಾಗಿ ತದೇಕ ಚಿತ್ತದಿಂದ ನಿಂತಿದೆಯೇನೋ ಎಂಬಂತೆ ಭಾಸವಾಗುತ್ತದೆ. ವೈಭವೋಪೇತ

ಕಿರೀಟ ಮತ್ತಿತರ ಆಭರಣಗಳನ್ನು ಹೊಂದಿಲ್ಲದ ಜ್ಞಾನದಾಯಿನಿ ಈ ಸರಸ್ವತಿ ಚಿತ್ರ.

ಕಾನನದ ಕಾಲ್ದಾರಿಯೊಳ್ ನಡೆದು ಬರುತ್ತಿರುವ ಭಿಕ್ಷಾಟನಾ ಮೂರ್ತಿ (೧೯೩೫) ಚಿತ್ರದಲ್ಲಿ ಪಾದಗಳು ಮರದ ಪಾದುಕೆ ದರಿಸಿವೆ. ವಿವಸ್ತ್ರನಾಗಿರುವ ಭಿಕ್ಷಾಟನಾ ಮೂರ್ತಿ ಆಭರಣಗಳಿಂದ ಕಂಗೊಳಿಸುತ್ತಾನೆ. ಚತುರಬಾಹುಗಳನ್ನು ಹೊಂದಿದ್ದು ಡಮರುಗ ಮತ್ತು ಅಭಯಹಸ್ತ (ಬಲಕ್ಕೆ) ಹಾಗೆಯೇ ಕಪಾಲ ಅಥವಾ ಭಿಕ್ಷಾಪಾತ್ರೆಯನ್ನು ಮುಂಚಾಚಿದ ಎಡಗೈಯನ್ನು, ತ್ರಿಶೂಲ, ನವಿಲುಗರಿಗಳನ್ನು ಹಿಂಚಾಚಿದ ಎಡಗೈಯಲ್ಲಿ ಇರುವುದನ್ನು ಕಾಣ ಬಹುದಾಗಿದೆ. ತ್ರಿನೇತ್ರದಾರಿಯಾದ ಶಿವನ ಕಣ್ಣುಗಳು ಅರೆತೆರೆದಿದ್ದು ನಿರ್ಲಿಪ್ತ ಭಾವನೆಯ ನಿರಾಕಾರ ಮೂರ್ತಿ ಯಾಗಿ ಚಿತ್ರಿತ ವಾಗಿದ್ದಾನೆ. ತನ್ನ ಮುಂಗಾಲನ್ನು ಮೇಲಕ್ಕೆತ್ತಿ ದೈನ್ಯತೆಯಿಂದ ಬೇಡುತ್ತಿರುವ ಹರಿಣದತ್ತ ಕೃಷ್ಣದೃಷ್ಟಿ ಬೀರಿದಂತೆ ತುಸು ವಾಲಿರುವುದನ್ನು ಕಾಣಬಹುದಾಗಿದೆ. ಶಾಸ್ತ್ರೋಕ್ತವಾಗಿ ಹೇಳುವುದಾದರೇ ಅಭಂಗತ್ರಿ ಲಕ್ಷಣದಿಂದ ಕೂಡಿದೆ.

ಮುಡಿಯನ್ನು ಜಟೆಯಂತೆ ಮೇಲಕ್ಕೆತ್ತಿ ಕಟ್ಟಿದು, ದರಿಸಿರುವ ಚಂದ್ರನು ಕಾನನದ ಕತ್ತಲೆಯ ಮೇಲೆ ಬೆಳಕ ಚೆಲ್ಲಿದಂತಿದೆ. ಅಲ್ಲಲ್ಲಿ ಕೆದರಿರುವ ಕೂದಲನ್ನು ಹಿಡಿದಿರುವ ಹಣೆಪಟ್ಟಿಕೆಯಂತಿರುವ ಆಭರಣವೊಂದು ಶಿರೋಭಾಗವನ್ನು ಸುತ್ತುವರೆದಿದೆ. ಸೊಂಟ ಬಳಸಿರುವ ಹಾವು ತನ್ನ ತಲೆ ಎತ್ತಿ ಚತುಷ್ಪಾದಿ ಹರಿಣದೊಡನೆ ಸಂಭಾಸಿಸುತ್ತಿದೆಯೇನೋ ಎಂಬಂತೆ ತನ್ನ ನಾಲಿಗೆಯನ್ನು ಹೊರಹೊಮ್ಮಿಸಿದೆ. ಅಂಗಾಗಗಳಿಗೆ ಬಳಸಿರುವ ವರ್ಣ ಸಮತಟ್ಟಾದ ವರ್ಣಗಳಂತಿದ್ದರೂ (Flat Colours) ಅವಶ್ಯವಿದ್ದ ಕಡೆಯಲ್ಲಿ ಕಡಪು ವರ್ಣಗಳನ್ನು ಅತ್ಯಂತ ಕಡಿಮ ಪ್ರಮಾಣದಲ್ಲಿ ಬರೆದೆ ಚಿತ್ರಕ್ಕೆ ಶೋಭೆ ತಂದಿದ್ದಾರೆ.

ಪ್ರಕೃತಿ, ಪುರುಷ ಸಂಕೇತವಾಗಿರುವ ಪಾರ್ವತಿ ಪರಮೇಶ್ವರರ ತೈಲಚಿತ್ರ (೧೯೩೫)ದಲ್ಲಿ ಪರಮೇಶ್ವರ ಚತುರ್ ಬಾಹುಗಳನ್ನು ಪಾರ್ವತಿಯು ದ್ವಿ ಬಾಹುಗಳನ್ನು ಹೊಂದಿರುತ್ತಾರೆ. ಬಲಹಸ್ತಗಳು ತ್ರಿಶೂಲ ಹಾಗೂ ಅಭಯ ಮುದ್ರೆಗಳನ್ನೊಳ ಗೊಂಡಿದೆ. ಎಡಹಸ್ತದಲ್ಲಿರುವ ಡಮರುಗವನ್ನು ಹಾವೊಂದು ಸುತ್ತಿಕೊಂಡು ಶಿವನತ್ತ ಮುಖಮಾಡಿದೆ. ಮತ್ತೊಂದು ಎಡಬಾಹು ಪಾರ್ವತಿಯನ್ನು ಬಳಸಿ ಎಡತೋಳ ಮೇಲೆ ಕೈಯಿರಿಸಿದಂತಿದೆ.

ಶ್ವೇತವರ್ಣದ ಕಚ್ಚೆಪಂಚೆ ನಡುವಿನ ಮೇಲೆ ಹುಲಿಯ ಚರ್ಮ ಅದರ ಮೇಲೊಂದು ಕೆಂಪು ವಸ್ತ್ರವೊಂದು ನಡುಪಟ್ಟಿ ಯಂತೆ ಕಟ್ಟಿರುವುದನ್ನು ಕಾಣುತ್ತೇವೆ. ಜಟಾಜೂಟದಾರಿಯಾದ ಪರಮೇಶ್ವರನು ಕಟ್ಟಿರುವ ಜಟೆಯು ಮೇಲಕ್ಕೆತ್ತಿಸುತ್ತಿದಂತಿದ್ದು ಅದರ ಎಡಕ್ಕೆ ಚಂದ್ರನು ತನ್ನ 'ಕ್ಷ' ಕಿರಣವನ್ನು ಬೀರಿದಂತಿದೆ. ಜಟೆಯನ್ನು ಬಳಸಿರುವ ಕಿರುಪ್ರಮಾಣದ ಕಿರೀಟವಿದೆ. ತ್ರಿನೇತ್ರದಾರಿಯಾದ ಪರಮೇಶ್ವರನ ಕಂಗಳು ಸೌಮ್ಯಯುಕ್ತವಾಗಿದ್ದು ಕರ್ಣಗಳಲ್ಲಿ ದರಿಸಿರುವ ಮಕರ ಕುಂಡಲ ಹೆಚ್ಚು ಆಕರ್ಷಣೀಯ ವಾಗಿವೆ. ಕೊರಳಲ್ಲಿ ಸಣ್ಣಪ್ರಮಾಣದ ರುದ್ರಾಕ್ಷಿ ಸರವು ದ್ವಂದ್ವವಾಗಿದ್ದು ಅದರ ತುದಿಗೆ ದೊಡ್ಡ ಗಾತ್ರದ ರುದ್ರಾಕ್ಷಿಯೊಂದಿದ್ದು ಅದರ ಮೇಲೆಲ್ಲಾ ಚಿನ್ನಗೆತ್ರನೆಯಂತೆ ರಚಿಸಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಶಿವನ ಮುಖ್ಯ ಆಭರಣವಾದ ಹಾವು ಕೊರಳ ಬಳಸಿ ನಿರ್ಲಿಪ್ತತೆಯಿಂದ ಶಿರಬಾಗಿ ನಮಿಸುವಂತಿದೆ.

ಹಾಗೆಯೇ ಪ್ರಕೃತಿಯ ಪ್ರತಿರೂಪದ ಶಿವನ ಅರ್ಧಾಂಗಿ ಶಕ್ತಿ ಸ್ವರೂಪಣಿಯಾದ ಪಾರ್ವತಿಯು, ಶಿವನನ್ನು ತನ್ನ ಬಲಬಾಹು ಗಳಿಂದ ಬಳಸಿ ಶಿವನೊಲುಮೆಗೆ ಪಾತ್ರಳಾಗಿ ನಿಂತಿರುವ ಮೋಹಕ ದೃಶ್ಯ. ಶಿವನು ಅರ್ಧಾಂಗಿಯತ್ತ ನೋಡುತ್ತಿರುವ ಓರೆನೋಟ, ಪಾರ್ವತಿಯು ನಾಚಿ ತುಸು ತಲೆತಗ್ಗಿಸಿ ನಿಂತಂತೆ ಚಿತ್ರಿಸಿರುವ ಸ್ವಾಮಿಗಳವರ ಕಲಾವೈಖರಿ ಬಳಸಿದ ಬಣ್ಣ ಅತ್ಯಂತ ನೈಜಯುಕ್ತ ವಾಗಿದ್ದು, ಭಾವ ಭಾವನೆಗಳ ಸಂಗಮದಂತೆ ವರ್ಣ ಸಂಯೋಜಿಸಿದ್ದಾರೆ. ಅತಿಯಾದ ಯಾವುದೇ ಆಭರಣವಿಲ್ಲದೆ ನಿಂತಿರುವ ಪಾರ್ವತಿಯು ಸಾಂಪ್ರದಾಯಿಕ ಕಚ್ಚೆಯುಡಿಗೆ ಉಟ್ಟಂತಿದೆ. ಕಿರೀಟ, ಕಾಲ್ಗೆಜ್ಜೆ, ಕೊರಳಸರ ಕೈಬಳೆಗಳಲ್ಲಿ ಮಾಡಿರುವ ಕುಶರಿಕೆಲಸವು ಇಡೀ ಚಿತ್ರಕ್ಕೆ ಶೋಭೆತಂದಿವೆ. ಅರೆಕತ್ತಲೆಯಂತಿರುವ ಹಿನ್ನೆಲೆಯಲ್ಲಿ ಹೊಯ್ಸಳ ಮಾದರಿಯ ಸ್ತಂಭವೊಂದಿದ್ದು ಉತ್ತಮ ವಾಸ್ತು ವಿನ್ಯಾಸದ ಗರ್ಭಗೃಹದಲ್ಲಿ ನಿಂತಂತಿದೆ.

ಅಶೋಕವನದಲ್ಲಿ ಸೀತಾ ಆಂಜನೇಯ ಚಿತ್ರ ಅತ್ಯಂತ ಕಿರುಪ್ರಮಾಣದ್ದು, ಸುಮಾರು ಒಂದರಿಂದ ಒಂದುವರೆ ಅಡಿ ವ್ಯಾಪ್ತಿಯೊಳಗೆ ಬರುವ ತೈಲಚಿತ್ರ, ರಚನಾ ವಿಧಾನದಲ್ಲಿ ಉಳಿದೆಲ್ಲವು ಗಳಿಗಿಂತ ಭಿನ್ನವಾಗಿದೆ. ಈ ಚಿತ್ರದಲ್ಲಿ ಬಣ್ಣಗಳನ್ನು ಮುದ್ದೆ ಮುದ್ದೆಯಾಗಿ ಬಳಸಿದ್ದಾರೆ. ಕುಂಚದ ಒಡೆತ (Brush Strokes) ನಿಚ್ಚಳವಾಗಿ ಕಂಡುಬರುತ್ತದೆ. ರಾಕ್ಷಸರು ಸೀತೆಯನ್ನು ಕಾಯುತ್ತಿರುವಾಗಲೇ ನಿದ್ರಾ ಪರವಶರಾಗಿದ್ದಾರೆ. ಹನುಮಂತನು ಭಕ್ತಿಯಿಂದ ಶಿರಬಾಗಿ ಸೀತೆಯೊಡನೆ ಸಂಭಾಷಿಸುತ್ತಿದ್ದಾನೆ. ಕಾಡಿನ ಕೂಪದೊಳಗೆ ಸಿಕ್ಕಿದ ಸೀತೆಯ ಮನೋವೇದನೆಯ ಮರ್ಮವನ್ನು ಸ್ವಾಮಿಗಳು ಚೆನ್ನಾಗಿ ನಿರೂಪಿಸಿದ್ದಾರೆ. ಆದರೇ ಇಲ್ಲಿರುವ ಕಲಾಕೃತಿಗಳು ಸರಿಯಾದ ಸಂರಕ್ಷಣೆ ಇಲ್ಲದೇ ಕಳಾಹೀನವಾಗುತ್ತಿವೆ. ಪ್ರತಿನಿತ್ಯ ಸಾವಿರಾರು ಜನ ನೋಡುವ ವಿಖ್ಯಾತ ಜಗನಮೋಹನ ಕಲಾಗ್ಯಾಲರಿಯಲ್ಲಿ ಒಂದು ಕಲಾಕೃತಿಯಾದರೂ ಇಲ್ಲದಿರುವುದು ಸಂಬಂಧಿಸಿದವರ ನಿಷ್ಕಾಳಜಿಯ ಪ್ರತೀಕವಾಗಿದೆ.

ಸ್ವಾಮಿಗಳವರು ತೈಲಚಿತ್ರರಚನೆಯಲ್ಲಿ ಕಲಾತ್ಮಕ ಕುಶರೀ ಕೆಲಸವನ್ನು ಮಾಡಿರುವಂತೆಯೇ ಜಲವರ್ಣ ಚಿತ್ರದಲ್ಲಿ ಸಹ ಮಾಡಿದ್ದಾರೆ. ಈ ಜಲವರ್ಣ ಚಿತ್ರಗಳು ಕಿರುಪ್ರಮಾಣದ್ದಾಗಿದ್ದು

ಸ್ವಾಮಿಗಳ ಮೂಲ ಗುರುಗಳಾದ ಕರಸ್ಥಲದ ಶ್ರೀ ನಾಗಲಿಂಗ ಸ್ವಾಮಿಗಳವರ ಜೀವನ ಚಿತ್ರಗಳ ಸನ್ನಿವೇಷಗಳನ್ನೊಳಗೊಂಡಿವೆ. (Story illustration) ದಾನೀಶ ಮಹಾರಾಜನು ಸ್ವಾಮಿಗಳಿಂದ ಆಭರಣಗಳನ್ನು ಸ್ವೀಕರಿಸುತ್ತಿರುವುದು, ಅರಮನೆಯ ವಿಲಾಸಕ್ಕೆ ವಿದಾಯ ಹೇಳಿ ಸನ್ಯಾಸಿಯಾದದ್ದು, ನಾಗಲಿಂಗ ಸ್ವಾಮಿಗಳ ತಪಸ್ಸಿಗೆ ಮಧ್ಯೆ ಶಿವಶಿವೆಯರ ದರ್ಶನಾಶಿರವಾದವಾಗುವ ದೃಶ್ಯ, ಲಿಂಗದೀಕ್ಷಾ ಸಮಾವೇಶ, ಮಹಾನದಿಯ ಪಾತ್ರವೊಂದರಲ್ಲಿ ಅಂಬಿಗ ಮತ್ತು ಶಿಷ್ಯರೊಡಗೂಡಿದ ಚಿತ್ರ, ಕುಷ್ಠರೋಗಿಗಳನ್ನು ಗುಣಪಡಿಸಿದ ಚಿತ್ರ, ಹೀಗೆ ಹತ್ತಾರು ಚಿತ್ರಗಳು ಜಲವರ್ಣದ ಅಪಾರದರ್ಶಕ ಚಿತ್ರಗಳಾಗಿ ಸ್ವಾಮಿಗಳವರಿಂದ ಮೂಡಿ ಬಂದಿವೆ. ಹಾಗೆಯೇ ನಾಗಲಿಂಗ ಸ್ವಾಮಿಗಳವರು ಲಿಂಗಪೂಜಾ ನಿರತರಾಗಿರುವ ಚಿತ್ರದಲ್ಲಿ ಕುಳಿತ ಮಣೆ ಪ್ರಭಾವಳಿಗಳು (Mysore Traditional Style) ಮೈಸೂರಿನ ಸಾಂಪ್ರದಾಯಿಕ ಶೈಲಿಯ ಚಿನ್ನದ ರೇಖೆಗಳ ಮೆರಗಳನ್ನುಳ್ಳ ಚಿತ್ರವಾಗಿದೆ. ಈ ಚಿತ್ರದ ವಿಶೇಷವೆಂದರೇ ಲಿಂಗಪೂಜೆ ಮಾಡುತ್ತಿರುವ ಜೊತೆಗೆ ಯಜ್ಞೋಪವೀತವನ್ನೇ ಧರಿಸಿರುವ ದ್ವಂದ್ವ ವಿಚಾರಗಳಿದ್ದು, ದೇವರನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ಮಾರ್ಗ ಯಾವುದಾದರೇನು, ಸಾಧನೆ ಮುಖ್ಯವಲ್ಲವೇ ಎಂದೆನಿಸುತ್ತದೆ.

ಜಗದ್ಗುರು ಶಿಲ್ಪಾದರ್ಶಮೂರ್ತಿ ಎಂದು ಬರೆದಿರುವ ಅತ್ಯಂತ ಕಿರುಪ್ರಮಾಣದ ಜಲವರ್ಣ ಚಿತ್ರ. ಪಂಚಮುಖ ಪರಮೇಶ್ವರ ಧ್ಯಾನಾಶಕ್ತನಾಗಿ ಯೋಗಮುದ್ರೆಯಲ್ಲಿ ಕುಳಿತಿದ್ದು ದಶಬಾಹುಗಳನ್ನು ಹೊಂದಿದ್ದಾನೆ. ಜಟಾಮುಕುಟ ಧಾರಿಯಾದ ಶಿವನ ಈ ಚಿತ್ರದಲ್ಲಿ ಬಣ್ಣಗಾರಿಕೆಯ ಬೆಡಗಾಗಲೀ, ವರ್ಣ ವಿನ್ಯಾಸದ ತಂತ್ರವಾಗಲೀ, ಇಲ್ಲದ ಸ್ಕೆಚ್ ಮಾದರಿಯಲ್ಲಿ ರಚಿಸಿದ ಆದರ್ಶ ಚಿತ್ರ, ಲಾಂಛನವೂ ಹೌದು. ಸ್ವಾಮಿಗಳವರು ನಿರ್ಮಿಸಿದ ಗುರುಕುಲದ ಮಹಾದ್ವಾರದ ಶಿರೋಭಾಗದಲ್ಲಿ ಈ ಶಿಲ್ಪಾದರ್ಶ ಮೂರ್ತಿಯು ಸಿಮೆಂಟಿನಿಂದ ಮಾಡಿದ ವಿಗ್ರಹವಿದೆ.

ಇವರು ರಚಿಸಿದ ಕಲಾಕೃತಿಗಳು ದೈವಿಶಕ್ತಿಯುಳ್ಳವುಗಳಾಗಿರುವ ಹಾಗೆ ಸ್ವಾಮಿಗಳು ಸಹ ಸಿದ್ಧಪುರುಷರು ದೈವಾಂಶ ಸಂಭೂತರು, ಎಂಬುದಕ್ಕೆ ಅವರಲ್ಲಿರುವ ಅಗಾದ ಕಲಾಪ್ರತಿಭೆಯೇ ಜೀವಂತ ಸಾಕ್ಷಿ. ಚಿತ್ರಕಲೆಯಲ್ಲಿ ಹೇಗೊ ಹಾಗೆಯೇ ಶಿಲ್ಪದಲ್ಲಿ ಸಹ. ಸಿದ್ಧಲಿಂಗ ಸ್ವಾಮಿಗಳವರು ವಿಚಾರವನ್ನು ಮಂಡಿಸುವಾಗ ಒಂದು ಬಿಟ್ಟು ಒಂದು ಹೇಳುವ ಹಾಗಿಲ್ಲ. ಈ ಸಂದರ್ಭದಲ್ಲಿ ಮಹಾಕವಿ ಕಾಳಿದಾಸ ತನ್ನ ರಘುವಂಶ ಮಹಾ ಕಾವ್ಯದಲ್ಲಿ ಆದಿಯಲ್ಲಿ ಒಂದು ಶ್ಲೋಕವನ್ನು ಹೇಳಿದ ನೆನಪು ಬರುತ್ತದೆ.

ವಾಗಾರ್ಥವಿವ ಸಂಪೃಕ್ತಾ ವಾಗರ್ಥಃ ಪ್ರತಿಪತ್ತಯೇ।
ಜಗತಃ ಪಿತರ್ ವಂದೇ ಪಾರ್ವತಿ ಪರಮೇಶ್ವರ್

ಎನ್ನುತ್ತಾನೆ. ವಾಕ್ ಮತ್ತು ಅರ್ಥ ಹೇಗೆ ಬೇರ್ಪಡಿಸಲು ಸಾಧ್ಯವಿಲ್ಲವೋ ಹಾಗೆ ಸ್ವಾಮಿಗಳವರ ಚಿತ್ರ ಮತ್ತು ಶಿಲ್ಪಗಳನ್ನು ಬೇರ್ಪಡಿಸಿ ಹೇಳುವುದು ಸಾದುವೂ ಅಲ್ಲ. ಅವರು ರಚಿಸಿದ ಶಿಲ್ಪಿ ಕೃತಿಗಳ ಪಟ್ಟಿ ಅವುಗಳ ವೈವಿದ್ಯತೆ, ಅವುಗಳ ಸ್ಥಾಪನೆ ಇತ್ಯಾದಿ ವಿವರಗಳ ಪ್ರತ್ಯೇಕ ಲೇಖನವೇ ಇರುವಾಗ ಇಲ್ಲಿ ವಿಶದಪಡಿಸುವುದು ಸೂಕ್ತವಲ್ಲ. ಆದರೇ ಸ್ವಾಮಿಗಳವರ ಮೂಲ ನೆಲೆಯನ್ನು ಸಿದ್ದಿಯನ್ನು ಪಡೆಯಲು ಅವಶ್ಯ ವಾತಾವರಣ ವೊದಗಿದುದು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಸ್ವಾಮಿಗಳವರು ಜನಿಸಿದ್ದು (೧೮೮೫) ಚಾಮರಾಜನಗರದ ಬೆಂಡರವಾಡಿ ಎಂಬ ಗ್ರಾಮದಲ್ಲಿ ಇದು ಅವರ ತಾಯಿಯ (ಮಲ್ಲಾಜಮ್ಮಣ್ಣಿ) ಊರು ಸಹ. ಆದರೆ ಇವರ ವಿದ್ಯಾಭ್ಯಾಸ ನಡೆದದ್ದು ತಂದೆಯ (ಸಿದ್ದಪ್ಪಾಜಿ ಸ್ವಾಮಿ) ಊರು ಕೊಳ್ಳೆಗಾಲದಲ್ಲಿ ಶ್ರೀ ನಂಜುಂಡ ಶಿವಯೋಗಿಗಳು ನಾಮಕರಣ ಮಾಡಿದುದು ಮಾತ್ರವಲ್ಲ, ಸಿದ್ದಲಿಂಗ ಸ್ವಾಮಿಗಳು ಮಹೋನ್ನತಿ ಪಡೆಯಲು, ಚಿತ್ರ, ಶಿಲ್ಪ, ಯಂತ್ರ, ತಂತ್ರ, ಮಂತ್ರ ವಿದ್ಯೆಗಳಲ್ಲಿ ಮಹಾನ್ ಪಾಂಡಿತ್ಯಪಡೆದು ರಾಜಗುರುವಾಗಲು ಬೆನ್ನುತಟ್ಟಿ ಪ್ರೋತ್ಸಾಹಿಸಿದವರು ಸಿದ್ದಲಿಂಗ ಸ್ವಾಮಿಗಳವರ ಉತ್ಕರ್ಷೆಯನ್ನು ಕಂಡು ಆನಂದಿಸಿ ನಿನ್ನ ಸಕಲವಿದ್ಯೆಗಳು ಇತರರಿಗೂ ಮಾದರಿ ಯಾಗಲಿ ಎಂದು ಹಾರೈಸಿದ ಪರಮ ವಿರಕ್ತರವರು. ತತ್ಫಲವಾಗಿ ತಾತ ಮುತ್ತಾತರ ಕಾಲದಿಂದ ಬಂದಿದ್ದ ಗುಡಿ ಕೈಗಾರಿಕೆ, ಪಂಚಲೋಹದ ಕೆಲಸ, ಸಂಸ್ಕೃತಾಭ್ಯಾಸ, ವೇದ ಆಗಮ, ಜ್ಯೋತಿಷ್ಯ ಅಧ್ಯಯನ ಸ್ವಾಮಿಗಳ ಕಲಾ ಸೌರಭ ಪಸರಿಸಲು ಸಹಕಾರಿಯಾಯಿತು.

ಮೈಸೂರ ಅರಮನೆಯಲ್ಲಿ ಚಿತ್ರಕಾರರಿಗೆ, ಶಿಲ್ಪಿಗಳಿಗೆ ಅಪಾರ ಬೇಡಿಕೆ. ಅದನ್ನು ಗಮನಿಸಿ ಅವರ ಗುರುಗಳಾದ ಶ್ರೀ ನಂಜುಂಡ ಶಿವಯೋಗಿಗಳು ಅಪ್ಪಣೆ ಕೊಡಿಸಿದ ರೀತ್ಯ ಮೈಸೂರಿಗೆ ಆಗಮಿಸಿದರು. ಪ್ರಾರಂಭದಲ್ಲಿ ಅರಮನೆಯ ನಾಟಕ ಮಂಡಲಿಗೆ ದೇವ ದೇವತೆಯರ, ಹಾಗೂ ನಾಟಕ ಸನ್ನಿವೇಶಕ್ಕನುಗುಣವಾದ ಚಿತ್ರಗಳು ಅವಶ್ಯಕವಾಗಿದ್ದವು. ಅದರ ನಾಟಕ ಮಂಡಲಿ ವ್ಯವಸ್ಥಾಪಕರಾದ ದರ್ಬಾರ್ ಭಕ್ಷಿಯವರು ಸ್ವಾಮಿಗಳಲ್ಲಿ ಮನವಿ ಮಾಡಿಕೊಂಡದರ ಫಲವಾಗಿ ಸ್ವಾಮಿಗಳು ರಚಿಸಿದ ಚಿತ್ರಪಟಗಳು ಅರಮನೆಯ ಅಂತಃಕರಣಗಳನ್ನು ಭೇದಿಸಿ ಮಹಾರಾಜರ ಮನ್ನಣೆಗೆ ಪಾತ್ರವಾದವು.

ಆ ಸಂದರ್ಭದಲ್ಲಿಯೇ ನಮ್ಮ ಪುರಾಣದೇವತೆಗಳಿಗೆ ಚಿತ್ರದ ಚೌಕಟ್ಟು ನೀಡುವ ಪರ್ವಕಾಲ. ರಾಜಾ ರವಿವರ್ಮ ಅವರು ಭಾರತೀಯ ದೇವದೇವತೆಯರ ಚಿತ್ರಗಳನ್ನು ಕ್ಯಾಲೆಂಡರ್‌ಗಾಗಿ ಚಿತ್ರಿಸುತ್ತಿದ್ದರು, ಅಪಾರ ಬೇಡಿಕೆ ಇದ್ದ ಕಾಲ. ಅಂದಿನ ಕಾಲಕ್ಕೆ ಬೆಂಗಳೂರಿನ ಮಹಾರಾಜ ಫ್ರೇಂವರ್ಕ್ಸ್ ಪ್ರಸಿದ್ಧವಾದದ್ದು. ಅಲ್ಲಿ ಪ್ರಚಾರ ಪಡಿಸುವ ಕ್ಯಾಲೆಂಡರ್ ಚಿತ್ರ ಅಪರಿಮಿತ ಬೇಡಿಕೆ ಯುಳ್ಳದ್ದು. ಸ್ವಾಮಿಗಳವರ ಶಾಸ್ತ್ರೋಕ್ತವಾದ ಕಲಾ ಸಂಪ್ರದಾಯ

ಮತ್ತು ರಚನೆಗಳನ್ನು ತಿಳಿದಿದ್ದ ಮಹಾರಾಜ ಫ್ರೇಂವರ್ಕ್ಸ್‌ನವರು ಸ್ವಾಮಿಗಳಿಗೆ ಬೇಡಿಕೆ ಸಲ್ಲಿಸಿದರು. ಸ್ವಾಮಿಗಳು ಅದಕ್ಕೊಮ್ಮೆ ನಾವು ಬರೆದುಕೊಟ್ಟ ಚಿತ್ರವನ್ನು ಪೂರ್ಣ ಪ್ರಮಾಣ ದಲ್ಲಿ ಉತ್ತಮವರ್ಣಗಳಲ್ಲಿ ಮುದ್ರಿಸಬೇಕೆಂಬ ಸಲಹೆಯನ್ನು ಮುಂದಿಟ್ಟರು. ಸ್ವಾಮಿಗಳು ಕ್ಯಾಲೆಂಡರ್ ಚಿತ್ರಗಳಿಗಾಗಿ ಒಪ್ಪಿದ್ದೆ ನಮ್ಮ ಪುಣ್ಯವೆಂದು ತಿಳಿದಿದ್ದ ಮಾಲೀಕರು ಪೂರ್ಣ ಸಹಕಾರ ನೀಡಿದರು.

ಕೈಲಾಶ ಶಂಕರ ಎಂಬ ಶಿರೋನಾಮೆಯ ಚಿತ್ರ ೧೯೨೮ರಲ್ಲಿ ಪ್ರಕಟವಾಯಿತು. ಹರಳು ಹುರಿದಂತೆ ಮಾರಾಟವಾದವು. ಅದನ್ನು ಕಂಡು ಪುಲಕಿತಗೊಂಡ ಮಾಲೀಕರು ಅದೇ ಚಿತ್ರವನ್ನು ಸ್ವಲ್ಪ ಮಾರ್ಪಡಿಸಿ ಬರೆದು ಕೊಡಲು ಕೇಳಿಕೊಂಡದರ ಪರಿಣಾಮ ಮೊದಲಿನ ಚಿತ್ರದಲ್ಲಿ ಪರಮೇಶ್ವರನ ಪಾದವನ್ನು ನಂದಿಯು (ಮಾನವದೇಹ, ವೃಷಭನ ತಲೆ) ಹಿಡಿದಿದ್ದರೇ ತಮ್ಮ ಎರಡನೇ ಕೈಲಾಸ ಶಂಕರನಲ್ಲಿ (೧೯೩೨) ಪರಮೇಶ್ವರನ ಪಾದವನ್ನು ನಂದಿ ಮತ್ತು ತ್ರಿಪಾದವುಳ್ಳ ಬೃಂಗೀಶ್ವರ ಹಿಡಿದ್ದಿದಾರೆ. ಉಳಿದಂತೆ ಪಾರ್ವತಿ ಪರಮೇಶ್ವರು, ಗಣಪತಿ, ಷಣ್ಮುಖ ಮತ್ತಿತರ ಋಷಿಪುಂಗವರು ದೇವತೆಗಳಿದ್ದಾರೆ. ಸ್ವಾಮಿಗಳವರ ಈ ಚಿತ್ರಗಳಲ್ಲಿ ಷಣ್ಮುಖ ಅಂದರೇ ಆರು ತಲೆಗಳನ್ನು ಹೊಂದಿಸಿರುವ ರೀತಿ, ಇದುವರೆಗಿನ ಕ್ಯಾಲೆಂಡರ್ ಚಿತ್ರಗಳಿಗಿಂತ ಉತ್ತಮವಾದವು. ಒಂದೇ ಭುಜದಿಂದ ೬ ಕತ್ತುಗಳ ಮೂಲಕ ತಲೆ ಹೊರಹೊಮ್ಮಿವೆ. ಸಾಲಾಗಿ ತಲೆಗಳನ್ನು ಅಂಟಿಸಿದಂತೆ ನಾವು ಇತ್ತೀಚಿನ ಚಿತ್ರಗಳಲ್ಲಿ ಕಾಣುತ್ತೇವೆ. ಸ್ವಾಮಿಗಳವರ ವಾಸ್ತವ ಪ್ರಜ್ಞೆಗೆ ಈ ಚಿತ್ರ ಮೆರಗನ್ನೀಯುತ್ತದೆ.

ಸ್ವಾಮಿಗಳವರು ರಚಿಸಿದ ಪಂಚವಕ್ತ್ರೇಶ್ವರ (೧೯೩೧) ಅಪಾರ ಬೇಡಿಕೆಯುಳ್ಳ ಚಿತ್ರ. ೧ ಪಂಚಮುಖ. ದಶಬುಜಗಳನ್ನು ಹೊಂದಿ ಕೆಂದಾವರೆಯ ಮೇಲೆ ಕುಳಿತ ಚಿತ್ರವಾಗಿದ್ದು, ನೆಲ, ಜಲಗಳ ಸಂಪರ್ಕವಿಲ್ಲದೇ ಆಕಾಶಗಾಮಿಯಾಗಿ ಆಗಮಿಸಿದಂತೆ ಭಾಸವಾಗುವ ಈ ಮೂರ್ತಿಯ ಸುತ್ತಲೂ ಐದು ಜನ ಋಷಿಪುಂಗವರು ಕರಜೋಡಿಸಿ ಶಿರಬಾಗಿ ನಮಿಸುತ್ತಿದ್ದಾರೆ. ಹಾಗೆಯೇ ನಭೋಮಂಡಲದಿಂದ ಹಾರಿಬಂದ ದೇವ ದೂತರೀರ್ವರು ಪುಷ್ಪವೃಷ್ಟಿ ಮಾಡುತ್ತಿದ್ದಾರೆ. ದೇಹದ ಬಹುಭಾಗ ಆಭರಣಯುಕ್ತವಾಗಿದ್ದು ಹಾವನ್ನೇ ಯಜ್ಞೋಪವೀತದಂತೆ ಧರಿಸಿರುವುದನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಸ್ವಾಮಿಗಳು ಸೃಷ್ಟಿಕರ್ತರು ಹೌದು. ಪುರಾಣ ಸಾಹಿತ್ಯದ ಕಲ್ಪನಾ ಲೋಕಕ್ಕೆ ಜೀವಕಳೆ ತುಂಬಿ ದೃಗ್ಗೋಚರವಾಗುವಂತೆ ಮಾಡುವಲ್ಲಿ ಸಿದ್ಧಹಸ್ತರು ಎಂಬುದಕ್ಕೆ ಕ್ಯಾಲೆಂಡರ್ ಮತ್ತು ವಿಗ್ರಹರೂಪದಲ್ಲಿ ರಚಿತವಾದ ಮತ್ತೊಂದು ಚಿತ್ರ ಲಿಂಗೋದ್ಭವ ಮೂರ್ತಿ ಜಲವರ್ಣಚಿತ್ರ. ಇದರ ನಿರ್ಮಾಣಕಾಲ ೧೯೪೧. ಶಾಬ್ಧಿಕ ರೂಪದಲ್ಲಿದ್ದ ಶ್ರೀಮದ್ ಪಂಚಾಚಾರ್ಯರ ಪರಿಕಲ್ಪನೆಗೆ ಆಕಾರವನ್ನು ನೀಡಿ ಚಿತ್ರರಚಿಸಿಕೊಟ್ಟರಲ್ಲದೇ ಪಂಚಪೀಠಗಳಿಗೂ ಸಹ ಮೂರ್ತಿಯನ್ನು ಮಾಡಿಕೊಟ್ಟರು. ಹಾಗೆಯೇ ಸ್ಥಾಪನೆ ಸಹ ಕೆಲವೆಡೆ ಮಾಡಿದರು. ನಾಡಿನಾದ್ಯಂತ ಇರುವ ಪಂಚಾಚಾರ್ಯ ಮೂರ್ತಿಗಳಲ್ಲಿ ಸ್ವಾಮಿಗಳವರ ಹಾಗೂ ಅವರ ಪುತ್ರ ನಾಗೇಂದ್ರ ಸ್ತಪತಿಗಳವರ ಕಾಲದಲ್ಲಿ ಕೆತ್ತನೆಯಾದವುಗಳೇ ಅಧಿಕ, ಈ ಚಿತ್ರವೂ ಸಹ ಅಪಾರ ಜನಮನ್ನಣೆಗಳಿಸಿತು. ಈ ಲಿಂಗೋದ್ಭವ ಮೂರ್ತಿಯ ಬಲಗೈಯಲ್ಲಿ ಕಮಂಡಲ, ಎಡಗೈಯಲ್ಲಿ ದಂಡ ಜಟಾಮಣಿದಾರಿ, ಕರ್ಣದಲ್ಲಿ ಮಕರಕುಂಡಲ, ತ್ರಿನೇತ್ರವುಳ್ಳ ವರಾಗಿದ್ದು ಕೊರಳಲ್ಲಿ ರುದ್ರಾಕ್ಷಿ ಸರ, ಶಿರಸ್ಸು, ಕೊರಳು, ಕೈ ಭುಜಗಳಲ್ಲಿ ಆಭರಣಧಾರಣೆ ಇರುವುದನ್ನು ಕಾಣಬಹುದೇ ಹೊರತು ಲಿಂಗದಾರಕರಾಗಿರುವುದನ್ನು ಮೂಲಕೃತಿಯಲ್ಲಿ ಕಾಣಲಾಗುವುದಿಲ್ಲ. ಚತುರ ಕಂಬಗಳ ಮಧ್ಯದಲ್ಲಿ ನಿಂತ ಲಿಂಗೋದ್ಭವ ಮೂರ್ತಿ ತೇಜೋಮಯವಾಗಿ ಭಕ್ತ ಜನ ಸಮೂಹವನ್ನು ಆಕರ್ಷಿಸುತ್ತದೆ.

ಸ್ವಾಮಿಗಳವರ ಮತ್ತೊಂದು ಚಿತ್ರ ರಾಜರಾಜೇಶ್ವರಿ (೧೯೩೫) ಕ್ಯಾಲೆಂಡರ್ ಆಯಿತು. ಅರಮನೆಯಲ್ಲಿರುವ ಚಿತ್ರಕ್ಕೆ ಇದಕ್ಕೂ ಅಗಾದ ವ್ಯತ್ಯಾಸ. ಈ ಕ್ಯಾಲೆಂಡರ್ ಚಿತ್ರದಲ್ಲಿ ರಾಜ ರಾಜೇಶ್ವರಿಯ ಹಿಂದೆ ಶಯನ ಶೈಲಿಯಲ್ಲಿರುವ ಪರಮೇಶ್ವರನಿಲ್ಲ. ತೂಗು ಉಯ್ಯಾಲೆ ಇಲ್ಲ. ಆದರೇ ಛಾಮರದಾರಿಣಿಯರು ಮಾತ್ರ ಇದ್ದಾರೆ. ಆ ಸ್ವಾಮಿಗಳು ರಚಿಸಿರುವ ಎಲ್ಲಾ ಲಕ್ಷ್ಮಿ, ಸರಸ್ವತಿಯರಲ್ಲಿ ಒಂದೇ ತೆರನಾದ ಮುಖ, ಹಾಗೆಯೇ ಉಡುಪುಗಳು, ಅವುಗಳಿಗೆ ಬಳಸಿರುವ ವರ್ಣ ವಿನ್ಯಾಸವು ಸಹ ಇವರ ಚಿತ್ರಗಳಲ್ಲಿ ಕಾಣಬಹುದು. ಆದರೇ ಜಗನಮೋಹನ ಬಂಗಲೆಯಲ್ಲಿರುವ ರಾಜಾ ರವಿವರ್ಮರ ಚಿತ್ರಗಳಾದ ದ್ರೌಪದಿ ಕೀಚಕ (೧೯೦೬) ಪ್ರಸಂಗದಲ್ಲಿ ಸೈರಂಧ್ರಿರಿಗೆ ಕೀಚಕನ ಬಳಿ ಹೋಗಲು ತಿಳಿಸುವ ಪ್ರಸಂಗ, ಹಾಗೆಯೇ ಸೈರಂಧ್ರಿ ಮನಸ್ಸಿಲ್ಲದ ಮನಸ್ಸಿನಿಂದ ಹಾಲಿನ ಬಟ್ಟಲನ್ನು ಹಿಡಿದು ಹೋಗುವ ದೃಶ್ಯ. ಎರಡರ ಸೈರಂಧ್ರಿಯ ಮುಖ ಹೋಲಿಕೆ ಪರಸ್ಪರ ಪೂರಕವಾಗದೇ ಇರುವುದನ್ನು ಕಾಣುತ್ತೇವೆ. ಸ್ವಾಮಿಗಳು ಯಾವುದೇ ದೇವತೆ ಚಿತ್ರ ಬರೆಯು ವಾಗಲೂ ಅವುಗಳನ್ನು ಧ್ಯಾನಶ್ಲೋಕದ ಆಧಾರದ ಮೇಲೆ ರಚಿಸುತ್ತಿದ್ದ ಕಾರಣ, ಅವುಗಳಲ್ಲಿರುವ ಮೂಲ ದ್ರವ್ಯಗಳಾದ ಅಂಗಾಂಗ ವಿನ್ಯಾಸ, ಬಣ್ಣ, ಉಡುಪು ಏಕಪ್ರಕಾರವಾಗಿರುತ್ತಿದ್ದವು ಎಂಬುದಕ್ಕೆ ಅವರ ಚಿತ್ರಗಳು ಸಾಕ್ಷಿಯಾಗಿವೆ.

ಖಾಸಗೀ ಸಂಗ್ರಹದಲ್ಲಿರುವ ಬಸವೇಶ್ವರ ತೈಲ ಚಿತ್ರದಲ್ಲಿ ಬಸವಣ್ಣ ಮಂತ್ರಿಯಾಗಿದ್ದ ಕಾರಣ. ಮಂತ್ರಿತ್ವಕ್ಕನುಗುಣವಾದ ಭರ್ಜರಿ ಕಿರೀಟ, ಬೆಲೆಬಾಳುವ ವಸ್ತ್ರ-ಆಭರಣಗಳುಳ್ಳ ಶ್ರೀಮಂತರ ಚಿತ್ರದಂತಿದೆ. ಕಲಾದೃಷ್ಟಿಯಿಂದ ಉತ್ತಮ ವಿನ್ಯಾಸ ಎನಿಸಿದರೂ,

ಬಸವಣ್ಣನವರ ವಿಚಾರ ವ್ಯಕ್ತಿತ್ವಕ್ಕೆ ತಕ್ಕದಾಗಿಲ್ಲದ ಕಾರಣ ಜನಪ್ರಿಯಗೊಳ್ಳಲಿಲ್ಲ.

ಕ್ಯಾಲೆಂಡರ್ ಚಿತ್ರಗಳಿಗೇನೋ ಬೇಡಿಕೆ ಅಪಾರವಾಯಿತು. ಆದರೇ ಸ್ವಾಮಿಗಳವರಿಗೆ ಅರಮನೆಯ ಕೆಲಸ ಮುಖ್ಯವಾಯಿತು. ದರ್ಬಾರ್ ಹಾಲಿನಲ್ಲಿ ದೇವತಾ ಮೂರ್ತಿಗಳ ಕಲಾರಚನೆ ಅತ್ಯಗತ್ಯವಾಗಿತ್ತು. ಹಾಗೆಯೇ ಅರಮನೆಯ ಸರ್ವಾಂಗೀಣ ಕಲಾರಚನೆಯ ಶಿಲ್ಪಗಳ ಒತ್ತಡ ಹೆಚ್ಚಿದ್ದರಿಂದ ೧೯೪೫ರ ಲಿಂಗೋದ್ಭವ ಮೂರ್ತಿಯೇ ಅಂತಿಮ ಕ್ಯಾಲೆಂಡರ್ ಚಿತ್ರ ವಾಯಿತು.

ಕಲಾರಚನೆಯಲ್ಲಿ ತೊಡಗಿದ್ದ ಸ್ವಾಮಿಗಳವರನ್ನು ದರ್ಶಿಸಲು ಸ್ವತಃ ಮಹಾರಾಜರೇ ಶ್ರೀಮಠಕ್ಕೆ ಬರುತ್ತಿದ್ದರು, ಗುರುಕುಲದಲ್ಲಿ ನಡೆಯುವ ಕೆತ್ತನೆ ವಾಸ್ತುನಿರ್ಮಾಣವನ್ನು ವೀಕ್ಷಿಸುತ್ತಿದ್ದರು. ಶಾಸ್ತ್ರಕ್ಕೆ ಸಂಬಂದಿಸಿದ ವಿಚಾರಗಳನ್ನು ಕುರಿತು ಸ್ವಾಮಿಗಳೊಡನೆ ಸಮಾಲೋಚಿಸುತ್ತಿದ್ದರು. ಸ್ವಾಮಿಗಳು ಅರಮನೆಗೆ ಬಂದು ಹೋಗುವುದಕ್ಕೆ ಕಾರಿನ ವ್ಯವಸ್ಥೆ ಸಹ ಮಾಡಿದ್ದರು.

ಸ್ವಾಮಿಗಳು ಯಾವುದೇ ಕಲಾರಚನೆ ಮಾಡಬೇಕಾದರೇ ಅಥವಾ ಮಹಾರಾಜರಿಗೆ ಸಲಹೆ ನೀಡಬೇಕಾದರೇ ಅವುಗಳ ಪೂರ್ವಾಪರ ಆಳವಾಗಿ ಅಧ್ಯಯನ ಮಾಡಿ ಚಿತ್ರದ ರಚನೆ ಅದರ ಅವಶ್ಯಕತೆ, ರಾಜಾಸ್ಥಾನಕ್ಕೆ ಹೇಗೆ ಪೂರಕವಾಗುತ್ತದೆ ಎಂಬುದನ್ನು ಶಾಸ್ತ್ರಾದಾರ ಸಹಿತವಾಗಿ ಸವಿವರವಾಗಿ ಸಲ್ಲಿಸುತ್ತಿದ್ದರು. ಆ ಒಂದೊಂದು ಮೂರ್ತಿಯ ಹಲವಾರು ವಿವಿಧ ಭಂಗಿಗಳನ್ನು ರೇಖಿಸಿ (Sketch) ಅಂತಿಮವಾಗಿ ಒಂದನ್ನು ಆರಿಸಿ ಅವುಗಳಿಗೆ ಪ್ರಾರಂಭಿಕ ವರ್ಣ ಲೇಪನ ಮಾಡಿ, ಅವುಗಳು ಶಾಸ್ತ್ರಸಂಹಿತೆಗೆ ಅನುಗುಣ ವಾಗಿಯೇ ಇಲ್ಲವೋ ಪರಾಮರ್ಶಿಸಿ ನಂತರ ದೊಡ್ಡ ಪ್ರಮಾಣದಲ್ಲಿ ಚಿತ್ರಿಸುತ್ತಿದ್ದರು. ಶಾಸ್ತ್ರಾಧ್ಯಯನಕ್ಕೆ ಪೂರಕವಾದ ಗ್ರಂಥಗಳ ರಾಶಿಯೇ ಅವರಲ್ಲಿತ್ತು. ಅವುಗಳ ಸತತ ಅಧ್ಯಯನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಕಲ್ಗೆಲಸ್, ಚಿನ್ನಾಭರಣಗಳ ಕೆಲಸ, ಚಿತ್ರರಚನೆ ಜೊತೆಗೆ ಸ್ವಾಮಿತ್ವ ಕಟ್ಟುನಿಟ್ಟಾದ ದ್ವಿಕಾಲ ಪೂಜೆ ಸಾಮೂಹಿಕ ಪ್ರಾರ್ಥನೆ ಇವು ದಿನನಿತ್ಯದ ಚಟುವಟಿಕೆ ಯಾಗಿತ್ತು.

ಅರಮನೆಗೆ ಅಗತ್ಯವೆನಿಸಿದ ಕಲಾರಚನೆ ಜೊತೆಗೆ ಶ್ರೀಜಯಚಾಮರಾಜ ಒಡೆಯರ್‌ರವರ ಅಪೇಕ್ಷೆ ಮೇರೆಗೆ ಹೊಯ್ಸಳ ಮಾದರಿಯ ಕಾಮೇಶ್ವರ ಕಾಮೇಶ್ವರಿ ದೇವಾಲಯ ನಿರ್ಮಾಣ ಹಾಗೆಯೇ ತಮ್ಮ ಗುರುಕುಲದ ನಿರ್ಮಾಣ, ಅವುಗಳ ಒಂದೊಂದು ದೇವತೆಗಳನ್ನು ಕುರಿತ ಪೂರ್ವಭಾವಿ ಚಿತ್ರಣ. ನಾಡಿನಾದ್ಯಂತ ಸ್ವಾಮಿಗಳವರನ್ನು ಭೇಟಿಮಾಡಲು ವಿಗ್ರಹ ಮಾಡಿಸಿಕೊಳ್ಳಲು ಬರುತ್ತಿದ್ದ ಅಪಾರ ಜನಸಂದಣಿಯಲ್ಲೂ ಸ್ಥಿತಪ್ರಜ್ಞರಾಗಿರುತ್ತಿದ್ದರು, ದೃತಿಗೆಡುತ್ತಿರಲಿಲ್ಲ. ಎಲ್ಲವನ್ನು ದೈವೇಚ್ಛೆ ಎಂದು ಕಷ್ಟಸುಖಗಳನ್ನು ಸರಿಸಮನಾಗಿ ಸ್ವೀಕರಿಸುತ್ತಿದ್ದರು.

ಅನೇಕ ಪುಸ್ತಕಗಳಿಗೆ, ಶಾಸ್ತ್ರಾಧ್ಯಯನಶಕ್ತರಿಗೆ ಸೂಕ್ತ ಮಾರ್ಗದರ್ಶನ ಮಾಡುವುದರ ಜೊತೆಗೆ ಸಂದೋರ್ಭೋಚಿತ ಚಿತ್ರಗಳನ್ನು ರಚಿಸಿದ್ದಾರೆ. ಇವರು ಕೊಡುತ್ತಿದ್ದ ಕಲಾಶಿಕ್ಷಣ ಗುರುಕುಲ ಮಾದರಿಯದು. ವಿದ್ಯಾರ್ಥಿಯಾದವನು ಪ್ರಾತಃಕಾಲದಲ್ಲಿ ಎದ್ದು ಶುಚಿತ್ವಭೂತನಾಗಿ, ಪ್ರಾರ್ಥನೆ, ಧ್ಯಾನ, ಮೌನ, ಪೂಜೆನಡೆಸಿ ಗುರುಗಳ ಸೇವೆಸಲ್ಲಿಸಿ ನಂತರ ವಿದ್ಯಾಭ್ಯಾಸ ಮಾಡಬೇಕು. ಸ್ವಾಮಿಗಳು ಹಾಕಿದ ಗೆರೆಯನ್ನು ದಾಟದಂತೆ ಅವರ ಮಾರ್ಗ ದರ್ಶನದಲ್ಲಿ ಕಲಾಭ್ಯಾಸ ಮಾಡಬಾಕೇಗಿತ್ತು. ಅಂದರೇನು ಪೂರ್ಣಸ್ವಾತಂತ್ರ್ಯವಿಲ್ಲವೆಂದಲ್ಲ. ಸ್ವಾತಂತ್ರವಿತ್ತು, ಸ್ವಚ್ಛಂದಪ್ರವೃತ್ತಿ ಸಲ್ಲದು. ಚಿತ್ರ, ಶಿಲ್ಪ ಯಾವುದೇ ಆಗಲೀ, ಅಧ್ಯಯನ ಅಗತ್ಯ ಎಂಬುದು ಸ್ವಾಮಿಗಳವರು ಶಿಷ್ಯರಿಗೆ ತೋರಿಸಿದ ಮಾರ್ಗ. ತತ್ಫಲವಾಗಿಯೇ ಅವರಿಂದ ಕಲಿತ ಶಿಷ್ಯ್ಯರು ಕೆತ್ತನೆಯಲ್ಲಿ ವಿಶ್ವಖ್ಯಾತಿ ಗಳಿಸಿದ್ದಾರೆ. ಇಂದಿನ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರು, ನಾಡಿನ ಸುಪ್ರಸಿದ್ಧ ಶಿಲ್ಪಕ್ಕೆ ಸಂಬಂಧಿಸಿದ ಜಕಣಾಕಾರಿ ಪ್ರಶಸ್ತಿ ಪಡೆದ ಶ್ರೀ ಪರಮೇಶ್ವರಾಚಾರ್, ವಿಷಕಂಠಾಚಾರ್. ಚನ್ನವೀರಯ್ಯ, ಶಂಕರಯ್ಯ, ಬಸವಣ್ಣ ವಿ, ಇನ್ನು ನೂರಾರು ಶಿಲ್ಪಿಗಳು ಅವರಿಂದಲೇ ತಯಾರಾದವರು. ಆದರೇ ಚಿತ್ರಕಲೆಯಲ್ಲಿ ಮಾತ್ರ ಸ್ವಾಮಿಗಳವರ ಶಿಷ್ಯಸಮೂಹ ತಯಾರಾದಂತೆ ಎಲ್ಲಿಯೂ ಕಂಡುಬರುವುದಿಲ್ಲ. ಬೆರಳೆಣಿಕೆಯಷ್ಟು ಮಂದಿ ಕೆಲವರಿದ್ದಾರೆ. ಅದರಲ್ಲಿ ಶ್ರೀಮತಿ ಸುಭಾಷಿಣಿ ದೇವಿಯವರು ಅಗ್ರಮಾನ್ಯ ರಾಗುತ್ತಾರೆ. ಸ್ವಾಮಿಗಳ ಪುತ್ರರು ಹಾಗೂ ನನ್ನ ಗುರುಗಳು ಆದ ಶ್ರೀ ಎನ್. ನಾಗೇಂದ್ರ ಸ್ಥಪತಿಗಳು ಸ್ವಾಮಿಗಳ ಚಿತ್ರಗಳನ್ನು ತೋರಿಸಿ, ಕಲಾಸಾಧನೆ ತಪಸ್ಸಿನಂತೆ ತದೇಕಚಿತ್ತದಿಂದ ತನ್ಮಯತೆ ಯಿಂದ ಅಭ್ಯಾಸಮಾಡಬೇಕೆಂದು ತಿಳಿಸುತ್ತಿದ್ದರು.

ಅರಮನೆಯ ಸಕಲ ಸವಲತ್ತುಗಳು ಲಭಿಸಿವೆ ನಿಮಗೇನು ಕೊರತೆ ಎಂದು ಕೆಲವರು ಪ್ರಶ್ನಿಸಿದ್ದು ಉಂಟು. ಅಷ್ಟೇ ಸಮಾಧಾನ ದಿಂದ ನೀವು ಹೇಳುವುದು ನಿಜ, ಆದರೆ ಸಮಯವೆಂಬುದನ್ನು ಯಾರು ಕೊಡುತ್ತಿಲ್ಲವಲ್ಲ. ದಿನದ ಇಪ್ಪತ್ನಾಲ್ಕು ಗಂಟೆ ದುಡಿದರೂ ಸಾಲದು. ಅಷ್ಟೊಂದು ಕೆಲಸಗಳು ನಾಡಿನಾದ್ಯಂತ ಬರುತ್ತವೆ. ನನಗೆ ಸಮಯ ದೊರಕಲಿ ಅರಮನೆ ಸವಲತ್ತುಗಳನ್ನು ನೀವೇ ಪಡೆಯಿರಿ ಎಂದು ತಿರುಗುಬಾಣ ಬಿಡುತ್ತಿದ್ದರೆಂದು ಅವರ ಸಮಕಾಲೀನರು ನೆನಪಿಸಿಕೊಳ್ಳುವಲ್ಲಿ ಅವರಿಗಿದ್ದ ಜನಪ್ರಿಯತೆ, ಹಾಗೆಯೇ ಕೆಲವರ ಅಸೂಯೆಯು ಅರ್ಥವಾಗುತ್ತದೆ.

ಇಂತಹ ಅಪೂರ್ವ ಕಲಾಕಾರರು, ಶಿಲ್ಪಿಗಳು, ಪಾಂಡಿತ್ಯ ಪ್ರತಿಭೆಯುಳ್ಳ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಬಗ್ಗೆ ಇತ್ತೀಚಿನ ತಲೆಮಾರಿನವರಿಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದು

ವಿಷಾದನೀಯ. ಕಲಾ ಚರಿತ್ರೆಯನ್ನು ಬರೆಯುವ ಕಲಾವಿಮರ್ಶೆಯನ್ನು ಮಾಡುವ ಇಂದಿನ ತಜ್ಞರೆನಿಸಿಕೊಂಡವರು ತೋರುವ ದಿವ್ಯ ನಿರ್ಲಕ್ಷ್ಯವೂ ಒಂದು ಪ್ರಮುಖ ಕಾರಣವಾಗಿರಬಹುದು.

ದೇವತಾಮೂರ್ತಿ ಚಿತ್ರಗಳು, ಕ್ಯಾಲೆಂಡರ್ ಚಿತ್ರಗಳು, ಅಕಾಡೆಮಿಕ್ ಶೈಲಿಯವು, ರೋಮಾಂಟಿಕ್ ಕಲೆ ಎಂದು ಸರಳವಾಗಿ ತಿರಸ್ಕರಿಸುವ ನಮ್ಮ ಸಮುದಾಯಗಳು, ವಿಶ್ವಕಲಾ ಇತಿಹಾಸವನ್ನು ಹೇಳುವ ಸಂದರ್ಭದಲ್ಲಿ ಲಿಯೋನಾರ್ಡೊ ಡಾ ವಿಂಚಿ, ಮೈಕಲಾಂಜಲೋ ಅಂತಹವರನ್ನು ವೈಭವಿಕರಿಸುತ್ತಾರೆ. ವ್ಯಾಟಿಕೆವ್‌ನ ಸಿಸ್ಟೀನ್ ಚಾಪಲ್ ಛಾವಣಿಯಲ್ಲಿ ರಚಿಸಿದ ಕಲಾಕೃತಿಗಳು ಅತ್ಯದ್ಭುತ ಹಾಗೂ ಪ್ರಪಂಚವನ್ನು ಸೃಷ್ಟಿಸಿದನೆಂದು ನಂಬಿರುವ ಆದಮ್ ಮತ್ತು ಈವ್ ದೇವತೆಗಳ ಕಥಾಹಿನ್ನೆಲೆಯಲ್ಲಿಯೇ ರಚಿಸಿದ ಚಿತ್ರಗಳನ್ನು ಅತ್ಯುನ್ನತ ಚಿತ್ರಗಳೆಂದು ಪರಿಗಣಿಸಿ ಕಲಾ ಚರಿತ್ರೆಯಲ್ಲಿ ಸಂಲಗ್ನಗೊಳಿಸಿ ಪ್ರಚಾರಗೊಳಿಸುತ್ತೇವೆ. ಈಗರ್ಜಿ ಅಥವಾ ಚರ್ಚಗಳಲ್ಲಿ ರಚಿಸಿರುವ ಚಿತ್ರಗಳ ಪ್ರತಿಭಾಗವನ್ನು ಬಿಡಿ ಬಿಡಿಯಾಗಿ ಉಲ್ಲೇಖಿಸಿ ಅವುಗಳ ಕಾಲ, ರಚಿಸಿದ ಕಲಾವಿದನ ಬಗ್ಗೆ ಅಧ್ಯಯನ ನಡೆಸುತ್ತೇವೆ. ಆದರೇ ಭಾರತೀಯ ಪದ್ಧತಿಗೆನುಗುಣವಾದ ಚಿತ್ರರಚಿಸಿದ ಕಲಾಕಾರರನ್ನು ಅವಜ್ಞೆಯಿಂದ ಕಾಣುತ್ತೇವೆ. ಆ ಸಂದರ್ಭದಲ್ಲಿ ಆಯಾಯ ಕಲಾವಿದನಿಗೆ ಅವಕಾಶವೊದಗಿದ ಪರಿಸರ ಹಿನ್ನೆಲೆ, ಬೆಳೆದು ಬಂದ ರೀತಿಯನ್ನು ಗಣನೆಗೆ ತೆಗೆದುಕೊಂಡು ಆ ಕಲಾ ಕೃತಿಗಳಿಂದ ಅಥವಾ ಶಿಲ್ಪಗಳಿಂದ ಮುಂದಿನ ತಲೆಮಾರಿಗೆ ಎಷ್ಟು ಉಪಯುಕ್ತ ಎಂಬುದನ್ನು ಚಿಂತಿಸುವುದು ಅಗತ್ಯವೆನಿಸುತ್ತದೆ.

ಸ್ವಾಮಿಗಳವರ ಕಲಾಕೃತಿಗಳ ಹಿನ್ನೆಲೆಯಲ್ಲಿಯೇ ಅವರ ಸಮಕಾಲೀನರೇ ಆದ ಶ್ರೀ ವೆಂಕಟಪ್ಪನವರ ಹಾಗೂ ತುಸು ಹಿರಿಯರಾದ ರಾಜಾರವಿವರ್ಮ ಅವರ ಕಲಾಕೃತಿಗಳನ್ನು ಕುರಿತು ತೌಲನಿಕ ಅಧ್ಯಯನದ ಅಗತ್ಯವಿದೆ. ಶ್ರೀವೆಂಕಟಪ್ಪನವರ (ಜನನ ೧೮೮೬) ಸ್ವಾಮಿಗಳ ಜನನ ೧೮೮೫, ಬಂಗಾಳ ಶೈಲಿಯಲ್ಲಿ ಕಲಿತು ಬಂದವರು ವೆಂಕಟಪ್ಪನವರು, ನಿಸರ್ಗದ ಚಿತ್ರಗಳಿಗೆ ಹೆಚ್ಚು ಒತ್ತುಕೊಟ್ಟವರು, ವೀಣೆಯಂತಹ ಮೃದುವಾದ್ಯವನ್ನು ನುಡಿಸುವುದು ಮಾತ್ರವಲ್ಲ ಸ್ವತಃ ಅದನ್ನು ಮಾಡಿದವರು. ಸ್ವಾಮಿಗಳಾದರೋ, ಆಳವಾಗಿ ಶಿಲ್ಪಶಾಸ್ತ್ರ ಅಧ್ಯಯನ ಮಾಡಿದರು. ಸಂಸ್ಕೃತ ಪಂಡಿತರೂ ಆಗಮ ಶಾಸ್ತ್ರ ವಿಶಾರದರು, ಜ್ಯೋತಿಷ್ಯ ಪ್ರವೀಣರು, ಮುಖ್ಯವಾಗಿ ಅತ್ಯಂತ ನವುರಾದ, ಸೌಮ್ಯವಾದ, ಭಕ್ತಿಪೂರ್ವಕ ಚಿತ್ರಗಳನ್ನು ರಚಿಸಿದವರು, ನೂರಾರು ಜನ ಶಿಷ್ಯರನ್ನು ತಯಾರು ಮಾಡಿದವರು ಎಂಬುದನ್ನು ಅಧ್ಯಯನದ ಮೂಲಕ ತಿಳಿಯಬೇಕು.

ಹಾಗೆಯೇ ರವಿವರ್ಮರ ಚಿತ್ರಗಳನ್ನು ಕುರಿತು ಹೇಳುವಾಗ ಕನ್ನಡ ನಾಡಿನ ಪ್ರಖ್ಯಾತ ಲೇಖಕ ದಿ|| ಅ. ನ. ಕೃ., ರವರು 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ ಎಂಬ ವಿಮರ್ಶೆಯ ಪುಸ್ತಕದಲ್ಲಿ ರವಿವರ್ಮನ ಶೈಲಿ, ರಚನಾತಂತ್ರ ಪಾಶ್ಚಿಮಾತ್ಯ ಅವನತಿ ಕಾಲದವು ಎಂಬುದ್ದಾಗಿ ವಿವರಿಸಿ ಭವ್ಯಕಲ್ಪನೆಯ ಭಾರತೀಯ ದೃಷ್ಟಿಗೆ ಆತ ಚಿತ್ರಿಸಿದ ಪುರಾಣ ವಸ್ತುಗಳು ಸರಿಹೊಂದಲಾರವು ಎಂಬ ವಿವರ ನೀಡುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ಸ್ವಾಮಿಗಳವರ ಕಲಾಕೃತಿಯನ್ನು ಕುರಿತು ಬರೆಯುವಾಗ ಯಾವುದೇ ಅವಸರದ ತೀರ್ಮಾನಕ್ಕೆ ಅಥವಾ ಆಧುನಿಕ ದೃಷ್ಟಿಕೋನಕ್ಕೆ ಅನುಗುಣವಾಗಿ ವಿಮರ್ಶಿಸುವುದು ಸೂಕ್ತವಲ್ಲ. ಚಿತ್ರಗಳ ಸಂಖ್ಯೆ, ಪ್ರದರ್ಶನ ಮಾಡಿದ ಸಂಖ್ಯೆ ಮುಖ್ಯವಲ್ಲ. ಮುಖ್ಯವಾಗಿ ಇಂದಿನ ಹಾಗೆ ಪ್ರದರ್ಶನಕ್ಕಾಗಿಯೇ ಚಿತ್ರ ರಚಿಸುವುದು ಚಾಲ್ತಿಯಲ್ಲಿರಲಿಲ್ಲ. ಆಯಾಯ ಕಲಾವಿದರ ಅನುಭವದ ಹಿನ್ನಲೆಯಲ್ಲಿ ರೂಪುಗೊಳ್ಳುವ ಕಲಾಕೃತಿಗಳೇ ಶಾಶ್ವತ ಪ್ರದರ್ಶನಗಳಾಗಿರುತ್ತಿದ್ದವು.

ಸ್ವಾಮಿಗಳವರ ಶಾಸ್ತ್ರದಾರಿತವಾದ ಚಿತ್ರಗಳನ್ನು ಕುರಿತು ಹೇಳುವಾಗ 'ಮಾನಸಾರ'ವೆಂಬ ಉದ್ಗ್ರಂತಕ್ಕೆ ಚಿತ್ರ ರಚಿಸಿಕೊಟ್ಟ ವಿಚಾರವನ್ನರಿಯುವುದು ಮುಖ್ಯವೆನಿಸುತ್ತದೆ. ಮೂಲ ಸಂಸ್ಕೃತ ಗ್ರಂಥವಾದ ಮಾನಸಾರ ವಾಸ್ತು ಮತ್ತು ಶಿಲ್ಪದ ವಿವರ ಆಯಾಮಗಳನ್ನು ಸವಿಸ್ತಾರವಾಗಿ ತಿಳಿಸುವ ಗ್ರಂಥ. ಅದನ್ನು ಆಂಗ್ಲಭಾಷೆಗೆ ಅನುವಾದಿಸುವ ಮಹೀತ್ವದ ಕೆಲಸವನ್ನು ಹಮ್ಮಿಕೊಂಡವರು ಅಲಹಬಾದ್ ವಿಶ್ವವಿದ್ಯಾಲಯದ ಸಂಸ್ಕೃತ ಪ್ರೊಫೆಸರ್ ಮತ್ತು ಪ್ರಾಚ್ಯವಸ್ತು ಸಂಶೋದನಾಲಯದ ಮುಖ್ಯಸ್ಥರು ಆದ ಪ್ರಸನ್ನಕುಮಾರ್ ಆಚಾರ್ಯ, ಅವರು ಲಂಡನ್ ಮತ್ತು ಲೇಡನ್‌ಗಳಲ್ಲಿ ಡಿ ಲಿಟ್ ಮತ್ತು ಪಿ. ಎಚ್‌ಡಿ ಪಡೆದ ವಿದ್ವಾಂಸರು.

ಶ್ರೀಯುತರು ಮಾನಸಾರ ಶಿಲ್ಪಶಾಸ್ತ್ರ ಬರೆಯುವಾಗ ಅದಕ್ಕೆ ಸಂಬಂಧಿಸಿದಂತೆ ದೇವತಾಮೂರ್ತಿ ಚಿತ್ರಗಳನ್ನು ಬರೆಸುವ ಯೋಜನೆ ಹಮ್ಮಿಕೊಂಡರು. ಸ್ಥಳೀಯರನ್ನು ಸಂಪರ್ಕಿಸಿ ಚಿತ್ರ ಬರೆಸಿದರಾರೂ ಮನಸ್ಸು ಒಪ್ಪಲಿಲ್ಲ. ಅದಕ್ಕೆ ಕಾರಣ ಸ್ಪಷ್ಟವಾದದ್ದೆ. ಪ್ರಾಚ್ಯವಸ್ತುವಿನ ಪೂರ್ವಾಪರತೆಯನ್ನು ಅರ್ಥ ಮಾಡಿಕೊಂಡು ಅಂದಿನ ದೃಷ್ಟಿಯಿಂದ ಕಲಾಸೃಷ್ಟಿ ಮಾಡ ಬೇಕಾಗಿತ್ತು. ಶಾಸ್ತ್ರಗಳ ಹಿನ್ನಲೆಯು ಅಗತ್ಯವಾಗಿತ್ತು.

ಈ ದೃಷ್ಟಿಯಿಂದಲೇ ಕಲಾವಿದರನ್ನರಸುತ್ತಾ ಹೊರಟು, ಅಂದು ಹೆಚ್ಚು ಕಲಾವಲಯದಲ್ಲಿ ವ್ಯಾಪಕ ಹೆಸರು ಗಳಿಸಿದ್ದ ಸ್ಥಳಗಳಾದ ಬಾಂಬೆ, ಬರೋಡ, ಕಲ್ಕತ್ತಾ, ಡೆಲ್ಲಿ, ಜೈಪುರ, ಶಿಲ್ಲಾಂಗ್, ಅಜಮೀರ್, ಲಕ್ನೊ, ಆಂದ್ರ, ಮದ್ರಾಸ್ ಬೆಂಗಳೂರಲ್ಲಿ ಸಂಚರಿಸಿ ಬರೆಸಿದರಾದರೂ ಪೂರ್ಣಪ್ರಮಾಣದ ತೃಪ್ತಿ ತರಲಿಲ್ಲ, ನಿರಾಶೆಯ ಆವರಿಸಿದ್ದ ಸಂದರ್ಭದಲ್ಲಿ ಜ್ಯೋತಿಯ ದರ್ಶನವಾಯಿತು. ಸ್ಥಳೀಯ ಪ್ರಾಚ್ಯವಸ್ತು ಸಂಶೋಧನಾಲಯದ ನಿರ್ದೇಶಕರಾದ ಎಂ. ಎಚ್. ಕೃಷ್ಣ ಅವರ ಮೂಲಕ.

ಆ ಜ್ಯೋತಿ ಬೇರೆ ಯಾರು ಅಲ್ಲ ಶ್ರೀ ಶಿಲ್ಪ ಸಿದ್ದಾಂತಿ ಸಿದ್ದಲಿಂಗಸ್ವಾಮಿಗಳವರು, ಪ್ರೊಫೆಸರ್ ಪ್ರಸನ್ನ ಕುಮಾರ್ ಆಚಾರ್ಯರವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಶ್ರೀಗಳವರನ್ನೇ ದರ್ಶಿಸುವುದೇ ಕಷ್ಟಸಾಧ್ಯವಾಗಿದ್ದ ಕಾಲ. ಬಿಡುವಿಲ್ಲದ ಅರಮನೆ ಕೆಲಸಗಳು, ಬೇಡವೆಂದರೂ ಬಿಡದಂತೆ ಪಟ್ಟುಹಿಡಿದು ವಿಗ್ರಹಗಳನ್ನು ಮಾಡಿಸಲು ಕಾಯ್ದಿದ್ದ ಜನಸಮೂಹ. ಮೇಲಾಗಿ ಸ್ವಾಮಿಗಳನ್ನು ಕಾಣಲು ಬರುತ್ತಿದ್ದ ನೂರಾರುಜನ. ಇವೆಲ್ಲದರ ನಡುವೆ ಆಚಾರ್ಯರವರಿಗೆ ಸಂದರ್ಶವಿತ್ತು ಅವರ ಮನವಿಯನ್ನು ಪುರಸ್ಕರಿಸಿ ಕೆಲವನ್ನು ಮಾತ್ರ ಬರೆದುಕೊಡಲು ಒಪ್ಪಿದರು. ಬತ್ತಿಹೋದ, ಹೊಲಕ್ಕೆ ನೀರೆರೆದಾಗ ಆಗುವ ಆನಂದದಂತೆ ಆಚಾರ್ಯರ ಮನ ಮುದಗೊಂಡಿತು. ಆನಂದ ಹೇಳತೀರದಾಯಿತು. ಸುಮಾರು ಒಂದುವರೆ ವರ್ಷಗಳ ಕಾಲವಧಿಯಲ್ಲಿ ಇಪ್ಪತ್ತೆರಡು ರೇಖಾಚಿತ್ರಗಳನ್ನು ಬರೆದು ಕೊಟ್ಟರು. ನೂರಾರು ಚಿತ್ರ ಮಾಡಿಸಬೇಕೆಂಬ ಹಂಬಲ, ಪ್ರೊಫೆಸರ್ ಆಚಾರ್ಯರವರದಾಗಿತ್ತು. ಆದರೇ ಸ್ವಾಮಿಗಳವರಿಗೆ ಸಮಯವೆಲ್ಲಿ?

ಪ್ರೊಫೆಸರ್ ಪ್ರಸನ್ನ ಕುಮಾರ ಆಚಾರ್ಯ ಅವರು ARCHITECTURE OF MANASARA ಪ್ರಕಟಿತ ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್ ಈ ಪುಸ್ತಕದ ಮುನ್ನಡಿಯಲ್ಲಿ ಬರೆದಿರುವ ಸಾಲುಗಳನ್ನೇ ಯಥಾವತ್ ಮುದ್ರಣಗೊಳಿಸುವುದರಿಂದ ನೈಜತೆಯ ಅರಿವುಂಟಾಗುತ್ತದೆಂಬುದರಲ್ಲಿ ಎರಡು ಮಾತಿಲ್ಲ. ಅವರು ತಮ್ಮ ಮುನ್ನುಡಿಯಲ್ಲಿ "The sculptural drawings in line and in colours could not be given the same advantage of joint deliberation, mutual consulation, and final revision. Despite the fact that there is an ever-growing class of artists all over India, most of those of local renown and teachers of recognized schools of arts in Bombay, Baroda, Delhi, Lahore, Lucknow, Allabhabad, Ajmer, jaipur, Jodhpur, Calcutta, Shillong, Cuttack, Puri, Madras, and Bangalore refused, after due deliberation, to under-take the work: and the few artists who agreed. on their own terms, gave up the task after trials lasting from two to three months. At Last Professor M.H. Krishna, M.A.D. Litt Director of Archaeology, Mysore State, took me to several local artists and undertook to select one for me. But after protracted negetiations lasting over eight months he gave upt in disgust the prospect of finding a reliabel person for the purpose. declaring that "our old-type artists are so old-worldly in their business habits." But I am thankful to him for having brought me in contact with Silpa siddhanti sivayogi Sri Siddalinga swamy, the head of the Jagadguru Nagalingaswamy monastery, who claims to be "a Silpin by heredity". to have "studied silpa, painting, etc. at the feet of Guru" and to have ben "training for a quarter of a century a number of youths in the art of sculpture, painting, and kindred subjects according to sastric canons." He undertook, after an experiment lasting for nearly a year, to supply twenty-two drawings on which another six months were spent. I believe that he has, given the best of his inherited skill, ripe experience, and spiritual study of the subject to these scuptural drawings.

In the absence of the expected assistance and personal supervision of Dr. Krishna, the elucidation of the details had to be carried out in lengthy, and at times, trying correspondence. I shall, however, remain grateful to Silpa Siddanti sivayogi Sri Siddalingaswamy who, among all the artists I had approached, had the courage and patience of partly illustrating to sculaptural section of the Encyclopaedia of Hindu Arts, and hopes to execute the remaining sculptural drawings, numbering some three hundred, it his present performance proves successful and if the Manasara itself receives the practical recognition it deserves" ಎಂದು ಸ್ವಾಮಿಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಿ ಪಡಿಸಿದ್ದಾರೆ. ಇದರಿಂದ ಸ್ವಾಮಿಗಳು ಕಲೆಯಲ್ಲಿ ಎಷ್ಟು ಪ್ರಾವೀಣ್ಯ ಪಡೆದಿದ್ದರೆಂಬುದು ತಿಳಿಯುತ್ತದೆ.

ಭಾರತದ ಅತ್ಯುನ್ನತ ಶ್ರೀಮಂತ ಉದ್ಯಮಿ ಜೆ.ಡಿ. ಬಿರ್ಲಾರವರು ಇಂಗ್ಲೆಂಡ್‌ನ್ನು ಉತ್ತಮವಾದ ಶಿವದೇವಾಲಯವನ್ನು ನಿರ್ಮಾಣ ಮಾಡಬೇಕೆಂದು ಉದ್ದೇಶಿಸಿ, ಭಾರತೀಯ ಪದ್ಧತಿಗೆ ಅನುಗುಣವಾದ ವಾಸ್ತು ವಿನ್ಯಾಸಕಾರರು ಮತ್ತು ಶಿಲ್ಪಿಗಳನ್ನು ಹುಡುಕುತ್ತಾ ಹೊರಟು ಅಂತಿಮವಾಗಿ ಶ್ರೀಷ ಚಂದ್ರ ಚಟರ್ಜಿ ಮತ್ತು ಶ್ರೀ ಸಿದ್ಧಲಿಂಗಸ್ವಾಮಿಗಳವರಿಗೆ ಈ ದೇವಾಲಯ ನಿರ್ಮಾಣ ಕಾರ್ಯವನ್ನು ವಹಿಸುವದೆಂದು ನಿರ್ಧರಿಸಿದರು.

ಶ್ರೀಷ ಚಂದ್ರ ಚಟರ್ಜಿಯವರು ಮೂಲತಃ ಕಲ್ಕತ್ತಾದವರು. ಭಾರತದ ಪ್ರಖ್ಯಾತ ವಾಸ್ತು ಶಿಲ್ಪಿಗಳು. ಸ್ಥಾಪತ್ಯವಿಶಾರದ (Skilled in Archilecture) ಎಂಬ ಖ್ಯಾತಿಗೊಳಗಾದವರು. ಭಾರತ ಮತ್ತು ವಿದೇಗಳಲ್ಲಿ ಸುತ್ತಾಡಿ ಅಲ್ಲಿನ ಆಹ್ವಾನದ ಮೇರೆಗೆ (Guest lecture) ವಾಸ್ತು ಕಟ್ಟಡ ಮತ್ತು ಭಾರತೀಯ ಪರಂಪರೆಯ ಬಗ್ಗೆ ನೂರಾರು ಭಾಷಣಗಳನ್ನು ನೀಡಿರುವುದಲ್ಲದೇ ಕಟ್ಟಡ ನಿರ್ಮಾಣದಲ್ಲಿ ಮಾರ್ಗದರ್ಶನ ನೀಡಿದವರು.

ಬಂಗಾಳದ ಅಂದಿನ ಖ್ಯಾತ ಕಲಾವಿದರಾದ ಅವನೀಂದ್ರ ನಾಥ ಠಾಗಾರ್, ರವೀಂದ್ರನಾಥ ಠಾಗಾರ್ ಅವರ ಸ್ನೇಹವುಳ್ಳವ ರಾಗಿದ್ದರು. ಸುಭಾಶ್‌ಚಂದ್ರ ಬೋಸ್‌ರ ಆಪ್ತರಾಗಿದ್ದವರು. ಭಾರತೀಯ ದೇವಾಯಗಳು, ಸ್ವರೂಪ, ರಚನೆ ಅವುಗಳಲ್ಲಿ ಆದ ಪರಿವರ್ತನೆ, ಮಹಮ್ಮದಿಯರ ಆಗಮನದಿಂದಾದ ವಸ್ತು ಕಟ್ಟಡದ ಮೇಲುಂಟಾದ ಪರಿಣಾಮಗಳ ಅಧ್ಯಯನವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಮೈಸೂರಿನಲ್ಲಿ ಸ್ವಾಮಿಗಳವರನ್ನು ದರ್ಶಿಸಿ ಶಿಲ್ಪಶಾಸ್ತ್ರದ ಬಗ್ಗೆಯೂ ಅನೇಕ ವಿಚಾರಗಳನ್ನು ತಿಳಿದವರಾಗಿದ್ದರು. ಬಿರ್ಲಾರವರ ಕರೆಗೆ ಸಹಜವಾಗಿ ಓಗೊಟ್ಟರು. ಸಿದ್ಧಲಿಂಗ ಸ್ವಾಮಿಗಳವರನ್ನು ಬಿರ್ಲಾರವರು ಬೇಟಿಯಾಗಿ ಅರಮನೆಯ ಮತ್ತಿತರ ಕಲಾಕೃತಿ ಶಿಲ್ಪಗಳನ್ನು ನೋಡಿ ಮಹದಾನಂದ ಪಟ್ಟು, ದೇವಾಲಯದ ಸ್ವರೂಪ, ಯಾವ ಯಾವ ಮೂರ್ತಿಗಳಿರಬೇಕು ಎಂಬೆಲ್ಲಾ ವಿಚಾರ ಮಾಡಿ ಅವರಿಗೆ ಮೂಲ ನಕಾಶೆ ತಯಾರಿಸಲು ಕೇಳಿಕೊಂಡು, ಶಿಲ್ಪಗಳ ಕೆತ್ತನೆಗೆ ಆರಂಭಿಸುವ ಸಕಲ ಸಿದ್ಧತೆಗಳನ್ನು ಮಾಡುವಂತೆ ಮನವಿ ಮಾಡಿದರು.

ಸ್ವಾಮಿಗಳವರಿಗೆ ಬಿಡುವಿಲ್ಲದ ಕೆಲಸಗಳಲ್ಲಿ ಒಪ್ಪುವುದೋ ಬಿಡುವುದೋ ಎಂಬ ಜಿಜ್ಞಾಸೆಯಾಗಿ, ವಿದೇಶಕ್ಕೆ ಭಾರತೀಯ ಸಂಸ್ಕೃತಿ ಪ್ರಸಾರವಾಗುವಾಗ ಏನೇ ಕಷ್ಟವಾಗಲಿ ಮಾಡುವುದೇ ಸೂಕ್ತವೆಂದು ನಿರ್ಧರಿಸಿದರು. ಶಿಲ್ಪರಚನೆಗೆ ಬೇಕಾದ ಪೂರ್ವ ಸಿದ್ಧತೆಗಳು ಆರಂಭವಾದವು ಆದರೆ ಯುದ್ಧಆರಂಭವಾದ ಕಾರಣ, ಎಲ್ಲೆಲ್ಲಿಯೂ ಅಸಹಕಾರ, ಅನಗತ್ಯ ಅಡಚಣೆ ರಾಜಕೀಯದ ಮಹತ್ತರ ತಿರವುಗಳು ಶಿವದೇವಾಲಯದ ನಿರ್ಮಾಣ ಯೋಜನೆಗೆ ಅಡ್ಡಗಾಲಾದವು, ನಿಂತುಹೋಯಿತು. ನಿರೀಕ್ಷೆಯಂತೆ ಆಗಿದ್ದರೇ ಮೂರ್ತಿಗಳನ್ನು ರಚಿಸಿಕೊಡುವುದರ ಜೊತೆಗೆ ಸ್ಥಾಪನೆಗೆ ಸಹ ಸ್ವಾಮಿಗಳವರು ಇಂಗ್ಲೇಂಡಿಗೆ ಹೋಗುವ ವಿಚಾರವಿತ್ತೆಂದು ಹೇಳುವಲ್ಲಿ ಅವರ ಶಿಷ್ಯೆ ಶ್ರೀಮತಿ ಸುಭಾಷಿಣಿದೇವಿಯವರು ಅಂದಿನ ಕಲಾ ವೈಭವವನ್ನು ಸ್ಮರಿಸಿಕೊಳ್ಳುತ್ತಾರೆ.

ಈ ಎಲ್ಲಾ ಅಂಶಗಳು ಸ್ವಾಮಿಗಳವರ ಕಾರ್ಯವ್ಯಾಪ್ತಿಯ ಬಗ್ಗೆ ಕ್ಷ ಕಿರಣ ಬೀರಲು ಸಹಾಯಕವಾಗುತ್ತವೆ.

ಸ್ವಾಮಿಗಳವರ ಸಾಹಿತ್ಯ ಸಂಪತ್ತು

ಸ್ವಾಮಿಗಳವರು ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಜ್ಞಾನ ಸಂಪತ್ತುಳ್ಳವರಾಗಿದ್ದರು. ತಮಿಳು, ತೆಲುಗು, ಹಿಂದಿ ಇಂಗ್ಲೀಷ್ ಬಲ್ಲವರಾಗಿದ್ದರು. ಕನ್ನಡದಲ್ಲಿ ಅಪಾರ ಪಾಂಡಿತ್ಯಗಳಿಸಿದ್ದರೆಂಬುದಕ್ಕೆ ಅವರ ಪ್ರಕಟಿತ ಪುಸ್ತಕಗಳು ಸಾಕ್ಷಿಯಾಗಿವೆ. ವಿದ್ವತ್‌ಜ್ಜನರಿಗೆ ಸೀಮಿತಗೊಂಡಿದ್ದ ವೇದಗಳ ಮರ್ಮ ಎಲ್ಲರಿಗೂ ತಿಳಿಯಬೇಕೆಂಬ ಬೃಹದಾಶೆ ಇಟ್ಟುಕೊಂಡಿದ್ದ ಸ್ವಾಮಿಗಳವರು ಚತುರ್‌ವೇದಗಳಲ್ಲಿ (ಋಗ್ವೇದ, ಯಜುರ್ವೇದ, ಸಾಮವೇದ, ಅಥರವಣ) ಒಂದಾದ ಋಗ್ವೇದವನ್ನು ಕನ್ನಡದಲ್ಲಿ ತರುವ ಯೋಜನೆ ಮಾಡಿದರು. ಆದರೇ ಅದು ಸುಲಭ ಸಾಧ್ಯವೇ, ಅಪಾರವಾದ ಹಣದ ಅವಶ್ಯಕತೆ ಇರುವಂತಹದ್ದು, ಶ್ರಮವೂ ಅಷ್ಟೆ.

ಪ್ರಜಾಹಿತ ದೃಷ್ಟಿಯಿಂದ ಕರ್ನಾಟಕ ಭಾಷೆಯಲ್ಲಿ ಮುದ್ರಣವಾಗಬೇಕೆಂಬ ಅಭಿಪ್ರಾಯವನ್ನು ಶ್ರೀಮನ್ ಮಹಾರಾಜ ರವರಲ್ಲಿ ಪ್ರಸ್ತಾಪಿಸಿ, ಅದರ ಅವಶ್ಯಕತೆಯ ಪೂರ್ಣ ವಿವರವನ್ನು ನೀಡಿ ಜ್ಞಾನ ಚಕ್ಷುವನ್ನು ತೆರೆಸಿದ ಪರಿಣಾಮವಾಗಿ ವೈದಿಕ ತತ್ವ ರಹಸ್ಯಗಳನ್ನು ಕರ್ನಾಟಕ ಭಾಷೆಯಲ್ಲಿ ತರಲು (ಕನ್ನಡ ಭಾಷೆ ಎಂದೂ ಎಲ್ಲಿಯೂ ಬಳಸಿಲ್ಲ) ವೇದ ವಿಮರ್ಶನ ವಿದ್ವನ್ ಮಂಡಲಿ ಸ್ಥಾಪಿಸಿ ಅದರ ಅಧ್ಯಕ್ಷರಾಗಲು ಶ್ರೀಸ್ವಾಮಿಗಳವರನ್ನೇ ಕೋರಿಕೊಳ್ಳಲಾಯಿತು.

"ಋಗ್ವೇದ ಸಂಹಿತಾ" ಎಂಬ ನಾಮಾಂಕಿತದಿಂದ ೨೫ ಭಾಗಗಳಲ್ಲಿ ಪ್ರಕಟಿಸಬೇಕೆಂದು ಕನಿಷ್ಠ ಒಂದೊಂದು ಭಾಗಕ್ಕೂ ಸಾವಿರ ಪುಟಗಳಿರಬೇಕೆಂದು ನಿರ್ಧರಿಸಿ, ವೇದ ವಿಮರ್ಶನ ಮಂಡಲಿಯ ಸದಸ್ಯರನ್ನಾಗಿ ಆಸ್ಥಾನ್ ವಿದ್ವಾಂಸರುಗಳಾದ ಶ್ರೀ ಹೆಚ್. ಪಿ. ವೆಂಕಟರಾವ್ ಮತ್ತು ಲಕ್ಷ್ಮಣಾಚಾರ್ಯ ಅವರುಗಳನ್ನು ಮಹಾರಾಜರು ನೇಮಿಸಿದರು. ಅತ್ಯಂತ ಆಸಕ್ತಿಯಿಂದ ಶ್ರದ್ಧಾ ಪೂರ್ವಕವಾಗಿ ಅನುವಾದ ಕಾರ್ಯ ವರ್ಷಗಟ್ಟಲೇ ನಡೆಯಿತು. ಯಾವುದೇ ವಿಷಯದಲ್ಲಿ ಭಾಷೆಯ ತೊಡಕು, ವಿಶ್ಲೇಷಣೆಯ ಕೊರತೆ ಕಂಡುಬಂದಲ್ಲಿ, ಅದರ ಅಧ್ಯಕ್ಷರಾದ ಸ್ವಾಮಿಗಳವರು ಅತ್ಯಂತ ಲೀಲಾಜಾಲವಾಗಿ ತಮ್ಮ ಪಾಂಡಿತ್ಯ ಪ್ರಭೆಯಿಂದ ಅವುಗಳ ವಿವರ ನೀಡಿ ಮುದ್ರಣಕ್ಕೆ ನೆರವಾಗುತ್ತಿದ್ದರು. ಅದಕ್ಕೊಂದು ಸುಂದರವಾದ ಮುಖಪುಟ ವಿನ್ಯಾಸ ರಚಿಸಿಕೊಟ್ಟರು. ಜಗದಾದಿ ಕತೃವಾದ ಪರಮೇಶ್ವರನ ಪಂಚಮುಖಗಳನ್ನು ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣರಾದ ತ್ರಿಮೂರ್ತಿಗಳನ್ನು ಸರ್ವಶಿಲ್ಪಕ್ಕೂ ಆದಿಮೂಲವಾದ ಶ್ರೀ ವಿಶ್ವಕರ್ಮರನ್ನು ಅಳವಡಿಸಿದ ಚಿತ್ರದ ಚೌಕಟ್ಟು ಅತ್ಯಂತ ಅರ್ಥಗರ್ಭಿತವಾಗಿದ್ದು, ವಿಷಯಾಗ್ರಹಿಗಳಿಗೆ ಉಪಯುಕ್ತವಾಗಿದೆ.

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾದ ಮೂಲಕ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳು ಪ್ರಕಟಗೊಂಡಿವೆ.

ಆದರಲ್ಲಿ ಕೆಲವು ಸಂಸ್ಕೃತದ ಅನುವಾದವಾದರೇ ಕೆಲವು ಸ್ವತಂತ್ರ ಕೃತಿಗಳು. ಅದರಲ್ಲಿ ಮುಖ್ಯವಾದ ಅನುವಾದ ಗ್ರಂಥ "ಶ್ರೀ ಮತ್ಕೌಮಾರ ಭಾಷ್ಯೋಪೇತಾ ಶ್ರೀಮಚ್ಛಿಲ್ಪ ವಿದ್ಯಾ ರಹಸ್ಯೋ ಪನಿಷತ್" ವಿದ್ವತ್‌ಪೂರ್ಣವಾದ ಈ ಪುಸ್ತಕದ ಅನುವಾದಕರು ಸ್ವಾಮಿಗಳವರು. ಪೀಠಿಕೆಯಲ್ಲಿ ವೇದ ಮತ್ತು ಶಿಲ್ಪಗಳ ಕಾಲವನ್ನು ಪ್ರಸ್ತಾಪಿಸಿ ವೇದದ ಆರಂಭ ಶಿಲ್ಪದ ಆರಂಭಕಾಲ ಎರಡು ಒಂದೇ. ವಿಶ್ವಸೃಷ್ಟಿಯೇ ಶಿಲ್ಪಕರ್ಮನಾಗಿರುವುದರಿಂದ ಸೃಷ್ಟಿಕಾಲದಿಂದಲೂ ಶಿಲ್ಪವೂ ಸರ್ವತೋಮುಖವಾಗಿದ್ದು ಲೌಕಿಕ ಮತ್ತು ಪಾರಮಾರ್ಥಿ ಗಳೆರಡಕ್ಕೂ ಸೇತುವೆಯಂತಿದೆ. ವೇದದಲ್ಲಿ ಮಂತ್ರ, ಬ್ರಾಹ್ಮಣಗಳು ಕರ್ಮಕಾಂಡವಾಗಿಯೂ, ಉಪನಿಷತ್ತುಗಳು ಜ್ಞಾನಕಾಂಡ ವಾಗಿಯೂ ಇರುವಂತೆ ಶಿಲ್ಪದಲ್ಲಿ ಕರ್ಮ, ಜ್ಞಾನ ಭಾಗಗಳದ್ದು ಶಿಲ್ಪ ವೇದವೆನಿಸುತ್ತದೆ. "ಚಾರಣ್ಯ ವ್ಯೂಹದಲ್ಲಿ" ಸ್ಥಾಪತ್ಯವೇದೋ ವಿಶ್ವಕರ್ಮಾದಿ ಶಿಲ್ಪಶಾಸ್ತ್ರ ಮಥರ್ವವೇದ್ಯೋಪವೇದಃ ಎಂದು, ಭಾಗವತದಲ್ಲಿ "ವಿಜ್ಞಾನಂ ಶಿಲ್ಪನೈಪುಣ್ಯಂ" ಎಂದು ಪ್ರಮಾಣ ವಿರುವುದರಿಂದ ಶಿಲ್ಪವೂ ವೇದದಿಂದಲೇ ಪ್ರಸಿದ್ಧವಾಗಿದೆಯೆಂದು ತಮ್ಮ ಪೀಠಿಕೆಯಲ್ಲಿ ಅನೇಕ ಉದಾಹರಣೆ ಸಹಿತ ವಿವರಿಸಿದ್ದಾರೆ. ಶಿಲ್ಪದ ಆದಿಯನ್ನು ಆಧಾರ ಸಹಿತ ವಿವರಿಸುವಲ್ಲಿ ಸ್ವಾಮಿಗಳವರ ಅಧ್ಯಯನ ಅನಂತವಾಗಿದೆಯೆಂಬುದನ್ನು ತೋರಿಸುತ್ತದೆ.

ಸ್ವಾಮಿಗಳು ಕಾವ್ಯರಚನೆಯಲ್ಲಿಯೂ ಅಗ್ರಮಾನ್ಯರಾಗಿದ್ದ ರೆಂಬುದಕ್ಕೆ ಅವರ 'ಶಿಲ್ಪಸಾರ' (ಶ್ರೀಜಯಚಾಮರಾಜೇಂದ್ರ ಶಿಲ್ಪಕಲಾ ಗ್ರಂಥಮಾಲಾ ಪ್ರಕಟಿತ ೧೯೪೮) ನಿದರ್ಶನವಾಗಿದೆ. ಷಟ್ಪದಿಯ (೬ ಸಾಲುಗಳುಳ್ಳ) ನೂರೆಂಟು ಪದ್ಯಗಳನ್ನು ರಚಿಸಿದ್ದಾರೆ. ಶಿಲ್ಪಿಯು ಎಲ್ಲದರಲ್ಲಿಯೂ ಇದ್ದಾನೆ. ಶಿಲ್ಪವಿಲ್ಲದುದು ಯಾವುದು. ಲೌಕಿಕದಲ್ಲಿ ಉಪಯೋಗಿಸುವ ಯಾವುದೇ ವಸ್ತುವಾಗಲೀ, ಅವೆಲ್ಲವೂ ಶಿಲ್ಪಿಯಿಂದಲೇ ಆದವು. ಸಕಲಾಭರಣ, ಜಲಯಾನಾದಿಗಳು, ಚಿತ್ರಲೇಖನಾದಿಗಳು, ಯುದ್ಧಸಲಕರಣೆಗಳು, ಅಡಿಗೆ ಪರಿಕರಗಳು, ಯಜ್ಞಕುಂಡ ಇತ್ಯಾದಿಗಳು ಶಿಲ್ಪಿಯ ಸೃಷ್ಟಿಯಿಂದಲ್ಲವೇ ಸಾಕಾರ ವಾಗಿರುವುದು ಎನ್ನುವುದಕ್ಕೆ ಅವರ ಷಟ್ಪದಿಯ ಸಾಲು ಹೀಗಿದೆ.

ಜ್ಞಾನ ಸಾಧನವೆಲ್ಲ ಶಿಲ್ಪವು
ಧ್ಯಾನ ಸಾಧನವೆಲ್ಲ ಶಿಲ್ಪವು
ದಾನ ಸಾಧನವೆಲ್ಲ ಶಿಲ್ಪವು ಸ್ವರ್ಗಸಾಧನವು
ಗಾನಸಾಧನ, ಯಾನಸಾಧನ
ಮಾನಸಾಧನ, ಪಾನಸಾಧನ
ಸ್ನಾನಸಾಧನ ಸವನ ಸಾಧನವೆಲ್ಲಾ ಶಿಲ್ಪಮಯಂ
ಪದ್ಯ ೬೮

ಆಸನಗಳನ್ನು ಕುರಿತು ಹೇಳುವಾಗ,
ಆಸನವು ಸಿಂಹಾಸನವು ಭ-
ದ್ರಾಸನವು ವೀರಾಸನವು ವಿದು-
ಲಾಸನವು ವಿಜಯಾಸನವಿವೆಲ್ಲವೂ ಶಿಲ್ಪನಿರ್ಮಿತವು
ವಾಸವನ ಘನತರ ವಜ್ರಮಯ
ದಾಸನವು ಯೋಗಾಸನ ಭ್ರಮ-
ರಾಸನವು ಹಂಸಾಸನಂಗಳು ಶಿಲ್ಪಚಾತುರ್ಯಂ॥ ಪದ್ಯ ೬೯

ಹೀಗೆ ಶಿಲ್ಪಿಯ ಪಾತ್ರ ಪಾತ್ರತೆಯನ್ನು ೧೦೮ ಪದ್ಯ ಗಳಲ್ಲಿ ಹೃದಯಂಗಮವಾಗಿ ವಿವರಿಸಿ ಶಿಲ್ಪವಲ್ಲದುದು, ಶಿಲ್ಪಿಯಿಂದಾಗದುದು ಯಾವುದೆಂದು ಪ್ರಶ್ನಿಸಿ ಇದನ್ನು ತಿಳಿಯಲು ಅರಿವಿನ ಕಣ್ಣು ಅಗತ್ಯವೆನ್ನುತ್ತಾರೆ ಸ್ವಾಮಿಗಳು.

ಸ್ವಾಮಿಗಳವರ ಗುರುಗಳಾದ ಶ್ರೀ ನಂಜುಂಡ ಶಿವಯೋಗೀಶ್ವರ ಇಪ್ಪತ್ತೈದನೇ ಆರಾದನ ಮಹೋತ್ಸವ ಸಂದರ್ಭದಲ್ಲಿ ಸಹ "ಶ್ರೀಗುರುಗೀತಾ" "ಶ್ರೀಶಿವಗೀತಾ" ಎಂಬ ಎರಡು ಗ್ರಂಥಗಳನ್ನು "ಶ್ರೀಜಯಚಾಮರಾಜೇಂದ್ರ ಗೀತಾ ರತ್ನಮಾಲಾ" ಮೂಲಕ ೧೯೫೦ರಲ್ಲಿ ಪ್ರಕಟಿಸಲಾಗಿದೆ. ಶ್ರೀ ಸಿದ್ಧಲಿಂಗಸ್ವಾಮಿಗಳವರ ಪ್ರಸ್ತಾವನೆಯೊಂದಿಗೆ ಅನುವಾದ ಗೊಂಡಿರುವ ಈ ಗ್ರಂಥಗಳಲ್ಲಿ "ಗುರುಗೀತಾ" ಸ್ಕಂದ ಪುರಾಣದ ಉಮಾಮಹೇಶ್ವರ ಸಂವಾದಾತ್ಮಕ ಭಾಗವಾಗಿದ್ದು, ಗುರುವಿನ ಅವಶ್ಯಕತೆ ಕುರಿತಂತೆ ದೇಶೀಯ ಭಾಷೆಯಲ್ಲಿ ತಿಳಿಸುವುದಾಗಿದ್ದರೇ, "ಶಿವಗೀತೆ"ಯು ೧೬ ಅಧ್ಯಾಯಗಳುಳ್ಳದ್ದಾಗಿದ್ದು ಪದ್ಮಪುರಾಣದ ಮೋಕ್ಷಯೋಗವೆಂಬ ವಿಚಾರವನ್ನರಹುದಾಗಿದೆ. ಸಂಸ್ಕೃತದ ಸಾರಾವೆಲ್ಲವನ್ನು ಸಾರ್ವಜನಿಕರಿಗೂ ತಿಳಿಯುವಂತೆ, ಮಾಡ ಬೇಕೆಂಬುದೇ ಸ್ವಾಮಿಗಳವರ ಬೃಹದಿಚ್ಛೆಯಾಗಿತ್ತು. ಇಚ್ಛೆಮಾತ್ರವಲ್ಲ ಅನುಷ್ಠಾನಗೊಳಿಸಲು ಶ್ರೀಮನ್ ಮಹಾರಾಜರನ್ನು ಇತರ ದಾನಿಗಳನ್ನು, ಅಭಿಮಾನಿಗಳನ್ನು ಪ್ರೇರೇಪಿಸುತ್ತಿದ್ದರು. ತತ್ಪಲ ವಾಗಿಯೇ ಜಯಚಾಮರಾಜೇಂದ್ರ ಗ್ರಂಥಮಾಲಾದಿಂದ ೧೮ ಮಹಾಪುರಾಣ ೧೮ ಉಪಪುರಾಣ ಇತಿಹಾಸಗ್ರಂಥಗಳಲ್ಲಿ ಅನೇಕ ಪುಸ್ತಕಗಳು ಕನ್ನಡದಲ್ಲಿ ಬಂದವು. -ಋಗ್ವೇದವು, ಸೇರಿದಂತೆ

ತಮ್ಮ ಗುರುಗಳ ಆರಾಧನೆ ಪ್ರತಿವರ್ಷ ನಡೆಸುತ್ತಿದ್ದ ಸಂದರ್ಭದಲ್ಲಿ ನೀಡಿದ ಆಶೀರ್ವಚನವನ್ನು ಅವರ ಶಿಷ್ಯರು ಕಿರುಹೊತ್ತಿಗೆಯ ರೂಪದಲ್ಲಿ ಪ್ರಚುರ ಪಡಿಸಿದ್ದಾರೆ. ಅದರಲ್ಲಿ "ಸದ್ಗುರ್ವಾರಾಧನೆಯ ಮಹಿಮೆ" (೧೯೪೪) ಸದುಪದೇಶ (೧೯೪೮) ಜ್ಞಾನಯೋಗ ರಹಸ್ಯ (೧೯೪೯) ಮುಖ್ಯವಾಗಿದ್ದು ಸ್ವಾಮಿಗಳವರು ತಮ್ಮ ಅಪಾರ ಅನುಭವದಿಂದ ಸಂಸ್ಕೃತದ ಸಾರವನ್ನು ಅತ್ಯಂತ ತಿಳಿಗನ್ನಡದಲ್ಲಿ ತಿಳಿಹೇಳಿದ್ದಾರೆ. ಕಿರು ಹೊತ್ತಿಗೆಯು "ಶಿಲ್ಪಸಿದ್ದಾಂತ ಗ್ರಂಥರತ್ನಮಾಲಾ"ದಿಂದ ಪ್ರಕಟಿತಗೊಂಡಿದೆ.

ಶ್ರೀಸ್ವಾಮಿಗಳವರು ಶೈವ ಶಿಲ್ಪಿಗಳ ವಿದ್ಯಾಭ್ಯಾಸಕ್ಕೆ, ಆತ್ಮೋನ್ನತಿಗೆ ಸಹಕಾರಿಯಾಗುವಂತೆ ಯುವಜನ ಸಂಘವೊಂದನ್ನು ಸ್ಥಾಪಿಸಿ (೭-೮-೧೯೪೬) "ಶೈವ ಶಿಲ್ಪಿ ಪ್ರಭಾ" ಎಂಬ ಪ್ರಸಿದ್ಧ

ಪತ್ರಿಕೆ ಹೊರಡಿಸುವುದರ ಮೂಲಕ ಜಡತ್ವಗೊಂಡವರನ್ನು ಚೇತನಗೊಳಿಸುವುದರತ್ತ ಗಮನಹರಿಸಿದರು.

ಸ್ವಾಮಿಗಳವರು ಚಿತ್ರ ಶಿಲ್ಪಾದಿಗಳ ಕಡೆ ಗಮನ ಹರಿಸುವಷ್ಟೇ ಆಧ್ಯಾತ್ಮದ ಕಡೆಗೂ ಇದ್ದುದರ ಪರಿಣಾಮ ಜಪ, ತಪ, ವಿದಿ ವಿಧಾನಗಳು ಜನಮಾನ್ಯವಾಗಬೇಕು. ಎಲ್ಲರಿಗೂ ಅರ್ಥವಾಗಬೇಕು ಎಂಬ ಸದಿಚ್ಛೆಯಿಂದ "ಅಜಪಾ ಗಾಯತ್ರಿ ಜಪ ವಿದಾನಂ" ಎಂಬ ಗ್ರಂಥವನ್ನು ಅನುವಾದಿಸಿ ದೇಶಿಯ ಭಾಷೆಯ ಸೊಗಡನ್ನು ಹೆಚ್ಚಿಸಿದರು. ಮನೆ ಮನೆಯ ಮನದೆಲ್ಲೆಡೆ ಗಾಯತ್ರಿ ಪಠಣ ತಾಯ್ನುಡಿಯಲ್ಲಿ ದೊರೆಯುವಂತಾಯ್ತು.

ಶಿಲ್ಪರಚನೆ ಎಷ್ಟು ಮುಖ್ಯವೊ ಅಷ್ಟೇ ಮುಖ್ಯವಾದದ್ದು ಆಯಾಯ ಶಿಲ್ಪದ ಬಗ್ಗೆ ತಿಳುವಳಿಕೆ ಪಡೆಯುವಂತಹದ್ದು. ವಿಚಾರ, ವಿಜ್ಞಾನರಹಿತವಾಗಿ ರಚಿಸುವ ಶಿಲ್ಪದ ಆಯಸ್ಸು ಅತಿಕಡಿಮೆ. ಜೊತೆಗೆ ಶ್ರೇಯಸ್ಸು ತರುವಂತಹದಲ್ಲ. ಶಿಲ್ಪಿಗಳಾಗ ಬಯಸುವವರಿಗೆ, ಪಾರಂಪರಿಕವಾಗಿ ಶಿಲ್ಪವನ್ನು ಮಾಡಿಕೊಂಡು ಬಂದವರಿಗೂ ಶಿಲ್ಪವಿಜ್ಞಾನ ಅಂದರೇ ತಾಳಮಾನ, ಲಕ್ಷ್ಮಣ ಪ್ರಮಾಣಗಳನ್ನರಿಯದೇ ರಚಿಸಿದ ದೃಷ್ಟಾಂತಗಳನ್ನು ಕಂಡ ಸ್ವಾಮಿಗಳು "ಶೈವ ಶಿಲ್ಪಬ್ರಹ್ಮರ್ಶಿ ಗುರುಕುಲ" ಎಂಬ ನಾಮಧೇಯದಿಂದ ಪ್ರಾರಂಭಿಸಿ (೧೯೪೯) ಶಿಲ್ಪಕಲಾ ತರಬೇತಿ ಯನ್ನು ಜೊತೆಗೆ ಇತರ ಭಾಷಾಜ್ಞಾನ ಪಡೆಯುವವರಿಗೆ ಪ್ರೋತ್ಸಾಹ ಮಾಡುವುದರ ಜೊತೆ ಜೊತೆಯಲ್ಲಿಯೇ "ಶಿಲ್ಪಾದರ್ಶಃ" ಎಂಬ ಕಿರುಹೊತ್ತಿಗೆ ಪ್ರಾರಂಭಿಸಿ, ಮನೋನ್ಮಾನ ಪ್ರಮಾಣ, ಹಸ್ತ ಕಂಬಿಯ ಲಕ್ಷಣ, ನಗರ ನಿರ್ಮಾಣಕ್ರಮ, ದೇವಾಲಯ, ಸ್ತೂಪ, ಪ್ರಾಕಾರ, ಗೋಪುರ, ಪ್ರಾಸಾದ, ಗೃಹಗಳ ನಿರ್ಮಾಣಕ್ರಮ, ಬಿಂಬಗಳ ನಿರ್ಮಾಣ ಇತ್ಯಾದಿ ವಿವರಗಳನ್ನು ಶಿಲ್ಪ ವಿದ್ಯಾ ಜಿಜ್ಞಾಸುಗಳಿಗೆ ಪ್ರೋತ್ಸಾಹಿಸುವ ಯೋಜನೆ ಹಮ್ಮಿಕೊಂಡರು. ಯಾವುದೇ ಚಿತ್ರವಾಗಲಿ, ಶಿಲ್ಪವಾಗಲೀ, ಶಾಸ್ತ್ರ ಸಹಿತವಾಗಿರಬೇಕು ಅದನ್ನು ಮುಂದಿನ ತರುಣ ಪೀಳಿಗೆ ಅರಿಯಬೇಕೆಂಬ ದೃಷ್ಟಿ ವೈಶಾಲ್ಯಕ್ಕೆ ಭಾಷಾಭಿಮಾನಕ್ಕೆ ಸಾಕ್ಷಿಯಾಗಿವೆ. ಈ ಪುಸ್ತಕಗಳು ಸ್ವಾಮಿಗಳು ದೇಶಿಯ ಭಾಷೆಯಲ್ಲಿ ಎಲ್ಲವನ್ನು ತರಬೇಕು. ಸಾಮಾನ್ಯ ಜನರಲ್ಲಿ ಶಾಸ್ತ್ರಗಳ ಆಂತರ್ಯ ತಿಳಿಯಬೇಕೆಂದು ಪ್ರಕಟಗೊಳಿಸದ ಪುಸ್ತಕಗಳು ನಮಗಿಂದು ದಾರಿದೀವಿಗೆಯಾಗಿವೆ.

ಶಿಲ್ಪದ ಸೊಗಸು

ಶ್ರೀಸಿದ್ದಲಿಂಗ ಸ್ವಾಮಿಗಳು ತಮ್ಮ ಬಾಲ್ಯ ವಿದ್ಯಾಭ್ಯಾಸದ ಜೊತೆಗೆ (ಕೊಳ್ಳೆಗಾಲ) ಪರಂಪರಾಗತವಾಗಿ ಮನೆತನಕ್ಕೆ ಒಲಿದಿದ್ದ ಶಿಲ್ಪಸೃಷ್ಟಿಯ ಕಾಯಕವನ್ನು ಮೈಗೂಡಿಸಿಕೊಂಡಿದ್ದರು. ಆದರೇ ಅವರ ಮನದ ತುಡಿತ ಒಂದು ರೀತಿಯ ಪ್ರಸನ್ನತೆಯನ್ನು, ಏಕಾಂತತೆಯನ್ನು ಬಯಸುತ್ತಿತ್ತು. ಪವಿತ್ರ ಕ್ಷೇತ್ರವಾದ ನಿಜಗುಣ ಶಿವಯೋಗಿಗಳವರ ತಪೋಭೂಮಿ ಶಂಬುಲಿಂಗೇಶ್ವರನ ಬೆಟ್ಟವು ಅವರನ್ನು ಆಕರ್ಷಿಸಿತು. (ಇದರ ಮತ್ತೊಂದು ಹೆಸರು ಚೆಲಕವಾಡಿ ಬೆಟ್ಟ) ರಾಜತ್ವವನ್ನು ತೊರೆದು ವಿರಾಗಿಯಾಗಿ, ವೈರಾಗ್ಯ ಮೂರ್ತಿಯಾದ ನಿಜಗುಣರು ಸಗುಣ ಸಾಕ್ಷಾತ್ಕಾರವನ್ನು ಹೊಂದಿದ ಸ್ಥಳ, ಅವರು ಬರೆದಿರುವ ಕೈವಲ್ಯ ಪದ್ಧತಿ, ಪರಮಾನುಭವ ಬೋಧೆ, ಪರಮಾರ್ಥಗೀತೆ, ಅನುಭವಸಾರ, ವಿವೇಕ ಚಿಂತಾಮಣಿ, ಪರಮಾರ್ಥ ಪ್ರಕಾಶಿಕೆಗಳು ಕನ್ನಡ ಸಾಹಿತ್ಯದ ಉತ್ಕೃಷ್ಟ ಗ್ರಂಥಗಳು. ಕೈವಲ್ಯ ಪದ್ಧತಿಯಂತೂ ಹಲವು ರಾಗಗಳ ರಸದೌತಣವನ್ನೀಯುವ ತತ್ವಪದ, ಇವುಗಳು ಮಹತ್ತರ ಪರಿಣಾಮ ಬೀರಿದವು. ಆ ಕ್ಷೇತ್ರ ಮಹಿಮೆ ಮತ್ತು ಶ್ರೀ ನಿಜಗುಣರ ಬಗ್ಗೆ ಇದ್ದ ಪೂಜ್ಯಭಾವಗಳು ಸ್ವಾಮಿಗಳವರಿಗೆ ತಾವು ಇಲ್ಲಿಯೇ ಅನುಷ್ಠಾನ ಮಾಡಬೇಕೆಂಬ ಪ್ರೇರಣೆಗೆ ಕಾರಣವಾಯಿತು. ತತ್ಪಲವಾಗಿ ತಮ್ಮ ಯೌವ್ವನಾವಸ್ಥೆಯ ಪ್ರಥಮದಲ್ಲಿಯೇ ಅಲ್ಲಿರುವ ಗುಹೆಯೊಳಗೆ ಕುಳಿತು ಏಕಾಗ್ರಚಿತ್ತರಾದರು. ಮನಸ್ಸನ್ನು ವಿಕಲ್ಪದಿಂದ ಸಂಕಲ್ಪದೆಡೆಗೊಯ್ಯುವ ಸಧೃಡತೆಯ ತಪವನ್ನಾಚರಿಸಿದರು.

ಸ್ವಾಮಿಗಳವರು ತಾವು ಪಡೆದುಕೊಂಡ ಸಂಕಲ್ಪ ಸಿದ್ದಿಯ ದ್ಯೋತಕವಾಗಿ ಆ ಗುಹೆಯೊಳಗೆ ದಕ್ಷಿಣಾಮೂರ್ತಿಯ ಮತ್ತು ನಂದಿಕೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಆಗ್ಗೆ ಅವರಿಗೆ ಸುಮಾರು ಹದಿನೆಂಟು ವಯಸ್ಸು. ಅದೇ ಅವರ ಮೊದಲ ಸ್ವತಂತ್ರ ಕೃತಿಯು ಕೂಡಾ. ಆಲದ ಮರದಡಿಯಲ್ಲಿ ಕುಳಿತ ವೀಣಾಪಾಣಿ ದಕ್ಷಿಣಾಮೂರ್ತಿ ಚತುರಬಾಹುಗಳನ್ನು ಹೊಂದಿದ್ದಾನೆ. ಮುಂಗಾಲುಗಳು ಪರಸ್ಪರ ಸಂದಿಸುವಂತೆ ಕತ್ತರಿಗಾಲಲ್ಲಿ ಕುಳಿತ ಮುದ್ರೆಯಾಗಿದೆ. ಯೋಗ ಪಟ್ಟವು ಮೊಳಕಾಲು ಮತ್ತು ದೇಹವನ್ನು ಬಂದಿಸಿದೆ. ಆ ಪಾದಗಳ ಕೆಳಭಾಗದಲ್ಲಿ ಋಷಿಮುನಿಗಳ ಕೆತ್ತನೆಯಿದೆ. ಆ ಮುನಿಗಳ ವಿವರಗಳು ವಿಶಿಷ್ಠ, ಭೃಗು, ಜಮದಗ್ನಿ, ಭರದ್ವಾಜ, ಶೌನಕ, ಅಗಸ್ತ್ಯನೆಂದು ಕಾಶ್ಯಪಶಿಲ್ಪ ಶಾಸ್ತ್ರದ ಮೂಲಕ ತಿಳಿದು ಬರುತ್ತದೆ. ಹಾಗೆಯೇ ಅದರ ಪಕ್ಕದಲ್ಲಿ ನಂದೀಶ್ವರನ ಮೂರ್ತಿ ಇದೆ. ಮಾನವ ದೇಹ, ಹಸುವಿನ ತಲೆ, ಮತ್ತು ಚತುರ ಬಾಹುಗಳನ್ನು ಹೊಂದಿದೆ. ಈ ಮೂರ್ತಿಗಳು ಗುಹೆಯೊಳಗಿದ್ದು ಗುರುತಿಸುವುದೇ ಕಷ್ಟವೆನಿಸುತ್ತದೆ. ತದನಂತರದಲ್ಲಿ ಮೈಸೂರು ಅವರ ಕಾರ್ಯಕ್ಷೇತ್ರವಾಗುತ್ತದೆ.

ಆ ವೇಳೆಗಾಗಲೇ ವೀಣೆಯ ಬೆಡಗಿದು ಮೈಸೂರು ಎಂಬ ಖ್ಯಾತಿಗೆ ಬಾಜನವಾಗಿತ್ತು. ಅಂದಿನ ಪ್ರಖ್ಯಾತ ಸಂಗೀತ ವಿದ್ವಾಂಸರಾದ ವೀಣೆಶೇಷಣ್ಣ (೧೮೫೨-೧೯೨೬) ವೀಣಾ ಸುಬ್ಬಣ್ಣ (೧೮೫೪-೧೯೩೯) ಬಿಡಾರಂ ಕೃಷ್ಣಪ್ಪ (೧೮೬೬-೧೯೩೧) ವೀಣಾ ವೆಂಕಟಗಿರಿಯಪ್ಪ (೧೮೮೭-೧೯೫೨) ಬಿ. ದೇವೇಂದ್ರಪ್ಪ, ಚಿಕ್ಕರಾಮರಾಯರು (೧೮೯೦-೧೯೪೫) ಪ್ರಸಿದ್ಧಿ

ಪಿಟೀಲು ವಾದಕರಾದ ಟಿ. ಚೌಡಯ್ಯ (೧೮೯೪-೧೯೬೭) ಶ್ರೇಷ್ಠ ಪಿಟೀಲುವಾದಕ ಕುರುಡು ಶಿವರುದ್ರಪ್ಪ, ಮೈಸೂರು ವಾಸು ದೇವಾಚಾರ್ಯ, ಬಳ್ಳಾರಿ ರಾಘವ, ಆರ್. ಎನ್. ದೊರೆಸ್ವಾಮಿ ಮುಂತಾದವರು ಸಂಗೀತ ಸೊಬಗನ್ನು ನೀಡಿದ್ದರೇ, ನೃತ್ಯ ಕ್ಷೇತ್ರದಲ್ಲಿ ಜಟ್ಟಿ ತಾಯಮ್ಮ, ಮಳವಳ್ಳಿ ಸುಂದರಮ್ಮ, ಮೂಗೂರು ಸುಬ್ಬಣ್ಣ, ಮೂಗೂರು ಜೇಬಮ್ಮ, ಬೆಂಗಳೂರು ನಾಗರತ್ನಮ್ಮ, ಸುಬ್ಬಮ್ಮ, ಸೇರುಕಡ್ಲೆ ಲಕ್ಷ್ಮಕ್ಕ, ಕೊರಮುರೆ ದೇವಮ್ಮ ಮಗಳು ವ್ಯಾಸಮ್ಮ, ಇಂದಿಗೂ ನಮ್ಮೊಡನೆ ಇರುವ ಡಾ॥ ಕೆ. ವೆಂಕಟಲಕ್ಷ್ಮಮ್ಮ, ಇನ್ನು ಅನೇಕ ನೃತ್ಯಗಾರರು, ನೃತ್ಯಾಗಾತಿಯರು, ಮೈಸೂರಿನ ಮಹತ್ತನ್ನು ನಾಲ್ದೆಸೆಗೆ ಪಸರಿಸುವ ಕಾರ್ಯವನ್ನು ಮಾಡುತ್ತಿದ್ದರು. ಅದೇ ವೇಳೆಗೆ ನಾಟಕ ಕ್ಷೇತ್ರದಲ್ಲಿ ಗುಬ್ಬಿವೀರಣ್ಣ ಮತ್ತು ಮಹದೇವಸ್ವಾಮಿ ಕಂಪನಿ ನಾಟಕಗಳು, ಟೈಗರ್ ವರದಾಚಾರ್‌ರಂತಹ ನಟರು, ಇವೆಲ್ಲರ ಕಾರ್ಯಸ್ಥಾನ, ಪೋಷಿಸುವ, ಬೆಳೆಸುವ, ಕೇಂದ್ರ ಮೈಸೂರು ಅರಮನೆಯದಾಗಿತ್ತು. ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರುಗಳು ಸ್ವತಃ ವಿದ್ವಾಂಸ ರಾಗಿದ್ದರು. ಲಲಿತಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಹಾಗೆಯೇ ಶ್ರೀಮನ್ ಜಯಚಾಮರಾಜ ಒಡೆಯರ್ ಅವರು ಸಹ ಸ್ವತಃ ವಾಗ್ಮೀಯಕಾರರು. ಚಿತ್ರಕಲಾ, ಶಿಲ್ಪಾದಿಗಳ ಪೋಷಕರು ಆಗಿದ್ದರು. ಮುಮ್ಮುಡಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಿಶೇಷವಾಗಿ ಸಂಗೀತ, ನೃತ್ಯಗಳಿಗೆ ಪ್ರೋತ್ಸಾಹ ದೊರಕಿದರೆ ಶ್ರೀ ಜಯಚಾಮರಾಜ ಒಡೆಯರ್ ಕಾಲದಲ್ಲಿ ಚಿತ್ರ ಮತ್ತು ಶಿಲ್ಪಗಳಿಗೆ ಮಹೊನ್ನತ ಸ್ಥಾನ ದೊರಕಿತು ಎಂಬುದಕ್ಕೆ ಸಾಕ್ಷಿಯಾಗಿ ಸ್ವಾಮಿಗಳವರನ್ನು ಮೈಸೂರು ಆಕರ್ಷಿಸಿತು.

(ತೌಲನಿಕ ಅಧ್ಯಯನಾಶಕ್ತರಿಗೆ ಮೈಸೂರು ಒಡೆಯ ರವರುಗಳು ಲಲಿತಕಲೆಗಳಿಗೆ ನೀಡಿದ ಪ್ರೋತ್ಸಾಹದ ಅಂತಃಸತ್ವವನ್ನು ಅರಿಯಲು ಸಹಾಯಕವಾಗುತ್ತವೆ ಈ ಅಂಕಿ ಅಂಶಗಳು)

ಸಿದ್ದಲಿಂಗ ಸ್ವಾಮಿಗಳು ತಮ್ಮ ಗುರುಗಳಾದ ನಂಜುಂಡ ಶಿವಯೋಗಿಗಳವರೊಡನೆ ಆಗಮನಿಸಿ ತಮ್ಮ ಕಾರ್ಯವನ್ನು ಮೈಸೂರಿನಲ್ಲಿ ಆರಂಭಿಸಿದಾಗ ಆದ ಅಡಚಣೆಗಳು, ಅನ್ಯರ ಅಸಹನೆಗಳು, ಇವೆಲ್ಲ ಕಷ್ಟಪರಂಪರೆಗಳು ಇತರ ಸಂಗೀತ, ನೃತ್ಯ ಕಲಾವಿದರಿಗೊದಗಿದಂತೆಯೇ ಸ್ವಾಮಿಗಳಿಗೂ ಕಾಡಿತು. ಆದರೇ ಸಂಕಲ್ಪ ಸಿದ್ಧಿ, ಪೂಜಾನುಸ್ಥಾನ, ಮೇಲಾಗಿ ಕಲೆ ಶಿಲ್ಪಾದಿಗಳಲ್ಲಿ ಇದ್ದ ಅಪಾರ ಅನುಭವಗಳಿಂದ ದೂರಾಗ್ರಹಿಗಳನ್ನು ದೂರವಿಟ್ಟು ಮುನ್ನಡೆಯಲು ಸಹಕಾರಿಯಾದವು.

ಮೈಸೂರಿನಲ್ಲಿ ಕಡೆದ ಶಿಲ್ಪಗಳು, ಬರೆದ ಚಿತ್ರಗಳು ನೂರಾರು ಅನ್ನುವುದಕ್ಕಿಂತ ಸಾವಿರಾರು ಎನ್ನುವುದೇ ಸೂಕ್ತ. ಮೈಸೂರಿನಲ್ಲಿ ವಿಶ್ವಕರ್ಮ ಜನಾಂಗದ ಬೇಡಿಕೆಯಂತೆ ಮಂಡಿ ಮೊಹಲ್ಲಾದಲ್ಲಿರುವ ಕಾಳಿಕಾಂಬ ಕಮಟೇಶ್ವರ ದೇವಸ್ಥಾನಕ್ಕೆ ವಿಶ್ವಕರ್ಮ ಮೂರ್ತಿಯನ್ನು ಮಾಡಿಕೊಟ್ಟರು. ಈ ಮಹಾಮೂರ್ತಿಯು ಅತ್ಯಂತ ವೈಶಿಷ್ಟ ಪೂರ್ಣವಾಗಿದ್ದು, ಎರಡು ಕಡೆಯೂ ದೇಹವುಳ್ಳದ್ದಾಗಿದೆ. ಹತ್ತು ಕೈಗಳು ನಾಲ್ಕು ತಲೆಯುಳ್ಳದ್ದಾಗಿದೆ. ಪರ್ಯಂಕಾಸನ ಮುದ್ರೆಯಲ್ಲಿ ಕುಳಿತರುವ ಮೂರ್ತಿಯು ಉನ್ನತ ಪ್ರಭಾವಳಿಯನ್ನೊಂದಿದೆ. ದ್ವಿಮುಖ ಕೆತ್ತನೆಯ ಮೂರ್ತಿಗಳು ಪ್ರಾಯಶಃ ಎಲ್ಲಿಯೂ ಕಂಡು ಬರುವುದಿಲ್ಲ. ಇದೊಂದು ಅಪೂರ್ವ ವಿಗ್ರಹ. ಹಿನ್ನೆಲೆಯ ಮೂರ್ತಿಯನ್ನು ದರ್ಶಿಸಲು ಅನುವಾಗುವಂತೆ ಬೃಹತ್ ಕನ್ನಡಿಯನ್ನು ಇಡಲಾಗಿದೆ. ನಾಲ್ಕು ಮುಖಗಳು, ಮುನ್ನೆಲೆ ಹಿನ್ನೆಲೆಯಲ್ಲಿ ಕಂಡುಬರುತ್ತವೆ. ಅಕ್ಕಪಕ್ಕಗಳಿಗೆ ತಿರುಗಿರುವ ಮುಖದ ಮಧ್ಯದಲ್ಲಿರುವ ಪೂರ್ಣಪ್ರಮಾಣದ ಮುಖಚಿತ್ರದ ಶಿರೋಭಾಗದಲ್ಲಿ ಅಂತಹದೇ ಮುಖಭಾವವನ್ನೇ ಹೊಂದಿರುವ ಮೂರ್ತಿ ದರ್ಶನವಾಗುತ್ತದೆ.

ಆ ವಿಶ್ವಕರ್ಮ ಮೂರ್ತಿಯ ಪಕ್ಕದಲ್ಲಿಯೇ ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞ ಎಂಬ ಐದು ಪ್ರತ್ಯೇಕ, ಪ್ರತ್ಯೇಕವಾದ ವಿಗ್ರಹವಿದ್ದು ಆ ಮೂರ್ತಿಗಳು ಕ್ರಮವಾಗಿ ಕಬ್ಬಿಣ, ದಾರು (ಮರ) ಕಾಂಸ್ಯ (ಕಂಚು) ಶಿಲಾಶಿಲ್ಪ ಮತ್ತು ಸ್ವರ್ಣಶಿಲ್ಪಗಳ ಮೂಲ ಪ್ರವರ್ತಕರೆಂದು ಸುಂದರ ಕೆತ್ತನೆಯ ಮೂಲಕ ಪೂಜಾರ್ಹ ಗೊಳಿಸಿದ್ದಾರೆ.

ಇದೇ ದೇವಾಲಯದಲ್ಲಿ ಕೆತ್ತಿರುವ ಮತ್ತು ಪ್ರತಿಷ್ಠಾಪಿಸಿರುವ ನವಗ್ರಹ ಮೂರ್ತಿಗಳು ಸಹ ವಿಶೇಷತೆಯಿಂದ ಕೂಡಿವೆ. ಎಲ್ಲಾ ನವಗ್ರಹ ಮೂರ್ತಿಗಳು ಪತ್ನೀ ಸಮೇತರಾಗಿದ್ದಾರೆ. ಆಯಾಯ ವಾಹನಗಳನ್ನು ಹೊಂದಿರುವ ರಥದ ಮೇಲೆ ಕುಳಿತಿದ್ದಾರೆ. ರಥದ ಚಾಲಕರಾಗಿ ಒಬ್ಬೊಬ್ಬ ದೇವತೆ ಇದ್ದಾರೆ. ಪ್ರತಿರಥದ ಚಕ್ರಗಳ ಬಳಿಯಲ್ಲಿ ಓರ್ವ ದೇವತಾಮೂರ್ತಿ ವಿಗ್ರಹವಿದೆ. ಉದಾಹರಣೆಗೆ ಗುರುಗ್ರಹ ದೇವತೆ, ಪಂಚ ಕುದುರೆಗಳುಳ್ಳ ವಾಹನಾ ರೂಢನಾಗಿದ್ದಾನೆ. ಆ ವಿಗ್ರಹದ ಒಂದೆಡೆ ಚತುರಮುಖದ ಮೂರ್ತಿಯು ಅದರ ಕೆಳಗೆ ಬಲಕ್ಕೆ ತಿರುಗಿದಂತೆ ನವಿಲು ವಾಹನವಿದೆ. ಮತ್ತೊಂದು ಕಡೆ ಆನೆ ತಲೆಯುಳ್ಳ ಮೂರ್ತಿ ಕೂತಂತೆ ಇದೆ. ಇವುಗಳನ್ನು ಷಣ್ಮುಖ ಮತ್ತು ವಿನಾಯಕನೆಂದು ಊಹಿಸಬಹುದಾಗಿದೆ. ಶುಕ್ರ ದೇವತೆಯು ಷಟ ಅಶ್ವಾರೂಡಾ ರಥದಲ್ಲಿ ಅಂದರೇ ಆರು ಕುದುರೆಗಳುಳ್ಳ ರಥಾರೂಡನಾಗಿದ್ದಾನೆ. ಶಿಲ್ಪದಲ್ಲಿ ಕುದುರೆಗಳ ಮುಂಚಾಚಿದ ನಾಲ್ಕು ಕಾಲುಗಳು ಮಾತ್ರ ಕಾಣುತ್ತವೆ.

ಚಂದ್ರ ದೇವತೆ ಶಿಲ್ಪದಲ್ಲಿ ಸಹ ಅಕ್ಕಪಕ್ಕಗಳಲ್ಲಿ ದಂಪತಿಗಳಿಂದೊಡಗೂಡಿದ ವಿಗ್ರಹಗಳ ಕೆತ್ತನೆಯಿದೆ. ಹೀಗೆ ಎಲ್ಲಾ ನವಗ್ರಹಗಳು ರಥಾರೂಡರಾಗಿ ಸಪತ್ನಿ ಸಮೇತರಾಗಿರುವಂತೆ ಕೆತ್ತಿರುವುದರ ಜೊತೆಗೆ ಅತ್ಯಂತ ವಿಶೇಷವಾದದ್ದು ಪ್ರತಿ ವಿಗ್ರಹದ ಹಿಂಬದಿಯಲ್ಲಿ (Backside) ಜಾತಕ ಕುಂಡಲಿ ಬರೆದಂತೆ ಚೌಕ,



ಶ್ರೀ ಗಾಯತ್ರಿ



ಶ್ರೀ ಭುವನೇಶ್ವರಿ



ದಕ್ಷಿಣಾಮೂರ್ತಿ



ಶ್ರೀ ರಾಜರಾಜೇಶ್ವರಿ



ಕಾವೇರಿ ಮಾತೆ



ಕಾಳಿಕಾದೇವಿ



ರಾಧಾಕೃಷ್ಣ



ಮಹಿಷಾಸುರ ಮರ್ಧಿನಿ

ಆಯತಾಕಾರವಾಗಿರುವ ಚಿಕ್ಕಚಿತ್ರಗಳನ್ನು ಇಳಿಗೆತ್ತನೆಯ ರೂಪದಲ್ಲಿ ಕೆತ್ತಿರುವುದನ್ನು ಕಾಣಬಹುದಾಗಿದೆ.

ಮೈಸೂರಿನ ಪರಕಾಲಮಠ ಪ್ರಸಿದ್ಧಿಯಾದದ್ದು. ಅರಮನೆಯಿಂದ ಈ ಮಠಕ್ಕೆ ಅಪಾರ ಗೌರವ ಸಲ್ಲುತ್ತಿತ್ತು. ಅಲ್ಲಿನ ವ್ಯವಸ್ಥಾಪಕರ ಕೋರಿಕೆ ಮೇರೆಗೆ ಶ್ರೀಕೃಷ್ಣ ಬ್ರಹ್ಮ ತಂತ್ರ ಪರಕಾಲ ಸ್ವಾಮಿಗಳವರ ಶಿಲಾ ವಿಗ್ರಹವನ್ನು ಮತ್ತು ರಜತ (ಬೆಳ್ಳಿ) ಮಯವಾದ ಹಯಗ್ರೀವ ಮೂರ್ತಿಯನ್ನು ಮಾಡಿಕೊಟ್ಟಿರುವುದಲ್ಲದೇ, ಪ್ರತಿಷ್ಠಾಪಿಸಿದ್ದಾರೆ. (ಹಯಗ್ರೀವ) ಕುದುರೆ ತಲೆಯನ್ನು ಮನುಷ್ಯ ದೇಹವನ್ನು ಹೊಂದಿರುವ ಈ ಮೂರ್ತಿ ಸಪತ್ನಿ ಸಮೇತರಾಗಿದ್ದು ಚತುರ ಬಾಹುಗಳನ್ನು ಹೊಂದಿದ್ದು ಸುಖಾಸೀನನಾಗಿದ್ದಾನೆ. ಶಿರದಲ್ಲಿ ಕಿರೀಟದಾರಣೆಯಿದೆ. ಮುಖಕ್ಕೆ ಹೊಂದಿಕೊಂಡಂತೆ (ಹಯಗ್ರೀವ) ಕುದುರೆ ಕಿವಿಗಳು ನೇರವಾಗಿ ಊರ್ಧ್ವಮುಖವಾಗಿವೆ. ಶಂಖ ಮತ್ತು ಚಕ್ರಗಳನ್ನು ಎಡಬಲಗಳಲ್ಲಿ ಹಿಡಿದಂತೆ ಇದ್ದು ಬಲಬಾಹುವು ಅಭಯಹಸ್ತವುಳ್ಳದಾಗಿದ್ದು ಎಡಬಾಹುವು, ಪತ್ನಿಯ ಸೊಂಟವನ್ನು ಬಳಿಸಿದಂತೆಯೂ ಇದೆ. ಕೆಳಗಡೆ ಇಳಿಬಿಟ್ಟಿರುವ ಬಲಪಾದವು ಕಮಲದ ಹೂವಿನ ಮೇಲಿದೆ. ಶಿರದ ಮೇಲ್ಭಾಗದಲ್ಲಿರುವ ಕಿರೀಟಕ್ಕೆ ಹೊಂದಿಕೊಂಡಂತೆ ಐದು ಹೆಡೆಗಳುಳ್ಳ ಸರ್ಪವಿದೆ. ಅದರ ಮೇಲೆ ಪ್ರಭಾವಗಳಿಗೆ ಹೊಂದಿಕೊಂಡಂತೆ ಸಿಂಹಲಲಾಟದ ಕೆತ್ತನೆಯಿದೆ. ಈ ಸುಂದರ ಮೂರ್ತಿಯನ್ನು ಅತ್ಯಂತ ಸಂತೋಷಪೂರ್ವಕವಾಗಿ ಸ್ವೀಕರಿಸಿದ ಪರಕಾಲಮಠದ ಶ್ರೀಗಳವರು "ಶಿಲ್ಪಕಲಾ ವಿಶಾರದ" ಎಂಬ ಬಿರುದನ್ನು ನೀಡಿ ಸುವರ್ಣ ಪದಕದೊಡನೆ ಗೌರವಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ದಿವಾನರಾಗಿದ್ದ ಸರ್‌ಮಿರ್ಜಾ ಇಸ್ಮಾಯಿಲ್‌ರವರು ಸ್ವಾಮಿಗಳವರ ಶಿಲ್ಪಕಲೆಯನ್ನು ಮೆಚ್ಚಿ ಆಗ ತಾನೇ ಪೂರ್ಣಗೊಂಡಿದ್ದ ಕನ್ನಂಬಾಡಿ ಕಟ್ಟೆಗೆ (K.R.S) ಕಾವೇರಮ್ಮನ ವಿಗ್ರಹ ಮಾಡಿಕೊಡಲು ಕೋರಿದಂತೆ, ಸುಮಾರು ಐದಡಿ ಎತ್ತರದ ಕೃಷ್ಣ ಶಿಲೆಯಿಂದ ಮಾಡಿದ ವಿಗ್ರಹವು ಇಂದಿಗೂ ಕೆ. ಆರ್. ಎಸ್.ನಲ್ಲಿ ಎತ್ತರದ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಅದರ ಕೈಗಳಿಂದ ನೀರು ಹೊರಬರುವಂತೆ ವಿನ್ಯಾಸಗೊಳಿಸಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ನೀರು ಹಂತಹಂತವಾಗಿ ಹರಿಯುವ ಸೋಪಾನಗಳಲ್ಲಿ ಸಹ ಅಮೃತ ಶಿಲೆಯ ರಾಧಾಕೃಷ್ಣನ ಮೂರ್ತಿಯನ್ನು ಮಾಡಿ ಪ್ರತಿಷ್ಠಾಪಿಸಿದ್ದಾರೆ.

ಅರಮನೆಯ ಕೋಟೆಯ ಆವರಣದೊಳಗೆ ಇರುವ ಭುವನೇಶ್ವರಿ ಮತ್ತು ಗಾಯತ್ರಿ ದೇವಾಲಯಗಳು ಸ್ವಾಮಿಗಳವರಿಂದ ರಚಿತವಾದ ಸುಂದರ ಕಲ್ಗೆತ್ತನೆಯನ್ನು ಒಳಗೊಂಡಿದೆ. ಅದರಲ್ಲಿ ಮುಖ್ಯವಾದ ವಿಗ್ರಹ ಭುವನೇಶ್ವರಿ; ಕಮಲದ ಹೂವಿನ ಮೇಲೆ ಪರ್ಯಾಂಕಾಸನದಲ್ಲಿ ಕುಳಿತಿರುವ ಭುವನೇಶ್ವರಿ ಚತುರ ಬಾಹುಗಳನ್ನು ಹೊಂದಿದೆ. ಅಭಯ ಮತ್ತು ವರದ ಹಸ್ತಗಳನ್ನು ಹಾಗೂ ಪಾಶಾಂಕುಶಗಳನ್ನು ಹೊಂದಿದೆ. ಮುಖದೆತ್ತರಕ್ಕೆ ಒಂದುವರೆ ಪಟ್ಟು ಎತ್ತರವಿರುವ ಕಿರೀಟ. ಶಿರಸ್ಸಿನ ಹಿಂಬಾಗದಲ್ಲಿ ಪ್ರಭಾವಲಯದ ಚಕ್ರವಿದೆ. ಭುವನೇಶ್ವರಿದೇವಿ ಕುಳಿತಿರುವ ಪದ್ಮಪೀಠದ ಪ್ರಭಾವಳಿ ಅತ್ಯಂತ ವಿಶಿಷ್ಟವಾದದ್ದು. ವಿಗ್ರಹದ ಎಡಬಲಕ್ಕೆ ಹೊಂದಿಕೊಂಡಂತೆ ಇರುವ ಪ್ರಭಾವಳಿಯಲ್ಲಿ ಬಳ್ಳಿಯಂತೆ ಸುತ್ತಿಕೊಂಡಿರುವ ಹೂ, ಮೊಗ್ಗುಗಳ ಮಧ್ಯದಲ್ಲಿ ಅಷ್ಟದೇವತೆ ಮೂರ್ತಿಗಳನ್ನು ಕೆತ್ತಿದ್ದಾರೆ. ಕಿರೀಟದ ತುದಿಗೆ ಹೊಂದಿಕೊಂಡು ಹೊರಡುವ ಬಳ್ಳಿ, ವೃತ್ತಾಕಾರವಾಗಿ ಚಲಿಸುವಂತಿದ್ದು ಕುಶರೀ ಕೆಲಸದಿಂದ ಕೂಡಿದೆ. ಪ್ರಭಾವಳಿಯ ಶಿರೋಭಾಗವು ವ್ಯಾಘ್ರವ್ಯಾಳಿಯಿಂದೊಡಗೂಡಿದೆ. ದೇವಿಯ ಸುತ್ತ ಇರುವ ಅಂಗಾಂಗಗಳ ಮತ್ತು ಪ್ರಭಾವಳಿಗಳ ನಡುವಿನ ಅಂತರವನ್ನು (ಪರಸ್ಥಲ) ನಿರ್ಭಾಗ ಗೊಳಿಸಿರುವಕಾರಣ ಶಿಲ್ಪದ ಒಪ್ಪಂದಕ್ಕೆ ಶೋಭೆ ತಂದಿದೆ. ಕೋಟೆಯೊಳಗಿನ ದೇವಾಲಯದಲ್ಲಿನ ಬಹುತೇಕ ಮೂರ್ತಿಗಳು ಸ್ವಾಮಿಗಳವರ ನೇತೃತ್ವದಲ್ಲಿ ಅವರ ಶಿಷ್ಯರ ಮೂಲಕ ಮಾಡಿಸಿದವುಗಳೇ ಆಗಿವೆ. ಪ್ರತಿ ವಿಗ್ರಹದಲ್ಲಿ ಸಿದ್ದಲಿಂಗ ಸ್ವಾಮಿಗಳವರ ಕತೃತ್ವಶಕ್ತಿ ಅಡಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಶ್ರೀಮನ್ ಮಹಾರಾಜರವರ ಖಾಸಗೀ ಪೂಜಾಗೃಹಕ್ಕೆ ಭಾಗವತ ಪುರಾಣದಲ್ಲಿ ಉಕ್ತವಾಗಿರುವ ರೀತಿ ಶ್ರೀನಗರ ಮಂಟಪವೆಂಬ ಪೂಜಾಮಂಟಪವನ್ನು ಶಾಸ್ತ್ರೀಯವಾಗಿ ರಜತ ಮತ್ತು ಸುವರ್ಣಾದಿಗಳಿಂದ ನಿರ್ಮಿಸಿಕೊಟ್ಟಿದ್ದಾರೆ. ಇದೊಂದು ಸುಂದರ ಕಲಾ ವಿನ್ಯಾಸವುಳ್ಳ ವಿವಿಧ ದೇವತಾ ಮೂರ್ತಿಗಳನ್ನು ಉಬ್ಬಚ್ಚು ಮಾದರಿಯಲ್ಲಿ ವಿನ್ಯಾಸಗೊಳಿಸಿದ ಮಹಾಮಂಟಪ.

ಅದಕ್ಕೆ ಪೂರಕವಾಗುವಂತೆ ಮಹಾರಾಜರವರ ಅಪೇಕ್ಷೆ ಮೇರೆಗೆ ಮಾಡಿದ ಸುವರ್ಣ ಮತ್ತು ನವರತ್ನಗಳಿಂದ ಕೂಡಿದ ನವದುರ್ಗಾದೇವಿ ವಿಗ್ರಹ ಹದಿನೆಂಟು ಕೈಗಳು ಇದ್ದು ಸಕಲಾಭರಣ ಭೂಷಿತೆಯಾಗಿದ್ದಾಳೆ ಈ ದೇವಿ. ಕೊರಳಲ್ಲಿ ಧರಿಸಿರುವ ವೈಜಯಂತಿ ಮಾಲೆಯು ನೀಳವಾಗಿದ್ದು, ಕುಳಿತಿರುವ ಪೀಠದ ಸ್ಪರ್ಶವನ್ನು ಪಡೆದಿದೆ. ಪ್ರಭಾವಳಿಯು ಸಹ ಚಿತ್ತಾರಗಳಿಂದ ಕೂಡಿದ್ದು ಮನ ಮೋಹಕವಾಗಿದೆ. ಇಂತಹದೇ ನವದುರ್ಗಾ ದೇವಿಯ ಸುಂದರ ತೈಲ ಚಿತ್ರವು ಅರಮನೆಯ ದರ್ಭಾರ್ ಹಾಲ್‌ನಲ್ಲಿ ಕಂಗೊಳಿಸುತ್ತದೆ. ಸ್ವಾಮಿಗಳವರ ಚಿತ್ರ ಶಿಲ್ಪಗಳ ಉಭಯ- ಪಾಂಡಿತ್ಯಕ್ಕೆ ಇವುಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ.

ವಾಣಿವಿಲಾಸ ಸನ್ನಿಧಿಯವರ ಅಪ್ಪಣೆಯಂತೆ ಈಗಿರುವ ಅರಮನೆಯ ದರ್ಭಾರ್ ಹಾಲಿನ ಪುನರ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿ ಹೊಸ ವಿನ್ಯಾಸಗೊಳಿಸಿದಂತೆ, ಶ್ರೀಮನ್ ಮಹಾರಾಜರವರು ನವರಾತ್ರಿಯ ನವದಿನಗಳಲ್ಲಿ ಕುಳಿತುಕೊಳ್ಳುತ್ತಿದ್ದ

ಸಿಂಹಾಸನವನ್ನು ಸಹ ಜೀರ್ಣೋದ್ಧಾರ ಮಾಡಿ ಶಾಸ್ತ್ರ ಸಂಹಿತೆಯಂತೆ ಪ್ರತಿಷ್ಠಾಪಿಸಿದರೆಂದು ತಿಳಿದುಬರುತ್ತದೆ.

ಅರಮನೆಯಿಂದ ಹೊರತಾದಂತೆ ಮಾಡಿರುವ ವಿಗ್ರಹಗಳು ಅನೇಕ, ನಂಜನಗೂಡಿನಲ್ಲಿರುವ ಶ್ರೀ ಕಂಠೇಶ್ವರ ದೇವಾಲಯದಲ್ಲಿರುವ ನವಗ್ರಹದೇವತೆಗಳು, ಜಗದ್ವಿಖ್ಯಾತ ಜೋಗ್ ಜಲಪಾತ ಪ್ರದೇಶಕ್ಕೆ ಮಾಡಿಕೊಟ್ಟಿರುವ ಚಾಮುಂಡೇಶ್ವರಿ ವಿಗ್ರಹ, ಇದು ಸಹ ಮೈಸೂರಿನಲ್ಲಿ ಮಾಡಿಕೊಟ್ಟಿರುವ ಹಿಮ್ಮುಖ ಮತ್ತು ಮುಮ್ಮುಖವುಳ್ಳ ವಿಶ್ವಕರ್ಮಮೂರ್ತಿಯಂತೆ; ಎರಡು ಕಡೆಯು ಚಾಮುಂಡಿಯ ಮೂರ್ತಿಯನ್ನೊಳಗೊಂಡಿದೆ. ದೇವಿಯನ್ನು ಯಾವ ಕಡೆ ನೋಡಿದರೂ ಒಂದೇ ತೆರನಾಗಿ ಮುಖಲಕ್ಷಣವುಳ್ಳದ್ದಾಗಿದೆ.

ದಾವಣಗೆರೆಗೆ ಶ್ರೀರಾಮ, ಲಕ್ಷ್ಮಣ, ಸೀತೆ, ಆಂಜನೇಯ ಮೂರ್ತಿಗಳ ಸಮೂಹ, ಚಿಕ್ಕಮಗಳೂರಿಗೆ ವಿಘ್ನೇಶ್ವರ, ಪಟ್ಟನಾಯಕನ ಹಳ್ಳಿಗೆ 'ಅಂಬಿಕಾ' ಹಾಸನ ಜಿಲ್ಲೆಯ ಆನೆಕೆರೆ ಗ್ರಾಮಕ್ಕೆ ಚೆನ್ನಕೇಶವ, ಲಕ್ಷ್ಮೀ ವಿಗ್ರಹ, ದತ್ತಾತ್ರೇಯ ಹೀಗೆ ಕರ್ನಾಟಕದ ಅನೇಕ ದೇವಾಲಯಗಳಿಗೆ ಮೂರ್ತಿ ರಚಿಸಿ ಕೊಟ್ಟಿರುವುದಲ್ಲದೇ ಸ್ಥಾಪನಾಕಾರ್ಯವನ್ನು ನೆರವೇರಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮಠವು ಪುರಾತನವಾದದ್ದು. ಶೃಂಗೇರಿ ಅಂದೊಡನೆ ಶಾರದೆಯು, ಶಾರದೆ ಎಂದೊಡನೇ ಶೃಂಗೇರಿಯು ನೆನಪಿಗೆ ಬರುತ್ತದೆ. ಅಂತಹ ಶಾರದೆಯನ್ನು ಪಂಚಲೋಹದಲ್ಲಿ ಮಾಡಿಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆ ಶಿಕಾರಿಪುರಕ್ಕೆ ಎತ್ತರವಾದ ಕಂಬದ ಮೇಲೆ ಕಂಗೊಳಿಸುವ ಗಂಡ ಬೇರುಂಡ ವಿಗ್ರಹವನ್ನು ಮಾಡಿಕೊಟ್ಟಿದ್ದಾರೆ. ಈ ವಿಗ್ರಹವು ಎರಡು ತಲೆ, ಎರಡು ಕೈ. ಎರಡು ಕಾಲುಗಳನ್ನು ಹೊಂದಿದ್ದು ಬಳ್ಳಿಯೊಂದನ್ನು ಬಳಸಿ ನಿಂತಂತಿದೆ.

ಮಂಗಳೂರಿನ ಕಾಳಿಕಾಂಬ ದೇವಾಲಯವು ಜೀರ್ಣಾವಸ್ಥೆಯಲ್ಲಿದ್ದ ಕಾರಣ. ಅಲ್ಲಿಗೆ ಸ್ವಾಮಿಗಳು ದಯಮಾಡಿಸಿ ವಿಶ್ವಕರ್ಮ ಜನಾಂಗದವರ ಪ್ರಾರ್ಥನೆಯಂತೆ ಆ ದೇವಾಲಯವನ್ನು ಸರ್ವಾಂಗ ಸುಂದರವನ್ನಾಗಿ ಶಿಲ್ಪಮಯಗೊಳಿಸಿ ಅದಕ್ಕೊಂದು ನೆಲೆಕೊಟ್ಟರು. ಅತ್ಯಂತ ಸಂಪ್ರೀತರಾದ ಶಿಷ್ಯಸಮೂಹ ಮಂಗಳೂರಿನ ಅಖಿಲ ವಿಶ್ವಬ್ರಾಹ್ಮಣ ಸಭೆಯಲ್ಲಿ ಸ್ವಾಮಿಗಳಿಗೆ ರತ್ನ ಖಚಿತ ಬಾಹೂ ಬಂಧವನ್ನು, ಸುವರ್ಣ ಕಂಠಾಭರಣವನ್ನು ಇತ್ತು, ಬಿನ್ನವತ್ತಳೆ ಅರ್ಪಿಸಿ ಸನ್ಮಾನಿಸಿದರು.

ಹಿಂದೂಪುರದ ವೈಶ್ಯ ಮಂಡಳಿಯ ಕೋರಿಕೆ ಮೇರೆಗೆ ಮಾಡಿದ ಕನ್ನಿಕಾಪರಮೇಶ್ವರಿ ವಿಗ್ರಹ ಮತ್ತು ಶೇಷಶಯನ ವಿಗ್ರಹಗಳನ್ನು ಅಮೃತ ಶಿಲೆಯಲ್ಲಿ ಮಾಡಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಸ್ವಾಮಿಗಳು ಮಾಡಿಕೊಟ್ಟ ಎಲ್ಲಾ ವಿಗ್ರಹಗಳಿಗೂ ಪ್ರತಿಷ್ಠಾಪನೆ ಮಾಡುತ್ತಿದ್ದರು. ಆದರೆ ಹಿಂದೂಪುರದಲ್ಲಿ ಹಾಗೆ ಆಗಲಿಲ್ಲ. ಪ್ರತಿಷ್ಠಾಪನೆಗೆಂದು ಬಂದಿದ್ದ ಆಗಮಿಕರಾದ ಶಂಕರ ಸೋಮಯಾಜಿಯವರು ನೇತ್ರೋನ್ಮೀಲನದ ಕಾರ್ಯವನ್ನು ಬ್ರಾಹ್ಮಣ ಆಗಮಿಕರು ಮಾತ್ರ ಮಾಡಬೇಕು. ಶಿಲ್ಪಿಗಳಿಂದಲ್ಲವೆಂದು ವಾದ ನಡೆಸಿದರು. ಸ್ವಾಮಿಗಳವರು ಅಷ್ಟೇ ಸೌಜನ್ಯದಿಂದ ಅವರಲ್ಲಿನ ಅಜ್ಞಾನವನ್ನು ಶಾಸ್ತ್ರಾಧಾರಗಳ ಸಹಿತ ಉಲ್ಲೇಖಿಸಿ ಶಿಲ್ಪಿಯಾದವರ ಸಾರ್ವಭೌಮತೆಯನ್ನು ಸಾದರವಾಗಿ ವಿವರಿಸಿ ಕಣ್ತೆರೆಸಿದರು. ಶರಣಾಗತಿಯಾದ ಆಗಮಿಕರು ನೇತ್ರೋನ್ಮಿಲನ ಕಾರ್ಯವನ್ನು ಸ್ವಾಮಿಗಳಿಂದಲೇ ಮಾಡಿಸಿದರು. ಸ್ವಾಮಿಗಳವರ ಪಾಂಡಿತ್ಯ ಪ್ರಭುತ್ವಕ್ಕೆ ಹಿಡಿದ ತೋರುಗನ್ನಡಿಯಿದು.

ಕರ್ನಾಟಕದ ಹೊರಗೆ ಮಾಡಿಕೊಟ್ಟ ವಿಗ್ರಹಗಳು ಅನೇಕ. ಅವುಗಳಲ್ಲಿ ಮುಖ್ಯವಾದದ್ದು ಆಂಧ್ರದ ಗುಂಟೂರು ಜಿಲ್ಲೆಯ ಚಿದಾಲ ಎಂಬಲ್ಲಿಗೆ ಕಾಮಾಕ್ಷಿವಿಗ್ರಹ ಕೃಷ್ಣಶಿಲೆಯಿಂದ ಮಾಡಿದ್ದಾರೆ. ಸುಪ್ರಸಿದ್ಧವಾದ ಕಂಚಿಗೆ ಅಮೃತಶಿಲೆಯಲ್ಲಿ ಮಾಡಿರುವ 'ಗಾಯತ್ರಿ ವಿಗ್ರಹ', ಪಂಚಮುಖಗಳನ್ನು, ದಶಬುಜಗಳನ್ನು ಹೊಂದಿದ್ದು ಸುಖಾಸೀನ ಮುದ್ರೆಯಲ್ಲಿ ಕುಳಿತ ವಿಗ್ರಹದ ಹಿನ್ನೆಲೆಯಲ್ಲಿ ಬಳ್ಳಿಗಳ ಎಲೆಗಳಂತೆ ಚಿತ್ತಾರದ ಕೆಲಸ ಮಾಡಿರುವ ಪ್ರಭಾವಳಿಯಿದೆ.

ಭಾರತಾದ್ಯಂತ ಭಕ್ತರ ಅಪೇಕ್ಷೆ ಮೇರೆಗೆ ಸಂಚರಿಸುತ್ತಿದ್ದ ಸ್ವಾಮಿಗಳು ತಮಿಳು ನಾಡಿಗೆ ಪ್ರವಾಸ ಬೆಳಸಿ, ಗ್ರಾಮ ಸಾಲಾವಳೀ ಪದ್ಧತಿಯನ್ನು ಅನುಸರಿಸಿ ವಾಲಾಜಪೇಟೆಯೆಂಬ ನಗರವನ್ನು ಜೀರ್ಣೋದ್ಧಾರ ಮಾಡಿದರು. ಅಲ್ಲಿನ ಪುರಪ್ರಮುಖರು ಅತ್ಯಂತ ಸಂತೋಷದಿಂದ ಶ್ರೀ ಸ್ವಾಮಿಗಳವರು ವಿಶೇಷ ಉತ್ಸವರಲ್ಲಿ ಧರಿಸುವಂತಹ ರತ್ನ ಕಿರೀಟವನ್ನು, ಕರ್ಣ ಕುಂಡಲವನ್ನು ರತ್ನ ಕಂಠಾಭರಣವನ್ನು, ಭಿನ್ನವತ್ತಳೆಯನ್ನು ಅರ್ಪಿಸಿ ಗೌರವಿಸಿದರು.

ಇವೆಲ್ಲವೂ ದೇಶದೊಳಿಗನವುಗಳಾದರೇ ಗಡಿಯಾಚೆ ವಿದೇಶಕ್ಕೂ ಸಹ ತೆರಳಿದ ಕಾಷ್ಟ ವಿಗ್ರಹ ಶಂಕರಾಚಾರ್ಯ ಮೂರ್ತಿಯು ಜರ್ಮನಿಯ ಡಾ॥ ರೆಡಲ್ಫ್ ಆಟೋ ಅವರ ಸಂಗ್ರಹಾಲಯವನ್ನು ಸೇರಿದೆ. ಇದಲ್ಲದೆ ಅವರಿಗೆ ಭಾರತೀಯ ದೇವತೆಗಳಲ್ಲಿ ಹೆಚ್ಚಾಗಿ ಎಲ್ಲೆಲ್ಲಿಯೂ ಪೂಜೆಗೊಳ್ಳುವ ಗಣಪತಿ ಮತ್ತು ಈಶ್ವರನ ವಿಗ್ರಹಗಳನ್ನು ಮಾಡಿಕೊಟ್ಟಿದ್ದಾರೆ. ಇದರಿಂದಾಗಿ ವಿಶೇಷ ಗೌರವಾದರಗಳಿಗೆ ಪಾತ್ರರಾದ ಸ್ವಾಮಿಗಳವರಿಗೆ ದನ ಕನಕಗಳು ಯಥೇಚ್ಛವಾಗಿ ಲಭಿಸಿದೆವು.

ಸ್ವಾಮಿಗಳು ರಚಿಸಿರುವ ಚಿತ್ರಗಳಾಗಲೀ, ಶಿಲ್ಪವಾಗಲೀ ಪ್ರತಿಯೊಂದು ದೇವತೆಯ ಮುಖಗಳು ಬಹುತೇಕ ದುಂಡಾಗಿವೆ. ಕೈಕಾಲುಗಳು ಸಹ ದುಂಡುತನ ಹೊಂದಿದ್ದು ಪುರುಷ ಮತ್ತು ಸ್ತ್ರೀ ವಿಗ್ರಹಗಳೆರಡರಲ್ಲೂ ಸಾಮಾನ್ಯವಾಗಿ ಮುಖದ ಹೋಲಿಕೆ ಒಂದೇ ತೆರನಾಗಿರುತ್ತದೆ. ಸ್ತ್ರೀ ವಿಗ್ರಹಗಳು ಉನ್ನತವಾದ ಸ್ತನದ್ವಯಗಳನ್ನು

ಹೊಂದಿದ್ದು. ಆಕರ್ಷಕಯುಕ್ತವಾಗಿರುತ್ತದೆ. ಎಲ್ಲಾ ವಿಗ್ರಹಗಳ ಅಥವಾ ಚಿತ್ರಗಳ ಕಿರೀಟಗಳು ಮತ್ತು ಧರಿಸಿರುವ ಆಭರಣಗಳು ಅತ್ಯಂತ ಕುಶರೀ ಕೆಲಸದಿಂದ ಕೂಡಿದ್ದು, ಒಂದೊಂದು ಚಿತ್ರ ಅಥವಾ ಶಿಲ್ಪವೂ, ಮತ್ತೊಂದು ಚಿತ್ರ, ಶಿಲ್ಪಕ್ಕೆ ಪೈಪೋಟಿಯೋ, ಸ್ಪರ್ಧೆಯೋ ಎಂಬಂತೆ ಚಿತ್ರಿತವಾಗಿರುತ್ತವೆ.

ಪ್ರತಿ ಚಿತ್ರ ಶಿಲ್ಪಗಳಲ್ಲಿ ಸಿಂಹಲಲಾಟ, ವ್ಯಾಘ್ರವ್ಯಾಳಿ, ಮಕರವ್ಯಾಳಿಗಳು ಒಂದಲ್ಲಾ ಒಂದು ಕಡೆ ರೂಪಿತವಾಗಿರುತ್ತವೆ. ಆ ದೇವತಾ ಮೂರ್ತಿಯ ಸರ್ವಾಂಗ ಸುಂದರತೆಯನ್ನು ಬಿಂಬಿಸಲು ಸಹಕಾರಿಯಾಗುತ್ತವೆ. ಇದು ಸ್ವಾಮಿಗಳವರ ಚಿತ್ರವೆಂದೋ, ಶಿಲ್ಪವೆಂದೋ ಗುರುತಿಸಬಹುದಾದಷ್ಟು ರೀತಿಯಲ್ಲಿ ಪ್ರಭಾವಯುತ ವಾಗಿವೆ. ಮೌಲ್ಯಯುಕ್ತವಾಗಿವೆ. ಇವೆಲ್ಲವನ್ನು ಕಲಾದೃಷ್ಟಿಯಿಂದ ವೀಕ್ಷಿಸಿದಾಗ ಹೊಯ್ಸಳ ಶೈಲಿಯ ದಟ್ಟ ಪ್ರಭಾವ ಸ್ವಾಮಿಗಳವರ ಚಿತ್ರ ಕೃತಿಗಳಲ್ಲಾಗಿ್ೆ ಎಂದು ಊಹಿಸ ಬಹುದಾಗಿದೆ. ಹೆಚ್ಚಾಗಿ ಶಾಸ್ತ್ರಾಧ್ಯಯನ ಮಾಡಿರುವುದರಿಂದ, ಶಿಲ್ಪ ಶಾಸ್ತ್ರ ರಹಸ್ಯವನ್ನು ಅರಿತವರಾದ್ದರಿಂದ ಅವರ ಎಲ್ಲಾ ಚಿತ್ರ, ಶಿಲ್ಪಗಳು ಧ್ಯಾನಶ್ಲೋಕದ ಆಧಾರದಿಂದ ರಚಿಸಿದಂತಹುಗಳಾಗಿದ್ದು ಶಾಸ್ತ್ರದ ನೆಲೆಗಟ್ಟಿನಲ್ಲಿಯೇ ಪೂರ್ಣಗೊಂಡು, ಪ್ರತಿಷ್ಠಾಪನೆ ಗೊಳ್ಳುತ್ತಿದ್ದವು. ಇದೇ ಸ್ವಾಮಿ ಗಳವರ ವಿಶೇಷತೆ

ಸ್ವಾಮಿಗಳವರ ಕಲೆ ನಿರ್ಗುಳ್ಳೆಯಂತೆ ಕೆಲವೇ ನಿಮಿಷಗಳಲ್ಲಿ ಅವಸಾನ ಹೊಂದುವಂತಹದಲ್ಲ. ಸಮುದ್ರದ ತೊರೆಯಂತೆ ಅಪ್ಪಳಿಸುವುದಿಲ್ಲ, ಬಿರುಗಾಳಿಯಂತೆ ಬೀಸುವುದಿಲ್ಲ, ಹಿತಮಿತ ವಾದ ಗಾಳಿ, ಅಬ್ಬರವಿಲ್ಲದ ನಿರಭ್ರ ಆಕಾಶದಂತೆ ಸರ್ವರಿಗೂ ಸರ್ವಕಾಲಕ್ಕೂ ಬೇಕಾದಂತಹುಗಳು.

ಮಲ್ಲಿಗೆಯ ಮಕರಂದವನ್ನು, ಸಂಪಿಗೆಯ ಸುವಾಸನೆಯನ್ನು ಬಯಸದವರಾರು? ಹಾಗೆಯೇ ಧರ್ಮದೇವತೆಗಳ ಬಗ್ಗೆ ನಂಬಿಕೆ ಇಟ್ಟಿರುವ ಭಾರತೀಯರು ಇರುವವರೆಗೆ ಸ್ವಾಮಿಗಳ ಚಿತ್ರ, ಶಿಲ್ಪಗಳು ಪೂಜಾರ್ಹಗೊಳ್ಳುತ್ತವೆ, ಪುರಸ್ಕರಿಸುತ್ತೇವೆ.

ಮಹಾರಾಜರ ಮನಸು ಸ್ವಾಮಿಗಳ ಕನಸು

ಕನಸು ನನಸಾಗಬೇಕಾದರೇ ಮನಸ್ಸುಬೇಕು. ಮನಸ್ಸಿಗೊಂದು ಮಾರ್ಗಬೇಕು ಅದು ಸನ್ಮಾರ್ಗದಿಂದಾದಾಗ ಸಕಲಜನಕ್ಕೆ ಸಂಪ್ರೀತಿ ಯನ್ನು ಕೊಡುತ್ತದೆ, ಸದಾ ನೆನಪಿಸುವಂತಾಗುತ್ತದೆ. ಹೀಗಾದದ್ದು ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ (ಹಿಂದೆ ಅಗಸರ ಬೀದಿ) ಕಾಮಕಾಮೇಶ್ವರಿ ದೇವಾಲಯ.

ಶ್ರೀಮನ್ ಮಹಾರಾಜ ಜಯ ಚಾಮರಾಜ ಒಡೆಯರವರು ಪುತ್ರ ಸಂತಾನಾರ್ಥವಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ನೇತೃತ್ವದಲ್ಲಿ ಕಾಮಕಾಮೇಶ್ವರಿ ದೇವಿಯನ್ನ ಕುರಿತು ವಿಶೇಷ ಪೂಜೆ, ಯೋಗ, ಹೋಮ ನೆರವೇರಿಸಿದರು. ಸೃಷ್ಟಿಯ ನಿಯಮ, ದೈವಕೃಪೆಯಿಂದೊಡಗೂಡಿ ಪುತ್ರಸಂತಾನವಾಯಿತು. ಶ್ರೀಮನ್ ಮಹಾರಾಜರವರಿಗೆ ಕುಟುಂಬದವರಿಗೆ ನಾಡಿನ ಜನತೆಗೆ ಆದ ಸಂತೋಷ ಅಷ್ಟಿಷ್ಟಲ್ಲ. ಎಲ್ಲೆಲ್ಲೂ ಸಹಿ ಹಂಚಿಕೆ, ವಿಶೇಷ ಪೂಜಾಪ್ರಾರ್ಥನೆ ಸಲ್ಲಿಕೆ ಇವೆಲ್ಲವೂ ಅರಮನೆಯ ಅಂತಸ್ತಿಗೆ ತಕ್ಕಂತೆ ನಡೆದವು.

ಈ ಸಂದರ್ಭದಲ್ಲಿ ಅದೇ ಕಾಮಕಾಮೇಶ್ವರಿ ದೇವಿಯನ್ನು ಕುರಿತು ದೇವಾಲಯವನ್ನು ನಿರ್ಮಾಣ ಮಾಡುವ ಸದಿಚ್ಛೆಯನ್ನು ಮಹಾರಾಜರು ವ್ಯಕ್ತಪಡಿಸಿದರು. ಸ್ವಾಮಿಗಳಾದರೋ ತಾವೊಂದು ಅಪೂರ್ವ ದೇವಾಲಯವನ್ನು ಹೋಯ್ಸಳ ಶೈಲಿಯಲ್ಲಿ, ಮೈಸೂರು ಜಿಲ್ಲೆಯಲ್ಲಿ ಎಲ್ಲಿಯೂ ಕಾಣಲಾಗದ, ಮಾಡಲಾಗದಂತಹ ಶಿಲಾಮೂರ್ತಿಗಳುಳ್ಳ ನಿರ್ಮಾಣ ಮಾಡಬೇಕೆಂಬ ಕನಸುಳ್ಳ ವರಾಗಿದ್ದರು. ಧರ್ಮಕರ್ಮ ಸಂಯೋಗ ಮಹಾರಾಜರ ಮನಸು, ಸ್ವಾಮಿಗಳ ಕನಸುಗಳ ಕೂಡಿ ದೇವಾಲಯದ ನಿರ್ಮಾಣಕ್ಕೆ ಆಸ್ತಿ ಭಾರ ಹಾಕಿದವು. ಮಠದ ಪಕ್ಕದಲ್ಲೇ ಇದ್ದ ಸ್ಥಳದಲ್ಲಿ ಕಲ್ಗೆತ್ತನೆ ಆರಂಭವಾಯಿತು. ಹತ್ತಾರು ವರ್ಷ ನಡೆದ ಕೆಲಸದಲ್ಲಿ ಅನೇಕ ಶಿಲ್ಪಿಗಳು ಪಾಲ್ಗೊಂಡರು. ಆ ಶಿಲ್ಪಿಗಳಾದರೋ ಸ್ವಾಮಿಗಳವರ ಶಿಷ್ಯ ಸಮೂಹವೆ ಆಗಿತ್ತು. ಸಿ. ಪರಮೇಶ್ವರಾಚಾರ್ ವಿಷಕಂಠಾ ಚಾರ, ಶಂಕರಾಚಾರ, ಚೆನ್ನವೀರಯ್ಯ, ಬಸವಣ್ಣ ಇನ್ನು ಅನೇಕ ಹಿರಿಯ ಕಿರಿಯ ಶಿಷ್ಯ ಸಮೂಹ ಹಗಲಿರಳು ಅವಿಶ್ರಾಂತವಾಗಿ ಕೆಲಸ ಮಾಡಿದರು. ಶ್ರೀ ನಾಗೇಂದ್ರ ಸ್ಥಪತಿಗಳು ಇವೆಲ್ಲದರ ಮೇಲ್ವಿಚಾರಕರಾಗಿದ್ದುಲ್ಲದೇ ಸ್ವತಃ ತಾವೇ ನಿಂತು ಕೆಲಸ ಮಾಡುತ್ತಿದ್ದರು. ಪ್ರತಿಯೊಂದು ವಿಗ್ರಹದ ರೂಪರೇಶೆಗಳು, ಅವುಗಳ ಸ್ವರೂಪ, ಯಾವ ಯಾವ ಮೂರ್ತಿಗಳು ಹೇಗಿರಬೇಕು. ಧ್ಯಾನಶ್ಲೋಕದ ಆಧಾರಿತವಾಗಿ ರೂಪುಗೊಳ್ಳುವ ಬಗ್ಗೆ, ಈ ಎಲ್ಲಾ ವಿವರಗಳನ್ನು ನೀಡಿ ಮಾರ್ಗದರ್ಶಕರಾಗಿರುತ್ತಿದ್ದವರು ಶ್ರೀ ಸಿದ್ಧಲಿಂಗ ಸ್ವಾಮಿಗಳವರು. ಎಲ್ಲಾ ಶಿಲ್ಪಿಗಳ ಮನೋಧರ್ಮ ಒಂದೇ ಆಗಿತ್ತು. ನಾವು ಕಡೆಯುತ್ತಿರುವ ಶಿಲ್ಪ ದೇವಾಲಯ ಉತ್ತಮವಾಗಿರಬೇಕು. ನೂರ್ಕಾಲ ಬಾಳಬೇಕು, ಇತರ ಎಲ್ಲಾ ದೇವಾಲಯಗಳಿಗಿಂತ ವಿಶಿಷ್ಟವಾದ ಕೆತ್ತನೆಯ ಸೊಬಗಿನಿಂದ ಕೂಡಿರಬೇಕು ಎಂಬುದಾಗಿತ್ತು. ತತ್ಪರಿಣಾಮವಾಗಿ ದೇವಾಲಯದ ಮೂರ್ತಿಗಳು ಸೊಗಸಾಗಿ ಮೂಡಿಬಂದವು. ಶಿಲ್ಪಿಗಳಿಗೆ ಮಾತ್ರ ತಾವು ಮಾಡಿದ ಕೆಲಸದ ತೃಪ್ತಿ ಇತ್ತೆ ವಿನಃ ಆರ್ಥಿಕ ತೃಪ್ತಿ ಸಿಗಲಿಲ್ಲ. ದೇವತಾ ಮೂರ್ತಿ ಕೆತ್ತನೆಯ ಜೊತೆಗೆ ಕಗ್ಗಲ್ಲಿನಲ್ಲಿ ನಿರ್ಮಾಣ ಮಾಡುವ ಗೋಡೆಗೆ ಕೆಲಸ ಮಾಡುತ್ತಿದ್ದವರು ನೂರಾರುಜನ, ಇವರೆಲ್ಲರ ಸಾರ್ಥಕ ಶ್ರಮವೇ ಕಾಮಕಾಮೇಶ್ವರಿ ದೇವಾಲಯ.

ದೇವಾಲಯವು ರಾಮಾನುಜ ರಸ್ತೆಯಲ್ಲಿದ್ದು, ಎದುರಗಡೆ ಸ್ವಾಮಿಗಳವರ ಗುರುಕುಲ, ಪಕ್ಕಕ್ಕ ನಾಗಲಿಂಗಸ್ವಾಮಿಗಳವರ ಮಠವನ್ನು ಹೊಂದಿದೆ. ರಸ್ತೆಯ ಮಟ್ಟಕ್ಕೆ ಹತ್ತು ಹನ್ನೆರಡು ಅಡಿ

ಎತ್ತರವಿರುವ ಮಹಾದ್ವಾರದ ಇಕ್ಕೆಲಗಳಲ್ಲಿ ಚಾಮುಂಡೇಶ್ವರಿ ಮೂಶಿಕವಾಹನ ಗಣಪ, ಭೈರವಸ್ವಾಮಿ ಗಜವಾಹನವುಳ್ಳ ದೇವತೆ, ಮನು, ಋಷಿ ಮತ್ತು ಈಶ್ವರನ ವಿಗ್ರಹಗಳು ಮಂಟಪ ದೊಳಗೆ ಅಡಕಗೊಂಡಿವೆ. ದ್ವಾರದ ಎಡಬಲಕ್ಕೆ ಲಕ್ಷ್ಮಿ & ಸರಸ್ವತಿಯರ ವಿಗ್ರಹಗಳು ಮನಸೆಳೆಯುತ್ತವೆ. ರಸ್ತೆಗೆ ಅಂಟಿ ಕೊಂಡಿರುವ ಈ ಮೂರ್ತಿಗಳನ್ನು ದರ್ಶಿಸಿ ಮಹಾದ್ವಾರದ ಒಳಹೊಕ್ಕಡನೆಯೇ ಎಡಬಲಕ್ಕೆ ಜಗತಿ, ನಾಲ್ಕು ಕಂಬಗಳ ಮೇಲೆ ನಿಂತಿರುವ ಮೇಲ್ಮಾಡು, ಅವುಗಳ ಒಳಹಂದರದಲ್ಲಿ ಕೆಲವು ಶಿಲಾಬಾಲಿಕೆಯರು, ಉಳಿದೆಲ್ಲವನ್ನು ಕಗ್ಗಲ್ಲಿನಿಂದ ಮಾಡಿದ್ದಾರೆ, ನಯಗೊಳಿಸಿದ್ದಾರೆ.

ಅಲ್ಲಿಂದ ಪ್ರದಕ್ಷಿಣಪಥಕ್ಕೆ ಮಾರ್ಗ. ಎಡದಿಂದ ಹೊರಟರೇ ಮೊದಲದರ್ಶನ ವೃಷಭ ವಾಹನ ಮೂರ್ತಿ, ಚಂದ್ರಶೇಖರ ಮೂರ್ತಿ ನಂತರ ಮುಖಮಂಟಪದ ಬಾಗಿಲಿನ ಮೇಲಿನ ಭಿತ್ತಿ ಶಿಲ್ಪಗಳು ಆ ಬಾಗಿಲಿಗೆ ಹೊಂದಿಕೊಂಡಂತಹ ದ್ವಾರಪಾಲಕರು. ಸಾಕ್ಷಾತ್ ಈಶ್ವರನೇ ದ್ವಾರದಲ್ಲಿ ಇದ್ದಾನೇನೋ ಎಂಬಂತೆ ನಾಲ್ಕು ಕೈ ಹೊಂದಿದ್ದು, ತ್ರಿಶೂಲ, ಡಮರುಗ, ಅಭಯಹಸ್ತ, ಗದೆಯನ್ನೊಳ ಗೊಂಡಿದೆ. ನಂತರದಲ್ಲಿ ಉಮಾಮಹೇಶ್ವರ, ಮಾರ್ಕಂಡೇಯ, ವಿಘ್ನೇಶ್ವರ, ಕಾಮಸಂಹಾರ ಮೂರ್ತಿ, ಅರ್ಧನಾರೀಶ್ವರ, ಭಿಕ್ಷಾಟನಾಮೂರ್ತಿ, ಹಿಂದಕ್ಕೆ ಹೋಗುತ್ತಿದ್ದಂತೆ ಏಕಪಾದಮೂರ್ತಿ, ಮಹಾಲಿಂಗೋದ್ಭವ ಮೂರ್ತಿ, ಚಂಡಿಕೇಶ್ವರ, ಹರಿಹರೇಶ್ವರ, ಚಕ್ರದಾನಮೂರ್ತಿ ಸೋಮಸ್ಕಂದ ಮೂರ್ತಿ, ಗಜಾಸುರ ಮರ್ದನ, ಶಿವಜಲಂದರ, ವಿಷಪಾನ ಮೂರ್ತಿ, ದರ್ಶಿಸುತ್ತಿದ್ದಂತೆ ಮುಖಮಂಟಪದ ಎಡಬಾಗಿಲು, ಅದರ ಮೇಲೆ ಸುಂದರವಾದ ಭಿತ್ತಿಶಿಲ್ಪಗಳು, ಆ ಬಾಗಿಲಿಗೆ ಹೊಂದಿಕೊಂಡಂತೆ ಈರ್ವರೂ ದ್ವಾರಪಾಲಕರು, ಅದನ್ನು ದಾಟಿ ಬಂದರೇ ಕಲ್ಯಾಣ ಸುಂದರ ಮೂರ್ತಿ ತಾಂಡವಮೂರ್ತಿಯ ನಟನಾಲೀಲೆಯನ್ನು ಶಿಲೆಯಲ್ಲಿ ದರ್ಶಿಸಿ ಮೆಟ್ಟಲೇರಿದರೇ ಕಾಣುವುದೇ ಸುಂದರವಾದ ನಂದಿಯುಳ್ಳ ಮಂಟಪ. ಸುಮಾರು ಐದು ಅಡಿ ಎತ್ತರ, ಎಂಟು ಅಡಿ ಉದ್ದವಿರುವ ನಂದಿಯ ಮೂರ್ತಿ ನೋಡಲು ಸುಂದರ, ಅಪೂರ್ವ ಕಲ್ಪೆತ್ತನೆ.

ಶಿವಲೀಲೆಗೆ ಸಂಬಂಧಿಸಿದ ಹತ್ತೊಂಬತ್ತು ಮೂರ್ತಿಗಳು ಕಗ್ಗಲ್ಲಿನಿಂದ ನಿರ್ಮಾಣಗೊಂಡಿರುವ ಗೋಡೆಯ ಗೂಡಿಗಳಲ್ಲಿ ಸ್ಥಾಪಿಸಿದ್ದು, ಅವುಗಳ ಹೊರಗೆ ಪ್ರತಿಯೊಂದಕ್ಕೂ ಮಂಟಪವನ್ನು ಮಾಡಿದ್ದಾರೆ. ಆ ಮಂಟಪಗಳ ಮೇಲೆ ಕಳಸದೋಪಾದಿಯಲ್ಲಿ ಒಂದೊಂದು ಕಿರುಮಂಟಪವಿದೆ. ಎತ್ತರವಾದ ವೇದಿಕೆ, ನಕ್ಷತ್ರಾಕಾರದ ಏಣುಗಳು, ನೆರಳುಬೆಳಕುಗಳ ಚೆಲ್ಲಾಟದಲ್ಲಿ ಈ ಏಣುಗಳು ಸಾಗರದ ತೆರೆಯಂತೆ ಉಬ್ಬರವಿಳಿತಗಳನ್ನು ಕಾಣಬಹುದಾಗಿದೆ. ಭೂಮಟ್ಟಕ್ಕೆ ಸುಮಾರು ನಾಲ್ಕು ಅಡಿ ಎತ್ತರದಲ್ಲಿ ಒಂದು ಅಡಿ ಅಗಲದ ಹೂಬಳ್ಳಿಯು ಸುತ್ತುವರಿದ ಹಂಸಗಳಿಂದ ಕೂಡಿದೆ, ಪಟ್ಟಿಕೆ ಇದೆ. ಪ್ರತಿಮೂಲೆಯ ತಿರವು ವ್ಯಾಘ್ರವ್ಯಾಳಿ ಮತ್ತು ಮಕರ ವ್ಯಾಳಿಗಳಿಂದ ಕೂಡಿದೆ. ಹಾಗೆಯೇ ಗರ್ಭಗುಡಿಯಿಂದ ಬರುವ ಅಭಿಷೇಕದ ನೀರು ಹೊರಬರಲು ಸುಂದರವಾದ ವ್ಯಾಘ್ರವ್ಯಾಳಿಯನ್ನು ಮಾಡಿದ್ದಾರೆ.

ಗರ್ಭಗುಡಿಯ ಗೋಪುರ ವಿಮಾನವು ಸುಮಾರು ಹದಿನೈದು ಅಡಿ ಎತ್ತರದಲ್ಲಿದ್ದು ಅದರ ಮೇಲಕ್ಕೆ ಕಳಸದವರೆಗೆ ಸುಮಾರು ೫ ಹಂತಗಳನ್ನು ಕಾಣಬಹುದಾಗಿದೆ. ಸುಮಾರು ಮೂವತ್ತರಿಂದ ಮೂವತ್ತೈದು ಅಡಿ ಎತ್ತರಕ್ಕೆ ಬರುವ ಕಳಸದವರೆಗಿನ ಹಂತ ಹಂತಗಳು ಕಿರಿದಾಗುತ್ತಾ ಬರುತ್ತವೆ. ಪ್ರತಿ ಹಂತದಲ್ಲಿಯೂ ವಿಗ್ರಹಗಳಿವೆ, ಎರಡನೇ ಹಂತದ ನಾಲ್ಕು ಮೂಲೆಗಳಿಗೂ ನಂದಿವಿಗ್ರಹಗಳಿವೆ. ೪ನೇ ಹಂತದಲ್ಲಿ ಗರುಡ ಕೈಮುಗಿದು ಕುಳಿತ ವಿಗ್ರಹವಿದೆ. ಮತ್ತದರ ಮೇಲ್ಭಾಗದ ಹಂತದಲ್ಲಿ ಪುನಃ ನಾಲ್ಕು ದಿಕ್ಕುಗಳಿಗೂ ನಂದಿ ವಿಗ್ರಹವಿದೆ, ಅದರ ಮೇಲ್ಭಾಗಕ್ಕೆ ಕಳಸವಿದೆ, ಅವುಗಳ ಮೇಲೆ ವೃತ್ತಾಕಾರವಾಗಿ ನೂರಾರು ವಿಗ್ರಹಗಳನ್ನು ಇಟ್ಟಿದ್ದಾರೆ.

ಮುಂಜಾನೆಯ ಮುಂಬೆಳಗಿನಲಿ ಶಿಖರದ ಕಳಸವನ್ನು ದರ್ಶಿಸಿ ನಂದಿಮಂಟಪವನ್ನೇರಿದರೇ, ಏನೋ ಒಂದು ಬಗೆಯ ಆನಂದ. ನಾಲ್ಕು ಕಂಬಗಳ ಒಂದಂಕಣದ ಒಳಗೆ ಚಿತ್ತಾರದ ಸೊಗಸು, ನಂದಿ ಅಥವಾ ಬಸವಣ್ಣ ಎಂದು ಕರೆಯುವ ವೃಷಭನ ವರ್ಚಸ್ಸು ಕಡೆದ ಕಲ್ಲಿನ ಮಾಟ, ಮಂದಾರವದನೆಯಂತಿರುವ ಮುಖ, ಕೊರಳಲ್ಲಿರುವ ಸರಮಾಲೆ, ಕುಳಿತ ನಿಲವು, ಮೂಲ ಲಿಂಗಕ್ಕೆ ಎದುರಾಗಿ ದರ್ಶನಾಕಾಂಕ್ಷಿಯಾಗಿ ಕಾಯುತ್ತಿರುವಂತೆ ತೋರುವ ಸುಂದರ ನಿಲುವಿನ ನಂದಿಯನ್ನು ಮುಟ್ಟಿ ನಮಸ್ಕರಿಸಿ ಮುನ್ನಡೆಯಾಗಿ ಕಾಲಿಟ್ಟರೇ ಗರ್ಭಗುಡಿಯ ಮುಖಮಂಟಪ.

ಅಲ್ಲಿಯ ಒಂದೊಂದು ಕಂಬವು ಕಲಾಪ್ರಪೂರ್ಣ. ಯಂತ್ರದ ತಿರುಗಣೆಯಲ್ಲಿ ಸುತ್ತಿಸಿದಾಗ ಬರುವ ವರ್ತುಲದಂತೆ, ಕೆಲವು ಕಡೆ ಮೇಲೆ ಮತ್ತು ಕೆಳಹಂತಗಳಲ್ಲಿ ಚೌಕಾಕಾರವಾಗಿದ್ದು, ಅವುಗಳ ನಾಲ್ಕು ದಿಕ್ಕುಗಳಿಗೂ ಕೆತ್ತಿರುವ ಹೂಬಳ್ಳಿ, ಅದರೊಳಗೊಂದು ಪರಿವಾರ ದೇವತೆಗಳು. ಮೇಲ ಮೇಲಕ್ಕೆ ಹೋದಂತೆ, ಮೇಲ್ಚಾವಣಿಗೆ ಅಂಟಿಕೊಂಡಂತೆ ನರ್ತನದೋಪಾದಿಯಲ್ಲಿ ನಿಂತಿರುವ ದರ್ಪಣ ಸುಂದರಿ, ಶುಕಭಾಷಿಣಿ, ವಿಲಾಸನಿ, ಮನೋನ್ಮಣಿಗಳ ಸುಂದರ ವಿಗ್ರಹಗಳು ಕಂಡುಬರುತ್ತವೆ. ಬೇಲೂರಿನಲ್ಲಿರುವ ಶಿಲ್ಪಗಳನ್ನು ನೋಡಿದ ನೆನಪು ಬರುತ್ತವೆ.

ಈ ನಾಲ್ಕು ಕಂಬಗಳ ಹೊರಮೈಗೆ ಅಂಟಿಕೊಂಡಂತೆ ಇರುವ ಮಂಟಪಗಳು. ಅವುಗಳ ಒಳಗೆ ನಿತ್ಯಪೂಜೆಗೊಳ್ಳುವ ಶಿಲಾಮೂರ್ತಿಗಳು ಭೈರವ, ವೀರಭದ್ರ, ದಕ್ಷಿಣಾಮೂರ್ತಿ, ಮಹಾವಿಷ್ಣು, ಸೂರ್ಯನಾರಾಯಣ, ಸುಬ್ರಮಣ್ಯ, ಮಹೇಶ್ವರ, ಮಹಾಗಣಪತಿಗಳನ್ನು ಮನದಲ್ಲೇ ನೆನೆದು ಮುಖವನ್ನು ಮೇಲಕ್ಕೆತ್ತಿದರೇ ಸಾಕು, ಮಬ್ಬುಗತ್ತಲಿನಲ್ಲಿ ಕಾಣುವ

ಮೇಶಾದಿರಾಶಿಗಳು, ಅಷ್ಟದಿಕ್ಪಾಲಕರು ಮತ್ತು ನವಗ್ರಹಗಳ ಭಿತ್ತಿ ಶಿಲ್ಪಗಳು.

ಇಲ್ಲಿ ಜೋಡಿಸಿರುವ ಪ್ರತಿ ಭಿತ್ತಿಶಿಲ್ಪಗಳು ಶಾಸ್ತ್ರೋಕ್ತವಾಗಿವೆ. ಮಧ್ಯದಲ್ಲಿ ಸೂರ್ಯ ಪೂರ್ವಕ್ಕೆ ಶುಕ್ರ, ಆಗ್ನೇಯಕ್ಕೆ ಚಂದ್ರ, ದಕ್ಷಿಣಕ್ಕೆ ಕುಜ, ಈಶಾನ್ಯಕ್ಕೆ ಬುಧ, ಉತ್ತರಕ್ಕೆ ಗುರು, ಪಶ್ಚಿಮಕ್ಕೆ ಶನಿ, ನೈರುತ್ಯಕ್ಕೆ ರಾಹು, ವಾಯುವ್ಯಕ್ಕೆ ಕೇತುಗಳನ್ನು ಮೇಲ್ಪದರದಲ್ಲಿ ಜೋಡಿಸಿದ್ದರೇ ಮೇಷಾದಿ ರಾಶಿಯನ್ನು ಪೂರ್ವದಿಂದ ಆರಂಭಿಸಿದರೇ.

ಪೂರ್ವಕ್ಕೆ, ಮೇಷ ವೃಷಭ, ಮಿಥುನ
ದಕ್ಷಿಣಕ್ಕೆ, ಕರ್ಕಾಟಕ, ಸಿಂಹ, ಕನ್ಯಾ
ಪಶ್ಚಿಮಕ್ಕೆ, ತುಲಾ ವೃಶ್ಚಿಕ, ಧನಸ್ಸು
ಉತ್ತರಕ್ಕೆ, ಮಕರ, ಕುಂಬ, ಮೀನಾ
ನಂತರದಲ್ಲಿ ಅಷ್ಟದಿಕ್ಪಾಲಕರು
ಪೂರ್ವಕ್ಕೆ, ಇಂದ್ರ
ಆಗ್ನೇಯ-ಅಗ್ನಿ
ದಕ್ಷಿಣಕ್ಕೆ-ಯಯ
ನೈರುತ್ಯ-ನಿರುಮತಿ
ಪಶ್ಚಿಮಕ್ಕೆ-ವರುಣ
ವಾಯುವ್ಯ-ವಾಯು
ಉತ್ತರಕ್ಕೆ-ಕುಬೇರ
ಈಶಾನ್ಯಕ್ಕೆ -ಈಶಾನ್ಯ

ಹೀಗೆ ವ್ಯವಸ್ಥಿತವಾಗಿ ಭಿತ್ತಿಶಿಲ್ಪಗಳನ್ನು ಜೋಡಿಸಿ ಕಲಾತ್ಮಕಗೊಳಿಸಿದ್ದಾರೆ. ಇದೇನಿದು ಗರ್ಭಗುಡಿಯೇ ಕಾಣುತ್ತಿಲ್ಲವಲ್ಲವೆಂದು ಸ್ವಲ್ಪ ಸುತ್ತಾ ಕಣ್ಣಾಡಿಸಿದರೇ ಓ ಕಲಾ ಯಾತ್ರಿಕನೇ ನೀನು ಮೂಲದೇವರನ್ನೇ ಮೊದಲು ನೋಡದೇ ಸುತ್ತಲೂ ಗಮನ ಹರಿಸುವೆಯಲ್ಲಾ ಎಂದು ಮನಸ್ಸಿನ ಮೂಲೆಯಲ್ಲಿ ಎದ್ದ ಅಲೆ ಕಾಮ ಕಾಮೇಶ್ವರಿಯ ಕಡೆಗೆ ಗಮನಹರಿಸುತ್ತದೆ.

ಈ ವಿಗ್ರಹಗಳ ವಿಶೇಷವೆಂದರೇ ಕಾಮ ಕಾಮೇಶ್ವರಿ ಎರಡು ವಿಗ್ರಹಗಳ ಹಸ್ತಗಳಲ್ಲಿಯೂ ಕಬ್ಬಿನ ಜಿಲ್ಲೆಯಂತಹ ಹಂಬು, ಅಂಕುಶ, ಪಾಶ, ಹೂವಿನ ಮೊಗ್ಗು ಹೊಂದಿದೆ. ಈ ದ್ವಿಮೂರ್ತಿಗಳ ಶಿರಸ್ಸಿನಲ್ಲಿ ಚಂದ್ರ ದಾರಣೆಯಿದೆ. ಪೀಠ ಭಾಗದಲ್ಲಿ ಪರಮೇಶ್ವರ ಶಯನ ಶೈಲಿಯಲ್ಲಿದ್ದಾನೆ. ಕಾಮ ಎಡಗಾಲನ್ನು ತೊಡೆಯ ಮೇಲಿಟ್ಟುಕೊಂಡಿದ್ದರೇ, ಕಾಮೇಶ್ವರಿ ಬಲಗಾಲನ್ನು ಮಡಚಿ, ಎಡಗಾಲನ್ನು ನೀಳವಾಗಿರಿಸಿರುವುದನ್ನು ಕಾಣಬಹುದಾಗಿದೆ. ಅತ್ಯಂತ ಪ್ರಭಾವಿತವಾದ ಈ ಮೂರ್ತಿಗಳು ಪ್ರಭಾವಳಿಯಲ್ಲಿ ಪಂಚಾದಶ ಮೂಲಾಕ್ಷರವನ್ನು ಕೆತ್ತಿದ್ದಾರೆ. ಪೀಠದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರೇ ಆದಿವಾಸವಾಗಿದ್ದಾರೆ. ಇದೊಂದು ಅಪೂರ್ವ, ತೇಜೋಮಯ, ಸಕಲಾಭಿಷ್ಟಗಳನ್ನು ನೆರವೇರಿಸುವ ಶಕ್ತಿದಾಯಿನಿಯೆಂದು ಜನರ ನಂಬಿಕೆಯಾಗಿದೆ.

ಈ ಎಲ್ಲಾ ಕಲೆಗ್ತತನೆಯ ಹಿನ್ನಲೆಯಲ್ಲಿ ಸ್ವಾಮಿಗಳವರ ಮತ್ತು ಶಿಷ್ಯರ ಶ್ರಮದ ಸಾರ್ಥಕತೆಯನ್ನು ವಿಚಾರಮಾಡಬೇಕು. ಅದೆಂತಹ ಕಠಿಣ ಪರಶ್ರಮವೆಂದೆನಿಸದೇ ಇರದು. ಗರ್ಭಗುಡಿಯ ಮೂಲ ಮೂರ್ತಿಯನ್ನು ಮನದಲ್ಲೇ ನೆನೆದು ಹೊರಬಂದರೇ ಮಹಾನಂದಿಯ ಮಂಟಪಕ್ಕೆ ಅಂಟಿಕೊಂಡಂತೆ ಧ್ವಜಸ್ತಂಬವಿದೆ. ಆ ಧ್ವಜಸ್ತಂಬದ ತಳಭಾಗ ಚೌಕಾಕಾರವಾಗಿದ್ದು, ಅವುಗಳಲ್ಲಿ ಲೋಹದ ತಗಡುಗಳಲ್ಲಿ ಮಾಡಿರುವ ಉಬ್ಬಚ್ಚು ಮಾದರಿಯ ಶಿಲಾಕೆತ್ತನೆಯಿದೆ. ಹೊರಮೈಗೆ ಗಣಪತಿ ದರ್ಶನವಾದರೇ, ಒಳಮೈಗೆ ನಂದಿಯ ಹಿನ್ನೆಲೆಗೆ ಸೇರಿದಂತೆ ಕೈಮುಗಿದು ನಿಂತಿರುವ ಭಕ್ತ. ಅಕ್ಕಪಕ್ಕಗಳಲ್ಲಿ ತ್ರಿಶೂಲ, ಡಮರುಗದ ಉಬ್ಬಚ್ಚು ಶಿಲ್ಪಗಳಿವೆ. ಧ್ವಜಸ್ತಂಬದ ಮೇಲ್ಭಾಗವನ್ನು ನೋಡುತ್ತಿದ್ದಂತೆಯೇ ದೇವಾಲಯದ ಸಂಪೂರ್ಣ ಹೊರನೋಟ ಕಾಣುತ್ತದೆ. ಸಣ್ಣ ಸಣ್ಣ ಶಿಲಾ ಮೂರ್ತಿಗಳ ಸಮುಚ್ಛಯ ಕಾಣಬಹುದು. ಮುಖ ಮಂಟಪದ ಹೊರಮೈ ಸಹ ಕಿರುಗೂಡುಗಳನ್ನು ಹೊಂದಿದ್ದು, ಅಲ್ಲಲ್ಲಿ ಪರಿವಾರ ದೇವತೆಗಳ, ಹೂಬಳ್ಳಿಗಳ, ಮಿಂಚುಗೊಂಚಲು, ಸಂಚುಹೊನಲು, ಒಂದಕ್ಕೊಂದು ಸವಾಲೆಸೆಯುತ್ತೇವೆಯೋ ಎಂಬಂತೆ ಸೊಗಸಿನಿಂದ ಸಮ್ಮೋಹನಗೊಳಿಸುತ್ತವೆ.

ಆದರೆ ಈ ದೇವಾಲಯವನ್ನು ಕುತೂಹಲ ದೃಷ್ಟಿಯಿಂದಾಗಲೀ, ಅಥವಾ ಸಂಶೋಧನ ದೃಷ್ಟಿಯಿಂದಾಗಲೀ, ನೋಡಿದರೆ ಯಾವ ದಾಖಲೆಗಳು ಸಿಗುವುದಿಲ್ಲ. ಮಾಡಿಸಿದವರಾಗಲೀ, ಮಾಡಿದವರಾಗಲೀ, ಯಾವ ವರ್ಷ ಉದ್ಘಾಟನೆಯಾಯಿತೆಂಬುದಾಗಲೀ, ದೊರಕುವುದಿಲ್ಲ. ಎಲ್ಲಿಯೂ ಸಂಬಂಧಿಸಿದ ಶಿಲಾಶಾಸನಗಳು ಇಲ್ಲಿ ಕೇವಲ ನಲವತ್ತೈದು ವರ್ಷಗಳಷ್ಟು ಹಳೆಯದಾದ ಈ ದೇವಾಲಯ ದಾಖಲೆ ರಹಿತವಾಗಿರುವುದು, ಸಂಬಂಧಿಸಿದವರ ಆಲಸ್ಯವೆನ್ನವುದೇ, ಪ್ರಚಾರ ಬಯಸದ ಶಿಲ್ಪಿಗಳ ಮನೋಧರ್ಮವೆನ್ನುವುದೇ, ಅಥವಾ ಆಡಳಿತಾತ್ಮಕವಾದ ನಿರ್ಲಕ್ಷತನವೇ ಎಂಬುದಾಗಿ ಮನ ಮಿಡಿಯುತ್ತದೆ. ಇನ್ನು ಹತ್ತಾರು ವರ್ಷಗಳಲ್ಲಿ ಇದೊಂದು ಪ್ರಾಚೀನ ದೇವಾಲಯವೆಂದು ಭ್ರಮಿಸುವಂತೆ ಆಗುವುದರಲ್ಲಿ ಸಂದೇಹವಿಲ್ಲ.

ಸಾಹಿತ್ಯ ಮತ್ತು ಶಿಲ್ಪಗಳೆರಡರ ದೃಷ್ಟಿಯಿಂದಲೇ ವಿಚಾರ ಮಾಡಿದಾಗ ಅಭಾಲವೃದ್ಧರಾದಿಯಾಗಿ ಸರ್ವಕಾಲಕ್ಕೂ ಸರ್ವರಿಗೂ ಶಿಲ್ಪವು ಗ್ರಾಹ್ಯವಾದದ್ದು ದೇವರೆಂದಾದರೂ ಪೂಜಿಸಿ, ಅತ್ಯುತ್ತಮ ಕಲಾಕೆತ್ತನೆಯೆಂದಾದರೂ ಭಾವಿಸಿ, ಮನೋರಂಜನೆ ಶಿಲ್ಪವೆಂದಾದರೂ ತಿಳಿಯಿರಿ. ವೀಕ್ಷಿಸಿದಾಗ ಯಾವುದೋ ರೀತಿಯ ಮನಸ್ಸಿನ ಭಾವನೆಗಳು ತರಂಗ ತರಂಗವಾಗಿ ಹೊರಹೊಮ್ಮುತ್ತವೆ. ಅಹಾ ಎಷ್ಟು ಚೆನ್ನಾಗಿದೆ ಎಂದು ತನಗರಿವಿಲ್ಲಿದಂತೆಯೇ ಉದ್ಗರಿಸುತ್ತಾ ಹೋಗುತ್ತಾನೆ ಇದು ಶಿಲ್ಪದ ಮರ್ಮ.

ಬಹುತೇಕ ಯಾವ ಶಿಲ್ಪಿಯು ತನ್ನ ಹೆಸರನ್ನೇ ತಾನು ಕೆತ್ತಿರುವ ಶಿಲಾವಿಗ್ರಹದ ಮೇಲೆ ಮೂರ್ತಗೊಳಿಸಿರುವುದಿಲ್ಲ. ನಾನು

ಎಂಬುದೇನಿದೆ? ಎಲ್ಲವೂ ಶಿವನಿಚ್ಛೆ. ದೈವನಿಯಾಮಕ, ಅವನು ಶಕ್ತಿ, ಬುದ್ಧಿಕೊಟ್ಟರೇ ತಾನೇ ಮಾಡುವುದು, ಮಾಡುವವನು ನಾನಾದರೇ ಮಾಡಿಸುವಾತ ದೇವನು. ನಾನು ಅನ್ನುವಾಗ ಆ ಶಕ್ತಿ ಯುಕ್ತಿ ಬುದ್ಧಿ ಕೊಟ್ಟವನು ಆತನಲ್ಲಿವೆ. ಅದಕ್ಕಾಗಿಯೇ ಆ ದೇವನಿಗೆ ಅರ್ಪಿತವಾದದ್ದು ಅಪೇಕ್ಷೆಯಾದದ್ದು. ನಾನೆಂಬುದು ಕೇವಲ ನೆಪಮಾತ್ರ. ಈ ತತ್ವಚಿಂತನೆಯಲ್ಲಿಯೇ ನಮ್ಮ ಹಿಂದಿನ ಶಿಲ್ಪಿಗಳು ಯಾರು ತಮ್ಮ ಹೆಸರನ್ನು ಎಲ್ಲಿಯೂ ದಾಖಲೆ ಗೊಳಿಸಲಿಲ್ಲದೆಂಬುದಾಗಿ ಊಹಿಸಬಹುದಾಗಿದೆ.

ಜಗದ್ವಿಖ್ಯಾತ ಬೇಲೂರು, ಹಳೇಬೀಡು, ಸೋಮನಾಥ ಪುರ, ದೇವಾಲಯದ ಶಿಲ್ಪಗಳಾಗಲೀ, ಕಾಶಿ, ಕೇದಾರ, ಅಮರನಾಥನಂತಹ ಪ್ರಸಿದ್ಧ ಸ್ಥಳಗಳಲ್ಲಿರುವ ವಾಸ್ತುಶಿಲ್ಪ ಗಳಲ್ಲಾಗಲೀ, ಶಿಲ್ಪಿಯ ಹೆಸರಾಗಲೀ, ಮಾಡಿಸಿದವರ ಹೆಸರಾಗಲೀ ಕಂಡುಬರುವುದಿಲ್ಲ. ಚರಿತ್ರೆ, ಇತಿಹಾಸ ಬರೆಯುವಾಗ ಆ ಕಾಲದ ರಾಜರುಗಳು ತಮ್ಮ ತಮ್ಮ ದಿಗ್ವಿಜಯದ ಜ್ಞಾಪಕಾರ್ಥವಾಗಿ ಅಥವಾ ಅಭೀಷ್ಟ ನೆರವೇರಿಕೆಗಾಗಿ, ಮತ್ತಾವುದೋ ಕಾರಣದಿಂದ ದೇವಾಲಯ ನಿರ್ಮಾಣದಂತಹ ಕಾರ್ಯಗಳಿಗೆ ಪ್ರೋತ್ಸಾಹಿಸಿದ ವಿಷಯವನ್ನು ಶಿಲಾಲೇಖನಗಳಲ್ಲಿ, ತಾಮ್ರಪಟಗಳಲ್ಲಿ, ಓಲೆಗರಿಗಳಲ್ಲಿ ಬರೆಸಿರುವುದನ್ನು ಕಾಣುತ್ತೇವೆ. ಅದರ ಆಧಾರದಿಂದಲೇ, ಹೊಯ್ಸಳ, ಚಾಲುಕ್ಯ, ರಾಷ್ಟ್ರಕೂಟ ಪಲ್ಲವರು, ಚೋಳರು ಇತ್ಯಾದಿ ರಾಜರ ಕಾಲವನ್ನು ಗುರ್ತಿಸಿ ಅವರ ಕಾಲದ ಶಿಲ್ಪಕಲೆಯೆಂದು ಪರಿಗಣಿಸುತ್ತೇವೆ. ಆದರೆ ಎಲ್ಲಿಯೂ ಆ ಮೂರ್ತಿ ಕಡೆದ ಶಿಲ್ಪಿಯ ಹೆಸರು ಕಂಡುಬರುವುದಿಲ್ಲ. ಈ ಮಾತಿಗೆ ಅಪವಾದವೆಂಬಂತೆ ಎಲ್ಲೋ ಒಂದೆರಡು ಕಡೆಗಳಲ್ಲಿ ಶಿಲ್ಪಿಯ ಹೆಸರನ್ನು ದಾಖಲಿಸಿರುವುದನ್ನು ಕಾಣಬಹುದಾಗಿದೆ. ಅದು ಪ್ರದರ್ಶನ ಶಿಲ್ಪಕ್ಕೆ ಮಾತ್ರ ಪೂಜಾ ಶಿಲ್ಪದಲ್ಲಿಯಂತೂ ಎಲ್ಲಿಯೂ ಯಾರು ಇದುವರೆಗೆ ತಮ್ಮ ಹೆಸರನ್ನೇ ಕೆತ್ತಿರುವುದಿಲ್ಲ.

ಕವಿಯಾದವನ ಹೆಸರು ಆಯಾಯಕಾಲದ ರಾಜನೊಡನೆ ಬೆರತು, ರಾಜನ ಹೆಸರು ಹೇಳುವಾಗ ಕವಿಯ ಹೆಸರು, ಕವಿಯ ಹೆಸರು ಹೇಳುವಾಗ ರಾಜನ ಹೆಸರು ಮಿಳಿತವಾಗಿರುತ್ತವೆ. ಅಂತಹ ಉದಾಹರಣೆಗಳು ಹಲವಾರು, ಭೋಜರಾಜನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸ, ಅಕ್ಬರನ ಆಸ್ಥಾನದಲ್ಲಿ ಬೀರಬಲ್, ತಾನ್‌ಸೇನ್, ಇದ್ದಂತೆ ನಮ್ಮ ಕನ್ನಡದ ಕವಿಗಳಾದ ಪಂಪ, ಚಾಲುಕ್ಯರಾಜ ಅರಿಕೇಶರಿಯೊಡನೆ, ಪೊನ್ನ ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನೊಡನೆ, ರನ್ನ ಕವಿಯ ಹೆಸರು ಚಾವುಂಡರಾಯ ಅಥವಾ ಅತ್ತಿಮಬ್ಬೆಯೊಡನೆ ಇವರುಗಳ ಹೆಸರುಗಳು ಮಿಳಿತವಾಗಿವೆ. ಹಾಗೆ ಯಾವ ಹೆಸರು ಮಿಳಿತಗೊಂಡು ಪ್ರಚಾರ ಗೊಂಡಂತೆ ಕಂಡಬರುವುದಿಲ್ಲ.

ಸಾಮಾನ್ಯವಾಗಿ ಶಿಲ್ಪಿಯ ಕುಟುಂಬದ ಸೌಖ್ಯರಾಜ ನಿಂದಾಗುತ್ತಿತ್ತು. ಊಟ, ವಸತಿ, ವಸ್ತ್ರಗಳಿಗೆ ಕೊರತೆ ಇರಲಿಲ್ಲ. ಈಗಿನ ಹಾಗೆ ಎಲ್ಲವನ್ನು ಬೇಕು ಬೇಕೆಂಬ ಮಹತ್ವಾಕಾಂಕ್ಷೆ ಬೇಡಿಕೆಯು ಅವರಲ್ಲಿರಲಿಲ್ಲ. ಇದ್ದದರಲ್ಲಿಯೇ ತೃಪ್ತಿ, ಎಲ್ಲವನ್ನು ಶಿವಾರ್ಪಣ ಎಂಬ ಸಾತ್ವಿಕಗುಣ. ರಾಜರನ್ನು ಮೆಚ್ಚಿಸಬೇಕೆಂಬ ಮಹತ್ವಾಕಾಂಕ್ಷೆ ಹಗಲಿರುಳೆನ್ನದೇ ತನ್ನ ಕೆತ್ತನೆಯ ಕೃತಿಯಲ್ಲಿ ತಲ್ಲೀನ. ಅನ್ಯವಿಷಯಕ್ಕೆ ಆಹ್ವಾನವಿಲ್ಲ. ತನ್ನ ಭವಿಷ್ಯದ ಚಿಂತೆಯಂತೂ ಇಲ್ಲವೇ ಇಲ್ಲ. ತನ್ನ ಕೆಲಸವೇ ತನ್ನ ಮಗನಿಗೆ ಎಂಬ ಸದೃಢ ನಂಬಿಕೆ. ಅವನಿಗೂ ರಾಜಾಶ್ರಯದ ನೆಲೆಯೊದಗಲಿ ಎಂಬಾಸೆ. ಸ್ವತಂತ್ರ ಬದುಕಿನ ಬಗೆಗೆ ಎಂದೂ ಚಿಂತಿಸದವರಲ್ಲ. ಇವು ಶಿಲ್ಪ ಕರ್ಮ ಪರಂಪರೆಯಲ್ಲಿ ಊಹಿಸಬಹುದಾದ ದೃಗೋಚರ ವಿಚಾರಗಳು.

ಬರವಣಿಗೆ ಬಲ್ಲ ಬಹುಬುದ್ಧಿವಂತರ ಜಾಲದಲ್ಲಿ ಶಿಲ್ಪ ಕರ್ಮಿಯ ಹೆಸರು ಅವನೋರ್ವ ಕೆಲಸಗಾರನೆಂದು, ಕೆತ್ತನೆ ಗಾರನೆಂದೂ, ಕೊನೆಯ ಹಂತಕ್ಕೆ ತಳ್ಳಿ, ಭಾಷೆಯ ಪ್ರಭುತ್ವ ಪ್ರಥಮ ಸ್ಥಾನ ಪಡೆಯುತ್ತದೆ. ಇಂತಹ ಸಂದರ್ಭಗಳು ಅಧಿಕ ಗೊಂಡು ಶಿಲ್ಪಿ ಅವಜ್ಞೆಗೊಳಗಾಗಿದ್ದಾನೆಂಬುದು ವಾಸ್ತವಿಕ ಸತ್ಯ. ಇದಕ್ಕೆ ಅಮರಶಿಲ್ಪಿ ಎಂದು ಕರೆಯಲ್ಪಡುವ ಜಕಣಾಚಾರ್ಯನು ಹೊರತಾಗಿಲ್ಲ. ಅನೇಕ ವಿವಿಧ ನೆಲೆಗಳಲ್ಲಿ ಜಕಣಾಚಾರ್ಯನ ಇರುವಿಕೆಯನ್ನು ಪ್ರಶ್ನಿಸುವಂತಾಗಿದೆ.

ಆದರೇ ಶಿಲ್ಪ ಸಿದ್ಧಾಂತಿ ಸಿದ್ದಲಿಂಗ ಸ್ವಾಮಿಗಳವರ ವಿಷಯದಲ್ಲಿ ಬಹುವ್ಯತ್ಯಯವಿದೆ. ಸ್ವಾಮಿಗಳು, ಸಾಹಿತ್ಯ, ಕಲೆ, ಶಿಲ್ಪಗಳ ತ್ರಿವೇಣಿ ಸಂಗಮ. ಇವುಗಳಲ್ಲಿ ಯಾವುದ ಹೆಚ್ಚು ಯಾವುದು ಕಡಿಮೆ ಎಂದು ವಿಂಗಡಿಸಲಾಗದಷ್ಟು ರೀತಿ, ಈ ಮೂರು ಮುಪ್ಪರಿಗೊಂಡು ಮಿಳಿತವಾಗಿವೆ. ಒಂದು ಬಿಟ್ಟು ಒಂದು ಹೇಳುವಂತಿಲ್ಲ. ಈ ತ್ರಿವೇಣಿ ಸಂಗಮಕ್ಕೆ ಪೂರಕವಾಗಿ ಜಪ ತಪ, ಅನುಷ್ಠಾನ, ವಿಧಿ ವಿಧಾನಗಳು ಮೈದುಂಬಿಕೊಂಡು ಸ್ವಾಮಿತ್ರರ ಸಾರ್ವಭೌಮಿಕವಾಗಿ ಮೆರೆಯಲು ಸಹಕಾರಿಯಾದವು.

ಸತ್ ಪರಂಪರೆ

ವಿಜಯನಗರವನ್ನಾಳಿದ ಮಹಾಪ್ರಭುಗಳಲ್ಲಿ ಪ್ರೌಢ ದೇವರಾಯ, ಶ್ರೀ ಕೃಷ್ಣದೇವರಾಯರು ಮುಖ್ಯವೆನಿಸುತ್ತಾರೆ. ಪ್ರೌಢ ದೇವರಾಯನು ಪ್ರಜಾಹಿತ ಚಿಂತಕನು, ಸಾಹಿತ್ಯ ಸಂವರ್ದನ ಕಾರನು ಆಗಿದ್ದನು. (೧೪೧೯-೧೪೪೬) ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಆದ ಸಾಮಾಜಿಕ ಕ್ರಾಂತಿ ನಂತರದ ಕ್ಷೋಭೆಗಳಿಂದ ಹರಿದು ಹಂಚಿಹೋಗಿದ್ದ ವಚನ ಸಾಹಿತ್ಯವನ್ನು ಕ್ರೋಢಿಕರಿಸುವಲ್ಲಿ ಮತ್ತದರ ಸಂಸ್ಕರಣೆಗಳಲ್ಲಿ ಮಹತ್ತರ ಪಾತ್ರವಹಿಸಿದ ಪ್ರೌಢದೇವರಾಯನು ಯಾವುದನ್ನೇ ಆಗಲೀ. ತನ್ನ ಓರೆಗಲ್ಲಿನ ಮೂಸೆಯಿಂದ, ವಿವೇಕ ವಿಚಕ್ಷಣೆ

ಸಹಿತವಾಗಿ ಪರಿಶೀಲಿಸಿ ಒಪ್ಪುತ್ತಿದ್ದವನು. ಆತನ ಕಾಲದಲ್ಲಿದ್ದ ನೂರಾ ಒಂದು ವಿರಕ್ತರ ಮೂಲಕ ವಚನ ಸಾಹಿತ್ಯ ಸಂವರ್ದನೆಗೆ ಚಾಲನೆ ನೀಡಿದನು.

ಅವರಲ್ಲಿ ಕರದಲ್ಲಿಯೇ ಲಿಂಗದ ಚಿಹ್ನೆಯನ್ನು ಹೊಂದಿದ್ದ ನಾಗಲಿಂಗಸ್ವಾಮಿಗಳು ಮುಖ್ಯವೆನಿಸುತ್ತಾರೆ. ಅವರು ಪರಮ ವೈರಾಗಿಗಳು, ಪವಾಡ ಪುರುಷರು ಆಗಿದ್ದು ನುಡಿ ಪುರುಷ, ನಡೆ ಪರುಷವಾಗಿತ್ತು ಅವರ ಜೀವನ ಶೈಲಿ. ಅವರನ್ನು ಗುರುಗಳನ್ನಾಗಿ ಸ್ವೀಕರಿಸಿ ಪ್ರೌಢ ದೇವರಾಯನು ಅನನ್ಯ ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದನೆಂದು ಚರಿತ್ರಾರ್ಹ ಅಂಶಗಳಿಂದ ತಿಳಿದುಬರುತ್ತದೆ. ಕರಸ್ಥಲದ ನಾಗಲಿಂಗ ಸ್ವಾಮಿಗಳವರನ್ನು ಕುರಿತು ಸಿದ್ದಲಿಂಗ ಸ್ವಾಮಿಗಳು ಸುಮಾರು ಹತ್ತು ಕಲಾಕೃತಿ (ಜಲವರ್ಣ) ಗಳನ್ನು ರಚಿಸಿದ್ದಾರೆ. ಕಥಾ ಸರಣಿಯ ಹಿನ್ನಲೆಯಲ್ಲಿ ರಚಿಸಿರುವ ಒಂದೊಂದು ಚಿತ್ರವೂ, ಉತ್ತಮ ಸಂಯೋಜನೆ, ಸಾಂದರ್ಭಿಕ ಸನ್ನಿವೇಷಗಳನ್ನು ಒಳಗೊಂಡಿದೆ. ಅಂತವರ ಸತ್‌ಪರಂಪರೆಯಲ್ಲಿ ಬಂದವರು ಸಚ್ಚಿದಾನಂದ ನಂಜುಂಡ ಶಿವಯೋಗಿಗಳವರು (೧೯ನೇ ಶತಮಾನ).

ಉತ್ತರ ಕರ್ನಾಟಕದ ನವಲಗುಂದದ ಕಡೆಯಿಂದ ಬಂದ ನಂಜುಂಡ ಶಿವಯೋಗಿಗಳವರು ಕರ್ನಾಟಕಾದ್ಯಂತ ಸಂಚರಿ ಸುತ್ತಿದ್ದು, ಮೈಸೂರು, ಚಾಮರಾಜನಗರ ಕೊಳ್ಳೆಗಾಲ, ಸೊತ್ತೆಗಾಲ ಕಡೆಗಳಲ್ಲಿ ಹೆಚ್ಚಿನ ಶಿಷ್ಯರನ್ನು ಹೊಂದಿದ್ದರು. ಅವರಲ್ಲಿ ಸಿದ್ದಪ್ಪಾಜಿಸ್ವಾಮಿ ಮತ್ತು ಮಲ್ಲಾಜಮ್ಮಣ್ಣಿ ಎಂಬ ದಂಪತಿಗಳು ಇವರ ಪರಮ ಭಕ್ತರಾಗಿದ್ದರು. ಈ ದಂಪತಿಗಳ ಸುಪುತ್ರರೇ ಸಿದ್ದಲಿಂಗಾಚಾರ್ಯ ನಂತರ ಸ್ವಾಮಿಗಳಾದರು. ವಿದ್ಯಾರ್ಜನೆ ಜ್ಞಾನಾರ್ಜನೆ ಜೊತೆಗೆ ಆಧ್ಯಾತ್ಮದ ಅರಿವು ಮೂಡಿಸಿ ಮೈಸೂರಿನಲ್ಲಿ ನಾಗಲಿಂಗ ಸ್ವಾಮಿಗಳವರ ಮಠವನ್ನು ಸ್ಥಾಪಿಸಿ ಅದರ ಗುರುಗಳನ್ನಾಗಿ ಮಾಡುವಲ್ಲಿ ಶ್ರೀ ನಂಜುಂಡ ಶಿವಯೋಗಿ ಗಳವರ ಪಾತ್ರ ಹಿರಿದು.

ವೈರಾಗ್ಯ ನಿಧಿಯಾದ ಶ್ರೀ ನಂಜುಂಡ ಶಿವಯೋಗಿಗಳವರ ಹಸ್ತ ಮಸ್ತಕ ಸಂಯೋಗದಿಂದ ಚಿತ್ಪ್ರಭೆ ಹೊರಹೊಮ್ಮಿ ಸಿದ್ದಲಿಂಗ ಸ್ವಾಮಿಗಳು ಸಗುಣ ಸಾಕ್ಷಾತ್ಕಾರ ಗಳಿಸಿಕೊಳ್ಳಲು ಪ್ರೇರಕವಾಯಿತು. ತತ್ಪಲವಾಗಿ ಸ್ವಾಮಿಗಳು ಆರಂಭಿಸಿದ ಯಾವುದೇ ಕೆಲಸ, ಆಡಿದ ಮಾತು, ಸಟೆಯಿಲ್ಲದೇ ದಿಟವಾದವು. ಸತಸಂಕಲ್ಪದಿಂದ, ಸನ್ಮಾರ್ಗದತ್ತ ಸಕಲರನ್ನು ಕೊಂಡೆಯ್ಯುವ ದಾರಿದೀವಿಗೆಯಾದ ಪಲವಾಗಿ ಶ್ರೀಮನ್ ಮಹಾರಾಜರವರು ಶ್ರೀ ಸಿದ್ದಲಿಂಗ ಸ್ವಾಮಿಗಳವರನ್ನು ಗುರುವನ್ನಾಗಿ ಸ್ವೀಕರಿಸಿದರು. ಶ್ರೀಗಳವರಿಂದ ಲಿಂಗ ದೀಕ್ಷಾ ಸಂಸ್ಕಾರ ಪಡೆದು ರಾಜ ಋಷಿಯಂತೆ ಸನ್ಮಾರ್ಗ ಪ್ರವರ್ತಕರಾದರು. ಮಹಾರಾಜರವರು ಚಿತ್ರ ಶಿಲ್ಪಾದಿಗಳಿಗೆ ಆಶ್ರಯದಾತರಾದರು. ಪೋಷಿಸಿದರು ಬೆಳೆಸಿದರು ಮೈಸೂರು ರಾಜ್ಯವನ್ನಾಳಿದ ಒಡೆಯರ್‌ರವರ ಚರಿತ್ರೆಯಲ್ಲಿ ಇದೊಂದು ಸುವರ್ಣ ಅಧ್ಯಾಯ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಅರಮನೆ ಮತ್ತು ಗುರುಮನೆ ಸಂಬಂಧ

ಚಿತ್ರ ಶಿಲ್ಪಾದಿಗಳ ನಿರ್ಮಾಣಕ್ಕೆ ಮಾತ್ರ ಸೀಮಿತ ವಾಗಿರಲಿಲ್ಲ. ಅರಮನೆ ಸಂಬಂಧ ಅವೆಲ್ಲವನ್ನು ಮೀರಿದ ಅಂತರಂಗದ ಗುರುಭಕ್ತಿ, ಅತ್ಯಂತ ಶ್ರೇಷ್ಠವಾದದ್ದು. ಶ್ರೀ ಒಡೆಯರ್ ಅವರು ಸ್ವತಃ ಪ್ರತಿನಿತ್ಯ ಲಿಂಗಪೂಜಾ ನಿರತರಾಗಿದ್ದುದಲ್ಲದೇ ಶ್ರೀ ಗುರುವಿನ ಪಾದೋದಕ ಪ್ರಸಾದವನ್ನು ಸ್ವೀಕರಿಸಿದ ನಂತರವೇ ತಮ್ಮ ದೈನಂದಿನ ರಾಜ್ಯ ಬಾರ. ಗುರು ಶಿಷ್ಯರ ಪೂಜಾನುಷ್ಠಾನಗಳು ಅರಮನೆ ಮತ್ತು ಗುರುಮನೆಗಳಲ್ಲಿ ಏಕಕಾಲದಲ್ಲಿ ನಡೆಯುತ್ತಿದ್ದುದು ಒಂದು ಬಗೆಯಾದರೇ, ಪಾದೋದಕ ಪ್ರಸಾದವನ್ನು ಸ್ವೀಕರಿಸುವಲ್ಲಿ ಅವರು ವಹಿಸುತ್ತಿದ್ದ ಆಸ್ಥೆ ಅಚ್ಚರಿಮಾತ್ರವಲ್ಲ, ಇತರರಿಗೂ ದಾರಿ ದೀಪವಾಗುವಂತಹದ್ದು. ಸತ್-ಪರಂಪರೆಯ ದ್ಯೋತಕವು ಹೌದು.

ಶ್ರೀಮನ್ ಮಹಾರಾಜರವರು ಯಾವುದೇ ಸಂದರ್ಭದಲ್ಲಿ ಯಾದರೂ ಗುರುಮನೆಗೆ ಬರುತ್ತಿದ್ದರು ಅಥವಾ ಅವರನ್ನು ಕರೆಸಿ ಕೊಳ್ಳುತ್ತಿದ್ದರು. ಗುರು ಸನ್ನಿಧಿಯಲ್ಲಿ ನಡೆಯುತ್ತಿದ್ದ ಸಮಾಲೋಚನೆ, ಸಲಹೆ, ಸ್ವೀಕಾರಗಳು ಪ್ರಜಾಹಿತಕಾರಿಯಾದವು. ಸತ್ಕೀರ್ತಿ ತರುವಂತಹದ್ದಾಗಿದ್ದವು. ತತ್ಪಲವಾಗಿಯೇ ಸ್ವಾಮಿಗಳ ಆರ್ಶೀವಾದ ಪಡೆದು ಮುಂದಿನ ಹೆಜ್ಜೆ ಇಟ್ಟರೇ ಕೆಲಸ ಸುಗಮವೆಂದು ಭಾವಿಸಿದ ಜನ ಸಾಲಾಗಿ ನಿಂತಿರುತ್ತಿದ್ದರು. ಪ್ರತಿಷ್ಠಿತ ವಿದ್ವಾಂಸರು, ಗಾಯಕರು, ಆಡಳಿತಾರೂಡ ಅಧಿಕಾರಿಗಳು ತಮ್ಮ ಯಾವುದೇ ಕೆಲಸವಿದ್ದಾಗ್ಯೂ ಪ್ರಥಮದಲ್ಲಿ ಸ್ವಾಮಿಗಳನ್ನು ದರ್ಶಿಸಿಯೇ ಮಹಾರಾಜರವರನ್ನು ಕಾಣಲು ಹೋಗುತ್ತಿದ್ದರೆಂಬುದು ವಿಶೇಷ.

ವರ್ಷಕ್ಕೊಮ್ಮೆ ನಡೆಯುತ್ತಿದ್ದ ಆರಾಧನ ಸಂದರ್ಭದಲ್ಲಿ ಶ್ರೀಮನ್ ಮಹಾರಾಜರವರು ಆರಾಧನಾ ಮೆರವಣಿಗೆ ಹೊರಡುವ ಮುನ್ನ ಪ್ರಥಮ ಪೂಜೆ ಸಲ್ಲಿಸುತ್ತಿದ್ದರು. ಅರಮನೆಯ ಸಕಲ ಮರ್ಯಾದೆಗಳು, ಅಂದರೇ ಬ್ಯಾಂಡ್ ಸೆಟ್, ಬಾಜಾ ಬಜಂತ್ರಿ, ಅಶ್ವಾರೂಡ ವಾಹನ, ವೃಷಬ ವಾಹನ, ಬಣ್ಣ ಬಣ್ಣದುಡುಗೆ ಯಿಂದ ಕೂಡಿದ ಸಿಪಾಯಿ ಸಮೂಹ. ದೀವಟಿಗೆಯವರು, ಕೊಂಬು ಕಹಳೆಯವರು, ಇತ್ಯಾದಿ, ಶ್ರೀ ಸಿದ್ಧಲಿಂಗ ಸ್ವಾಮಿಗಳವರನ್ನು ಅಂದು ದರ್ಶಿಸುವುದೇ ಒಂದು ಪುಣ್ಯ. ಹಣೆಯಲ್ಲಿ ತ್ರಿಪುಂಡ್ರ ಭಸ್ಮಧಾರಣೆ. ಗಂಧ, ಶಿರಸ್ಸಿನಲ್ಲಿ ಕಿರೀಟ, ಕಾಲಲ್ಲಿ ಪಾದುಕೆ, ಕೈಯಲ್ಲಿ ಚಿನ್ನದ ಹಿಡಿಯಬೆತ್ತ, ಕಮಂಡಲ, ಕೆಂಪು ಕಾಶಾಯ ವಸ್ತ್ರ ಮತ್ತು ಆ ಸಂಜೆಗತ್ತಲಿನಲಿ ಕೊರೈಸುವಂತಹ ಆಭರಣ ಗಳುಳ್ಳವರಾಗಿ, ಆಸೀನರಾಗಿದ್ದ ಮೇನಾದಲ್ಲಿ ಹೊರಟ ಮೆರವಣಿಗೆ ಮೈಸೂರು ನಗರದ ಪ್ರಮುಖ

ರಸ್ತೆಗಳಲ್ಲಿ ಸಂಚರಿಸಿ, ನಗರದ ಮದ್ಯಭಾಗದಲ್ಲಿರುವ (ಮಂಡಿ ಮೊಹಲ್ಲಾ) ಕಾಳಿಕಾಂಬ ಕಮಟೇಶ್ವರ ಸ್ವಾಮಿಯ ದೇವಸ್ಥಾನ ದಲ್ಲಿರುವ ಜಗತ್ ಸೃಷ್ಟಿಯ ಮೂಲವಾರ ವಿಶ್ವಕರ್ಮ ಮೂರ್ತಿಯನ್ನು, ದೇವಿಯನ್ನು ಪೂಜಿಸಿ ಪುನಃ ಸ್ವಸ್ಥಾನಕ್ಕೆ ಹಿಂತಿರುಗುತ್ತಿದ್ದ ದೃಶ್ಯ, ಮಿನಿ ಜಂಬೂ ಸವಾರಿಯಂತೆ ಕಾಣುತ್ತಿತ್ತೆಂದು ನೆನಸಿಕೊಳ್ಳುತ್ತಾರೆ ಇಂದಿಗೂ ಇರುವ ಹಿರಿಯರು.

ಆರಾದನ ಸಂದರ್ಭದಲ್ಲಿ ನಡೆಯುತ್ತಿದ್ದ ಕವಿಗೋಷ್ಠಿ. ಸಂಗೀತ ಸಮಾರಾಧನೆ, ಭಜನೆ, ನಂತರದಲ್ಲಿ ನಡೆಯುತ್ತಿದ್ದ ದಾಸೋಹ, ಶ್ರೀಮಠದ ಇಕ್ಕೆಲಗಳಲ್ಲಿ ರಸ್ತೆ ತುಂಬಾ ಸೇರುತ್ತಿದ್ದ ಜನ ಪ್ರವಾಹ. ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿವೆ. ಜಗದ್ವಿಖ್ಯಾತ ನವರಾತ್ರಿಯ ಸಂದರ್ಭದಲ್ಲಿ ಸಹ ಇಂತಹದೇ ಕಾರ್ಯಕ್ರಮ ನಡೆದು ಜಗತ್ ಶಾಂತಿಗಾಗಿ ಅನ್ನ ದಾಸೋಹ ವಾಗುತ್ತಿತ್ತು. ಅರಮನೆಯಲ್ಲಿ ನಡೆಯುವ ದಂಪತಿಪೂಜೆ ಮುತ್ತೈದೆಯರ ಪೂಜೆ ಮಾನಸಿಕ ಶಾಂತಿಯ ಪ್ರತೀಕವಾಗಿತ್ತು.

ನವರಾತ್ರಿಯ ನವದಿನಗಳು ಮೈಸೂರು ನಗರಕ್ಕೊಂದು ಸಂಭ್ರಮದ ಕಾಲ. ಎಲ್ಲಿಲ್ಲದ ಉತ್ಸಾಹ, ದೇಶ ವಿದೇಶಗಳಿಂದ ಜನ ಪ್ರವಾಹದೋಪಾದಿಯಲ್ಲಿ ಬರುತ್ತಿದ್ದರು. ಶ್ರೀಮನ್ ಮಹಾರಾಜರು ಸಿಂಹಾಸನಾರೋಹಣ ಮಾಡುವ ಆ ಸಂದರ್ಭ, ವಿದ್ಯುತ್ ಬೆಳಕಿನ ಆ ಗಳಿಗೆಯ ವಿಸ್ಮಯ, ಸಕಲ ವಜ್ರ ವೈಢೂರ್ಯ ಗಳಿಂದ ಪರಿಶೋಭಿಸುತ್ತಾ ದಯಮಾಡಿಸುತ್ತಿದ್ದ ಆ ರಾಜ ತೇಜಸ್ವಿ, ರಾಜಋಷಿಗಳಾದ ಶ್ರೀಮನ್ ಮಹಾರಾಜರವರು ಆಗಲು ಗುರುಭಕ್ತಿ ಸಲ್ಲಿಸಿಯೇ ಸಿಂಹಾಸನಾರೋಹಣ ಮಾಡುತ್ತಿದ್ದರು. ಸಿಂಹಾಸನಕ್ಕೆ ಸನಿಹದಲ್ಲಿಯೇ ಇದ್ದ ರಜತ ಪೀಠದಲ್ಲಿ ಧ್ಯಾನಾ ಶಕ್ತರಾಗಿ ಶ್ರೀ ಸಿದ್ದಲಿಂಗ ಸ್ವಾಮಿಗಳವರು ಕುಳಿತಿರುತ್ತಿದ್ದರು. ಅರಿಷಡ್ವರ್ಗದ ಸಂಕೇತವಾಗಿರುವ ಮೆಟ್ಟಿಲನ್ನು ಏರುವ ಮುನ್ನ ಗುರುಗಳನ್ನು ಮನದಲ್ಲೇ ಸ್ಮರಿಸಿ ಸಿಂಹಾಸನಾರೂಢರಾಗುತ್ತಿದ್ದ ಆ ಸುಂದರ ಸನ್ನಿವೇಷವನ್ನು ಇಂದಿಗೂ ನೆನೆಪಿಸಿಕೊಳ್ಳುತ್ತಾರೆ ನಾಗೇಂದ್ರ ಸ್ತಪತಿಯವರ ಧರ್ಮಪತ್ನಿ ಲಲಿತಮ್ಮನವರು. ನನ್ನ ಪೂರ್ವಜನ್ಮದ ಪುಣ್ಯ ಗುರುಗಳ ಆರ್ಶೀವಾದ ಅಂತಹುದನ್ನು ನಾನು ಕಣ್ಣಲ್ಲಿ ನೋಡಲು ಸಾಧ್ಯವಾಯಿತೆಂದು ತಮ್ಮ ಎಪ್ಪತ್ತೆಂಟನೇ ವಯಸ್ಸಿನ ವಯೋವೃದ್ಧತೆ ಮರೆತು ಉತ್ಸಾಹ ಪೂರ್ವಕವಾಗಿ ಹೇಳುತ್ತಾರೆ. ಅರಮನೆಯೇ ಗುರುಮನೆ, ಗುರುಮನೆಯೇ ಅರಮನೆ ಎಂಬಂತೆ ನಡೆದ ಅಂದಿನ ದಿನಗಳು ಇಂದಿನ ಗತಕಾಲದ ನೆನಪು ಮಾತ್ರ.

ಸ್ವಾಮಿಗಳವರು ಅತ್ಯಧಿಕ ಕಾರ್ಯದೊತ್ತಡದಿಂದ ಜೊತೆಗೆ ವಯೋವೃದ್ಧತೆ (೬೭ ವರ್ಷ) ಗಳಿಂದಾಗಿ ಅನಾರೋಗ್ಯ ಉಲ್ಬಣಿಸಿ ಹಾಸಿಗೆ ಹಿಡಿದರು. ಹಲವಾರು ತಿಂಗಳು ಅರಮನೆಗೆ ಹೋಗಲಿಲ್ಲ. ಮಠದಲ್ಲಿ ಸಹ ಯಾವ ಚಟುವಟಿಕೆ ನಡೆಯಲಿಲ್ಲ. ಶ್ರೀಮನ್ ಮಹಾರಾಜರವರು ತಾವು ದೂರ ಪ್ರಯಾಣದ ಬೆಳೆಸುವವರಾದ್ದರಿಂದ ಪೂರ್ವಭಾವಿಯಾಗಿ ಗುರುದರ್ಶನ ಮಾಡಬೇಕೆಂದು ಶ್ರೀಮಠಕ್ಕೆ ಬಂದ ಸಂದರ್ಭದಲ್ಲಿ ಹಾಸಿಗೆಯಿಂದ ಮೇಲೆಳಲಾರದೇ ಮಲಗಿದ್ದ ಸ್ವಾಮಿಗಳ ಬಳಿ ಬಂದು ತಮ್ಮ ತೊಡೆಯ ಮೇಲೆ ಸ್ವಾಮಿಗಳ ತಲೆಯನ್ನು ಇಟ್ಟುಕೊಂಡು ಸಾವರಿಸುತ್ತಿದ್ದ ಸಂದರ್ಭ. ಗುರು ಶಿಷ್ಯರ ಕಣ್ಣುಗಳು ತೇವಗೊಂಡು ಮನ ಮನ ಮಾತಾಡಿದವು, ಶಬ್ದ ರಹಿತವಾಗಿ, ಅದೇ ಅವರ ಕೊನೆದರ್ಶನ. ಇದೆಂತಹ ಗುರುಶಿಷ್ಯ ಸಂಬಂಧ. ಅದನ್ನು ವರ್ಣಿಸಲು ಬಾರದು ಅನುಭವ ಜನ್ಯವಾದದು. ಸ್ವಾಮಿಗಳವರ ಶಿಷ್ಯೆ ಸುಭಾಷಿಣಿ ದೇವಿಯವರು ತಮ್ಮ ಎಂಬತ್ತರ ವಯೋ ಮಾನದಲ್ಲೂ ಅಂದು ಕಂಡುಂಡ ದೃಶ್ಯವನ್ನು ಮನೋಜ್ಞವಾಗಿ ಬಣ್ಣಿಸುತ್ತಾರೆ. ಇಂತಹ ಗುರುವನ್ನು ಮತ್ತೆ ಕಾಣಲು ಸಾಧ್ಯವೇ ಎಂದು ಕಣ್ಣಲ್ಲಿ ನೀರು ತುಂಬಿ ಕೊಳ್ಳುತ್ತಾರೆ.

ಮಹಾರಾಜರು ಅತ್ತ ದೂರ ಪ್ರಯಾಣ ಬೆಳಸಿದರು. ಇತ್ತ ಸ್ವಾಮಿಗಳು ವಾಪಸ್ಸು ಬರದಂತಹ ದೇಶಕ್ಕೆ ಪ್ರಯಾಣ ಬೆಳಸಿದರು. (೨-೫-೧೯೫೨) ಅರಮನೆಯಿಂದ ಸಕಲ ಮರ್ಯಾದೆಗಳು ಬಂದವು. ಶೋಕ ತಪ್ತ ಜನ ಸಮೂಹ ಸೇರಿತು. ಕಲೆ ಶಿಲ್ಪಾದಿಗಳು ಪಿತೃವಿಲ್ಲದ ಪುತ್ರನಂತೆ ಪರಿತಪಿಸಿದವು.

ಶ್ರೀ ಸಿದ್ದಲಿಂಗ ಸ್ವಾಮಿಗಳವರು ಬರೆದ ಚಿತ್ರಗಳು. ಕೆತ್ತಿದ ಶಿಲ್ಪಗಳು, ತಯಾರಾದ ಶಿಷ್ಯರು ಹಲವಾರು. ಅವೆಲ್ಲವುಗಳ ಪಟ್ಟಿ ಮಾಡುವುದಂತೂ ದುಸ್ಸಾದ್ಯವಾದ ಮಾತು. ಹಾಗೆಯೇ ಅವರ ಕಾಲದ ರಾಜಭೋಗವು ಒಂದು ಯೋಗಾಯೋಗ.

ಸ್ವಾಮಿಗಳು ಎಷ್ಟು ವರ್ಷ ಬದುಕಿದ್ದರು ಎಂಬುದು ಮುಖ್ಯವಲ್ಲ. ಬದುಕಿದ್ದಷ್ಟು ದಿನ ಏನು ಮಾಡಿದರು ಎಂಬುದು ಮುಖ್ಯವಾಗುತ್ತದೆ. ಸ್ವಾಮಿಗಳು ಇಲ್ಲದಿರಬಹುದು. ಅವರ ಚಿತ್ರ, ಶಿಲ್ಪಾದಿಗಳು ನಮ್ಮ ಮುಂದೆ ಇವೆ. ಅವನ್ನು ಸರಿಯಾಗಿ ಕಾಪಾಡಿದರೇ ಭೌತಿಕ ದೇಹವಿಲ್ಲದಿದ್ದರೂ ಕಲಾಕೃತಿಗಳ ಮೂಲಕ ಅವರ ಸ್ವ ಸ್ವರೂಪವನ್ನು ಸ್ಮರಿಸಬಹುದು. ಇದೇ ನಾವು ಅವರಿಗೆ ತೋರಿಸಬೇಕಾದ ಗೌರವ. ಮುಂದಿನ ಜನಾಂಗಕ್ಕೆ ಆಧಾರ ಸಹಿತ ನೋಡ ಬಹುದಾದ ದಾಖಲೆಗಳಾಗಿವೆ.

❑



ಸರಸ್ವತಿ



ಟನಾ ಮೂರ್ತಿ



ಮಹಾಲಕ್ಷ್ಮಿ



ಏಕಮುಖ ಪರಮೇಶ್ವರ

ಮೈಸೂರು ಅರಮನೆಯಲ್ಲಿ ಶಿಲ್ಪಿ ಸಿದ್ಧಲಿಂಗ ಸ್ವಾಮಿಗಳು ರಚಿಸಿರುವ ಚಿತ್ರಗಳ ಧ್ಯಾನಶ್ಲೋಕಗಳು

ಮಹಾಲಕ್ಷ್ಮಿ

ಚತುರ್ಭುಜಾಂ ತ್ರಿನೇತ್ರಾಂಚ ದೇವೀಂ ಪದ್ಮಾಸನ ಸ್ಥಿತಾಂ।
ಪೀತಾಂಬರ ಧರಾಂ ದೇವೀಂ ಶುದ್ಧ ಕಾಂಚನ ಸನ್ನಿಭಾಂ॥
ದಕ್ಷಿಣೇತ್ವ ಭಯಂ ಪೂರ್ವೆ ಡಿಂಡಿಮಂ ವಾಮಹಸ್ತಕೆ।
ಅಪರೇ ದಕ್ಷಿಣೇ ಪದ್ಮಂ ವಾಮೇ ನೀಲೋತ್ಪಲಂ ತಥಾ॥
ಬಿಭ್ರತೀಂಚ ಮಹಾಲಕ್ಷ್ಮೀಂ ಸರ್ವ ಸಂಪತ್ಪ್ರದಾಯನೀಂ।
ನಿತ್ಯಂ ಧ್ಯಾಯಾಮಿ ಮನಸಾ ಸರ್ವಲೊಕೈಕ ಪೂಜಿತಾಂ॥

ಭುವನೇಶ್ವರಿ

ಉಪ್ಯದ್ಭಾಸ್ವತ್ಯಮಾಭಾಂ ವಿಜಿತನವಜಪಾಮಿಂದು ಖಂಡಾವನದ್ಧಾಂ।
ಜ್ಯೋತಿರ್ಮಾಲಾಂ ತ್ರಿಣೇತ್ರಾಂ ವಿವಿದ ಮಣಿಲಸತ್ಕುಂಡಲಾಂ ಪದ್ಮಸಂಸ್ಥಾಂ॥
ಹಾರಗ್ರೈವೇಯ ಕಾಂಚೀ ಮಣಿಗಣವಲಯೆ ಸ್ಸಂಯುತಾಮಂಬರಾಢ್ಯಾ।
ಮಾಗ್ಯಾಂ ಪಾಶಾಂಕುಶಾ ಭ್ಯಾಮ, ಭಯ ವರಕರಾಂ ಭಾವಯೇ ಭೌವನೇ ಶೀಂ॥

ಗಾಯತ್ರಿ

ಮುಕ್ತಾ ವಿದ್ರು ಮಹೇಮ ನೀಲಧವಳಚ್ಛಾಯೈರ್ಮುಖೈ
ಸ್ತ್ರೀ ಕ್ಷಣೈಯುರ್ಕ್ತಾ ಮಿಂದು ನಿಬದ್ಧರತ್ನ ಮಕುಟಾಂ ತತ್ವಾರ್ಥ ವರ್ಣಾತ್ಮಿಕಾಂ।
ಗಾಯತ್ರೀಂ ವರದಾ ಭಯಾಂಕುಶಕಶಾಂ ಶುಭ್ರಂ ಕಪಾಲಂಗುಣಂ
ಶಂಖಂ ಚಕ್ರಮಥಾರವಿಂದ ಯುಗಳಂ ಹಸ್ತೈರ್ವ ಹಂತೀಂ ಭಜೆ॥

ರಾಜ ರಾಜೇಶ್ವರಿ

ಬಾಲಾರ್ಕ ಕೋಟಿ ಭಾಂ ತ್ರ್ಯಕ್ಷಾಂ ಬಾಲೇಂದು ಮುಕುಟೋಜ್ವಲಾಂ।
ಪಾಶಾಂಕುಶೇಷು ಕೋದಂಡ ಪಂಚಬಾಣಲ ಸತ್ಕಾರಾಂ॥
ಮಣಿ ಮಂಗಲ ಸೂತ್ರೇಣ ವಿಲಸತ್ಕಂಬುಕಂ ಧರಾಂ।
ಸರ್ವಶೃಂಗಾರ ವೇಷಾಡ್ಯಾಂ ಸರ್ವಾಭರಣ ಭೂಷಿತಾಂ॥
ಪಂಚ ಬ್ರಹ್ಮಾಸನೇ ಸೇನಾಂ ಪಂಚ ಪ್ರಣವ ರೂಪಿಣೀಂ।
ಸಚಾಮರರ ಮಾವಾಣೀ ಸೇವಿತಾಮ ಜಪಾತ್ಮಿಕಾಂ॥
ನಮಾಮಿ ಸತತಂ ದೇವೀಂ ಸರ್ವಸೌಭಾಗ್ಯದಾಯನೀಂ॥

ಕಾಳಿಕಾ ದೇವಿ

ಅಷ್ಟ ಬಾಹುರ್ಮಹಾಕಾಯಾ ಕಾಲ ಮೇಘ ಸಮಪ್ರಭಾ।
ಶಂಖ ಚಕ್ರ ಗದಾ ಕುಂಭ ಮುಸಲಾಂಕುಶ ಪಾಶಯಕ್।
ವಜ್ರಂಕರ ತಲೇ ಬಿಭ್ರನ್ಮಹೌ ಕಾಳೀ ಮುದೇS ಸ್ತುನಃ॥

ನವದುರ್ಗಾದೇವಿ

ತತ್ರ ಪದ್ಮಾನ್ವಿತ ಸ್ಥಾನೆ। ಪೂಜ್ಯಾ ದುರ್ಗಾಸ್ತು ಮೂರ್ತಿತಃ।
ಅಷ್ಟಾದಶ ಬುಜಾ ಜೈಕಾ। ಪೀನವ ಕ್ಷೋಭು ಜೋರುಕಾ।
ಸರ್ವಾಲಂಕಾರ ಸಂಯುಕ್ತಾ। ಸರ್ವಸಿದ್ಧಿ ಪ್ರದಾಯಿನಿ।
ಮೂರ್ಧಜಂ ಖೇಟಕಂ ಘಂಟಾ। ಮಾದರ್ಶಂ ತರ್ಜನೀಂದನುಃ।
ಧ್ವಜಂ ಡಮರುಕಂ ಪಾಶಂ। ಬಿಭ್ರತೀ ವಾಮಜಾಣಭಿಃ।
ಶಕ್ತಿ ಮುದ್ಗರ ಶೂಲಾನಿ। ವಜ್ರಂ ಶಂಖ ಮಥಾಂಬುಜಂ।
ಶಲಾಕಾಂ ಮಾರ್ಗಣಂ ಚಕ್ರಂ। ದಧಾನಾ ದಕ್ಷಿಣೈಃ ಕರೈಃ।
ಶೇಷಾ ಷ್ಠೋಡಶ ಹಸ್ತಾಸ್ಯುಶ್ಯರಂ। ಡಮರುಕಂ ವಿನಾ।
ಜಯಮಿಚ್ಛದ್ಭಿರೆ ತಾಸ್ತು। ಪೂಜನೀಯಾ ಮನೀಷಿಭಿಃ॥

ಮಹಿಷಾಸುರ ಮರ್ದಿನಿ

ಅರಿಶಂಬ ಕೃಪಾಣ ಖೇಟಬಾಣಾನ್ ಸಧನುಃ ಶೂಲಕ ತರ್ಜನೀಂ ದಧಾನಾಂ।
ಹರಿಣಾ ಮಹಿಷೋತ್ತಮಾಂಗ ಸಂಸ್ಥಾಂ ನವದೂರ್ವಾ ಸದೃಶೀಂ ನಮಾಮಿ ದುರ್ಗಾಂ॥

ಸರಸ್ವತಿ

ಶುದ್ಧ ಸ್ಪಟಿಕ ಸಂಕಾಶಾಂ ಮುಕ್ತಾಭರಣ ಭೂಷಿತಾಂ।
ಚತುರ್ಬಾಹುಂ ದ್ವಿನೇತ್ರಾಂ ಚಕರಂಡ ಮುಕುಟೋಜ್ವಲಾಂ॥
ಆದರ್ಶಂ ದಕ್ಷಿಣೆ ಹಸ್ತೆ ಪುಸ್ತಕಂ ವಾಮಹಸ್ತಕೆ।
ದಕ್ಷಿಣೇS ಪರಹಸ್ತೇತು ಚಾಕ್ಷಮಾಲಾ ವಿಧಾರಿಣೀಂ॥
ಕುಂಡಿಕಾಂ ವಾಮಹಸ್ತೇ ಚ ಧಾರಯಂತೀಂ ಸರಸ್ವತೀಂ।
ಸ್ಮರಾಮಿ ಮನಸಾದೇವಿಂ ಸರ್ವವಿದ್ಯಾಪ್ರದಾಯನೀಂ॥

❑

ನನ್ನ ಗುರುಗಳ ಸನ್ನಿಧಿಯಲ್ಲಿ

- ಕೆ. ಸಿ. ಪುಟ್ಟಣ್ಣಾಚಾರ್

ಕೊಳ್ಳೆಗಾಲದಲ್ಲಿ ಜನಿಸಿದ ಶ್ರೀ ಸಿದ್ದಲಿಂಗ ಸ್ವಾಮಿಗಳು ಬಾಲ್ಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಹಳ ಕಷ್ಟದಿಂದ ಜೀವನ ಸಾಗಿಸುತ್ತಿದ್ದರು. ಪ್ರಾಪ್ತವಯಸ್ಸಿಗೆ ಬಂದ ಮೇಲೆ ನಂಜನಗೂಡು ತಾಲ್ಲೂಕು ಬೆಂಡವಾಡಿ ಗ್ರಾಮದಲ್ಲಿ ಜನಿಸಿದ ಚಿ।। ಸೌ।। ವೀರಮ್ಮನವರೊಡನೆ ವಿವಾಹವಾಗಿ ಸಾಧಾರಣವಾಗಿ ಜೀವನ ಸಾಗಿಸುತ್ತಿದ್ದರು.

ಶ್ರೀ ನಂಜುಂಡ ಶಿವಯೋಗಿಗಳು ಉತ್ತರ ಕರ್ಣಾಟಕದ ನವಿಲುಗುಂದದ ಶ್ರೀ ನಾಗಲಿಂಗ ಸ್ವಾಮಿಗಳ ಮಠದಲ್ಲಿದ್ದು, ಅಲ್ಲಿ ಜ್ಞಾನಾರ್ಜನೆ ಪಡೆದುಕೊಂಡು, ಕೆಲವು ವರ್ಷ ದೀರ್ಘ ತಪಸ್ಸನ್ನಾಚರಿಸಿ ಮೈಸೂರು ಜಿಲ್ಲೆಗೆ ಬಂದರು. ಚಾಮರಾಜನಗರ ತಾಲ್ಲೋಕು ಸಂತೆಮರಹಳ್ಳಿ, ಉಮ್ಮತ್ತೂರು, ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿ ಒಂದು ಸಣ್ಣ ಮಠ ಮಾಡಿ ನಂತರ ಮೈಸೂರು ನಗರದಲ್ಲಿ ಅನೇಕ ಪವಾಡಗಳನ್ನು ತೋರಿದಮೇಲೆ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಅಜ್ಜಿಯವರು ಶ್ರೀ ನಂಜುಂಡಸ್ವಾಮಿಗಳ ಶಿಷ್ಯೆಯಾದರು.

ಶ್ರೀ ನಂಜುಂಡಶಿವಯೋಗಿಗಳು ಚಾಮರಾಜನಗರ ಕೊಳ್ಳೇಗಾಲ ಸುತ್ತ ಮುತ್ತ ಸಂಚರಿಸುತ್ತಿರುವಾಗ ಕೊಳ್ಳೆಗಾಲದಲ್ಲಿ ಶ್ರೀ ಸಿದ್ದಲಿಂಗಸ್ವಾಮಿಗಳು ಇವರ ಕಣ್ಣಿಗೆ ಬಿದ್ದರು. ಅವರ ಅಂತರಂಗಶುದ್ಧಿ ಬ್ರಹ್ಮಚರ್ಯ ಭಕ್ತಿ ವಿನಯಗಳಿಂದ ಕೂಡಿದ ಶ್ರೀ ಸಿದ್ದಲಿಂಗ ಸ್ವಾಮಿಗಳನ್ನು ಶಿಷ್ಯರಾಗಿ ಸ್ವೀಕರಿಸಿ, ಬ್ರಹ್ಮೋಪ, ದೇಶಕೊಟ್ಟು ರಾಜಾಶ್ರಯದಿಂದ ಅಗ್ರಹಾರದಲ್ಲಿ ಒಂದು ಮಠವನ್ನು ನವಲುಗುಂದದ ಶ್ರೀನಾಗಲಿಂಗಸ್ವಾಮಿಗಳ ಶಾಖಾ ಮಠವಾಗಿ ಸ್ಥಾಪಿಸಿ ಆ ಮಠಕ್ಕೆ ಪೀಠಾದಿಪತಿಯಾಗಿ ನೇಮಿಸಿ ಆಶೀರ್ವದಿಸಿದರು.

ಕೆಲಕಾಲಾನಂತರ ಶ್ರೀ ನಂಜುಂಡಶಿವಯೋಗಿಗಳು ಅಂತ್ಯ ವಾದ ಮೇಲೆ ಶ್ರೀ ಜಯ ಚಾಮರಾಜೇಂದ್ರ ಒಡೆಯರ ಅಜ್ಜಿಯ ಅಪ್ಪಣೆಯಂತೆ, ಶ್ರೀ ಚಾಮುಂಡೇಶ್ವರಿ ಬೆಟ್ಟದ ತಪ್ಪಲಲ್ಲಿ ಅಂದರೆ ರುದ್ರಭೂಮಿ ಪಕ್ಕದಲ್ಲಿ ಸಮಾಧಿಮಾಡಿ, ೨೫x೨೫ ಅಡಿ ವಿಸ್ತೀರ್ಣದಲ್ಲಿ ಗದ್ದುಗೆ ಕಟ್ಟಿಸಿ ಶಿವಲಿಂಗ ಮತ್ತು ಶ್ರೀ ನಂಜುಂಡ ಶಿವಯೋಗಿಗಳ ಭಾವಮೂರ್ತಿಯನ್ನು ಅಮೃತಶಿಲೆಯಲ್ಲಿ ಕಡೆದು ಸ್ಥಾಪಿಸಿರುತ್ತಾರೆ.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಪಟ್ಟಕ್ಕೆ ಬಂದ ಮೇಲೆ ಶ್ರೀ ಜಯ ಚಾಮರಾಜೇಂದ್ರ ಒಡೆಯರಿಗೆ ಭಕ್ತಿ ಜ್ಞಾನ ಹೆಚ್ಚಾಗಿ ಶ್ರೀ ಸ್ವಾಮಿಗಳನ್ನು ಜ್ಞಾನ ಗುರುಗಳಾಗಿ ಸ್ವೀಕರಿಸಿದರು. ಅರಮನೆಯ ಏಳಿಗೆಗ ಶ್ರೀ ಸ್ವಾಮಿಗಳ ಮಾರ್ಗದರ್ಶನ ಪಡೆದು ಅವರ ಅಪ್ಪಣೆಯಂತೆ ನಡೆಯುತ್ತಿದ್ದರು.

ಶ್ರೀ ಜಯ ಚಾಮರಾಜೇಂದ್ರ ಒಡೆಯರವರ ಅಜ್ಜಿ ರಾಜಮಾತೆ ಸ್ವರ್ಗಸ್ಥರಾದ ಮೇಲೆ ಅವರು ಜೀವಂತರಾಗಿರುವಾಗ ಹೇಳಿದ ಪ್ರಕಾರ ತಮ್ಮ ಗುರು ಶ್ರೀನಂಜುಂಡ ಶಿವಯೋಗಿಗಳ ಪಕ್ಕದಲ್ಲೇ ಸಮಾಧಿಯಾಗಬೇಕೆಂಬ ಕೋರಿಕೆ ಪ್ರಕಾರ, ಅವರಿಗೂ ಶ್ರೀ ನಂಜುಂಡ ಶಿವಯೋಗಿಗಳ ಗದ್ದುಗೆ ಪಕ್ಕದಲ್ಲಿ (೨೫x೨೫) ವಿಸ್ತೀರ್ಣದಲ್ಲಿ ಗದ್ದುಗೆ ಕಟ್ಟಿಸಿ ಅವರ ಸಮಾಧಿ ಮೇಲೆ ಒಂದು ಶಿವಲಿಂಗ ಮತ್ತು ಶ್ರೀ ಚಾಮುಂಡೇಶ್ವರಿ ಮೂರ್ತಿಯನ್ನು ಸ್ಥಾಪಿಸಿರುತ್ತಾರೆ. ಈ ಎರಡು ಗದ್ದುಗೆಗಳಿಗೂ ಬೆಳಗ್ಗೆ ಪಂಚಾಮೃತ ಮತ್ತು ರುದ್ರಾಭಿಷೇಕ ಪೂಜೆಗಳು ನಡೆಯುತ್ತದೆ. ಶ್ರೀ ಜಯಚಾಮರಾಜೇಂದ್ರ ಒಡೆಯರವರು, ಇರುವಾಗ ಪ್ರತಿನಿತ್ಯವೂ ಗದ್ದುಗೆಗೆ ಅಭಿಷೇಕ ಪೂಜೆಯನ್ನು ಮುಗಿಸಿ ದರ್ಶನವನ್ನು ಪಡೆಯುತ್ತಿದ್ದರು.

ಪ್ರತಿವರ್ಷ ಶ್ರೀ ಜಯಚಾಮರಾಜೇಂದ್ರ ಒಡೆಯರವರ ವರ್ಧಂತಿ ಮತ್ತು ನವರಾತ್ರಿಗಳಲ್ಲಿ ಶ್ರೀ ನಂಜುಂಡ ಶಿವಯೋಗಿಗಳ ಗದ್ದುಗೆ ಹಾಗೂ ಅವರ ಅಜ್ಜಿಯವರ ಗದ್ದುಗೆಯಲ್ಲಿ ಅರವಂತಿಕೆ (ನೀರು ಮಜ್ಜಿಗೆ, ಪಾನಕ, ಕೋಸಂಬರಿ, ಪುಳಿಯೋಗರೆ ಹಾಗೂ ಮೊಸರನ್ನ) ನಡೆಸುತ್ತಿದ್ದರು. ಭಕ್ತಾದಿಗಳು ಸಂತೇಷವಾಗಿ ಸ್ವೀಕರಿಸಿ ಪುನೀತರಾಗುತ್ತಿದ್ದರು.

ಶ್ರೀ ಸಿದ್ದಲಿಂಗ ಸ್ವಾಮಿಗಳ ದಿನ ನಿತ್ಯಕರ್ಮ ಬೆಳಗ್ಗೆ ಸ್ನಾನ, ಸಂಧ್ಯಾವಂದನೆ, ಶಿವಪೂಜೆ ನಂತರ ಶ್ರೀ ಸ್ವಾಮಿಗಳ ಪಾದ

ಪೂಜೆ. ಪ್ರತಿನಿತ್ಯವೂ ಬೆಳಗ್ಗೆ ಅರಮನೆಯಿಂದ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ, ಗಂಧೋದಕ ಅಕ್ಷರೋದಕ, ಪುಷ್ಪೋದಕ, ಹೂವು, ರಸಬಾಳೆಹಣ್ಣು, ತೆಂಗಿನಕಾಯಿ ಇವೆಲ್ಲಾ ಮಠಕ್ಕೆ ಬರುತಿತ್ತು. ಶ್ರೀ ಸಿದ್ದಲಿಂಗ ಸ್ವಾಮಿಗಳು ಸ್ನಾನ ಮುಗಿಸಿ ಸಂಧ್ಯಾವಂದನೆ ಶಿವಪೂಜೆ ನಂತರ ಶ್ರೀಸ್ವಾಮಿಗಳ ಪಾದ ಪೂಜೆ ಮಾಡಿ ಬೆಳಗೆ ಅವರ ಪಾದದೋಕ ಮತ್ತು ಪ್ರಸಾದವನ್ನು ಅರಮನೆಗಳ ಕಳುಹಿಸುತ್ತಿದ್ದರು. ಮಧ್ಯಾಹ್ನ ಮಹಾನೈವೇದ್ಯ ಮತ್ತು ಸಾಯಂಕಾಲ ಪಂಚಾಮೃತ ರುದ್ರಾಭಿಷೇಕ ನಂತರ ಪೂಜೆ ಮಾಡಿ, ಪ್ರಸಾದವನ್ನು ಅರಮನೆಗೆ ಕಳುಹಿಸುತ್ತಿದ್ದರು.

ಶ್ರೀ ಜಯ ಚಾಮರಾಜೇಂದ್ರ ಒಡೆಯರವರ ಸೋದರಮಾವಂದಿರಾದ ಶ್ರೀ ಮುದ್ದುರಾಜೇ ಅರಸರವರು ಶ್ರೀ ಗುರುಸಿದ್ದಲಿಂಗ ಸ್ವಾಮಿಗಳ ದರ್ಶನಕ್ಕೆ ಬರುತ್ತಿದ್ದರು ಮತ್ತು ವಿಷಯ ವಿನಿಮಯ ಮಾಡಿಕೊಂಡು ಹೋಗುತ್ತಿದ್ದರು. ಸಾಯಂಕಾಲ ೭ ಗಂಟೆಯಲ್ಲಿ ಪಂಚಾಕ್ಷರಿ ಭಜನೆಗಳು ನಡೆಯುತ್ತಿತ್ತು. ಇದಾದ ನಂತರ ಶ್ರೀ ನಾಗಲಿಂಗಸ್ವಾಮಿಗಳ ಮಹಾಮಂಗಳಾರತಿ ಆಗುತ್ತಿತ್ತು.

ರಾತ್ರಿ ಹತ್ತು ಗಂಟೆ ಸಮಯದಲ್ಲಿ ಶ್ರೀ ಸಿದ್ದಲಿಂಗ ಸ್ವಾಮಿಗಳು ಹಾಲು ಅನ್ನ ಊಟ ಮಾಡಿ ಶೇಷ ಪ್ರಸಾದವನ್ನು ಅರಮನೆಗೆ ಕಳುಹಿಸುತ್ತಿದ್ದರು. ಹೀಗಾಗಿ ಬೆಳಗ್ಗೆ ೮ ಘಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೂ ಪ್ರಸಾದಕ್ಕಾಗಿ ಅರಮನೆಯಿಂದ ಕಾರು ಬರುತ್ತಿತ್ತು. ಈ ನಿತ್ಯಕರ್ಮದಲ್ಲಿ ಬೆಳಗ್ಗೆ ಪಾದ ತೀರ್ಥಪ್ರಸಾದ ರಾತ್ರಿ ೮-೩೦ಕ್ಕೆ ಶ್ರೀಮುದ್ದು ರಾಜೇ ಅರಸರವರ ಮುಖಾಂತರ ಆಶೀರ್ವಾದ ಮತ್ತು ಪತ್ರ ಮೂಲಕ ಸಂದೇಶ, ರಾತ್ರಿ ಶೇಷ ಪ್ರಸಾರಕ್ಕಾಗಿ ದಿನದಲ್ಲಿ ಮೂರು ಸಾರಿ ಕಾರು ಬರುತ್ತಿತ್ತು. ಇದಲ್ಲದೆ ಸುಮಾರು ಬೆಳಗ್ಗೆ ೧೧-೦೦ ಗಂಟೆಯ ಸಮಯದಲ್ಲಿ ಮಹಾನೈವೆದ್ಯ ಅರಮನೆ ತಲಪುತಿತ್ತು. ರಾತ್ರಿ ಹತ್ತುಗಂಟೆಯಲ್ಲಿ ಆಶೀರ್ವಚನ ಪೂರ್ವಕ ನಡೆಯಬೇಕಾದ ಸಲಹೆಗಳನ್ನು ಪತ್ರಮುಖೇನ ರವಾನೆಯಾಗುತ್ತಿತ್ತು. ಇದು ದಿನ ನಿತ್ಯದ ಕರ್ತವ್ಯವಾಗಿತ್ತು.

ಹಿಂದಿನ ಕಾಲದಲ್ಲಿದ್ದ ಅನೇಕ ಪವಾಡ ಪುರುಷರಲ್ಲೊಬ್ಬರಾದ ಶ್ರೀ ಸಿದ್ದಪ್ಪಾಜಿಯವರ ಜೀವನ ಚರಿತ್ರೆಯನ್ನು ಶ್ರೀಗಳ ಸ್ವಹಸ್ತದಿಂದ ಬರೆದಿರುತ್ತಾರೆ. ಆ ಪ್ರತಿ ಮುದ್ರಣ ಮಾಡಲು ಪ್ರಯತ್ನಿಸಿ, ಆ ಸುವಾಕ್ಯದಿಂದ ಸಾಧ್ಯವಾಗದೆ ಹಸ್ತಪ್ರತಿಯಾಗಿ ಹಾಗೆಯೇ ಉಳಿದಿರುತ್ತದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಸಿದ್ದಪ್ಪಾಜಿಯವರು ಹುಟ್ಟಿಬೆಳೆದ, ಅವರು ಮಾಡಿದ ಪವಾಡಗಳನ್ನು ಬಹಳ ಸುಂದರವಾಗಿ ರಚಿಸಿರುತ್ತಾರೆ.

ಶ್ರೀ ಸ್ವಾಮಿಗಳು ಬಹಳಷ್ಟು ಗ್ರಂಥಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿ ವೇದ, ಉಪನಿಷತ್ತು, ಪುರಾಣಾದಿಯಾಗಿ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿ ತಾಳೆಪತ್ರಗಳೆ ಋಗ್ವೇದ, ಯಜುರ್ವೇದ, ಅಥರ್ವಣ ವೇದಗಳಾದಿ ನೂರಾರು ಪ್ರತಿಗಳಿರುತ್ತದೆ. ಇದಲ್ಲದೆ., ಋಗ್ವೇದ ಸಂಹಿತ ಎಂಬ ಬೃಹತ್ ಗ್ರಂಥವನ್ನು ಶ್ರೀ ಜಯ ಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ ಅಧ್ಯಕ್ಷತೆಯಲ್ಲಿ ಶ್ರೀಮನ್ ಮಹಾರಾಜರು ವೇ|| ಬ್ರ|| ಶ್ರೀ ವೆಂಕಟರಾವ್‌ರವರ ಮೂಲಕ ರಚಿಸಿರುತ್ತಾರೆ. ಶ್ರೀ ಸ್ವಾಮಿಗಳು ಶಿಲ್ಪಾದರ್ಶ, ಶಿಲ್ಪವಿದ್ಯಾರಹಸ್ಯೋಪನಿಷತ್, ಗುರುಗೀತ, ಶಿವಗೀತ ಇತ್ಯಾದಿ ಅಮೂಲ್ಯ ಗಂಥಗಳನ್ನು ರಚಿಸಿ, ಮಾರ್ಗದರ್ಶಕರಾಗಿರುತ್ತಾರೆ. ಪುರಾಣಗಳು, ಧರ್ಮಶಾಸ್ತ್ರಿಗಳು, ಶಿಲ್ಪ ಶಾಸ್ತ್ರಗಳೂ, ಮುಂತಾದ ಧರ್ಮ ಗ್ರಂಥಗಳನ್ನು ತಾಳೆಗರಿ ಮತ್ತು ಅಚ್ಚಿನ ಗ್ರಂಥಗಳನ್ನು ಶೇಖರಿಸಿ ಗ್ರಂಥ ಭಂಡಾರದಲ್ಲಿ ಇಟ್ಟಿರುತ್ತಾರೆ.

ಅವರ ಕಾಲದಲ್ಲಿ ಭಾರತದ ರಾಜರುಗಳ ಪೈಕಿ ಗದ್ವಾಲರ ಮಹಾರಾಜರು ಶ್ರೀ ಸ್ವಾಮಿಗಳನ್ನು ಶ್ರೀ ಚಕ್ರದ ಬಗ್ಗೆ ಮಾಹಿತಿಗಳನ್ನು ತಿಳಿಯಲು ದರ್ಶನ ಮಾಡಿದರು. ಯೋಗ ಕ್ಷೇಮದ ಬಳಿಕ ಶ್ರೀ ಚಕ್ರದ ವಿಷಯವಾಗಿ ಸವಿಸ್ತಾರವಾಗಿ ತಿಳಿಸಿದರು. ಶ್ರೀಗಳಿಗೆ ವಂದನೆಗಳನ್ನರ್ಪಿಸಿ ದಯಮಾಡಿ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿಸಿ ಕೊಡಬೇಕಾಗಿ ಪ್ರಾರ್ಥಿಸಿದರು. ಮಹಾರಾಜರು ತಮ್ಮ ಗುರುಗಳನ್ನು ತಮಲ್ಲಿಗೆ ಕಳುಹಿಸಿಕೊಡುವುದಾಗಿ ತಿಳಿಸಿ ಹೋದ ಮೇಲೆ ಕೆಲವೆದಿನಗಳಲ್ಲಿ ಅವರು ಗುರುಗಳನ್ನು ಕಳಿಹಿಸು ಕೊಟ್ಟರು. ಅವರಿಗೆ ಶ್ರೀ ಚಕ್ರದ ವಿಷಯ ತಿಳಿಸಿ ಕಾಶ್ಮೀರದಲ್ಲಿ ಮುದ್ರಿತವಾಗಿರುವ "ಶ್ರೀ ವಿದ್ಯಾರ್ಣವ ತಂತ್ರ" ಎಂಬ ಗ್ರಂಥವನ್ನು (ತಮ್ಮ ಗ್ರಂಥಾಲಯದಲ್ಲಿದ್ದ) ತೋರಿಸಿ ಪೂರ್ಣಮಾಹಿತಿ ನೀಡಿ ಗೌರವಿಸಿ ಕಳುಹಿಸಿಕೊಟ್ಟರು.

ಶ್ರೀ ಸಿದ್ದಲಿಂಗ ಸ್ವಾಮಿಗಳ ಕೀರ್ತಿಯು ದೇಶವಿದೇಶಗಳಿಗೂ ಹಬ್ಬಿತ್ತು. ವಿದೇಶಿ ಕಲಾವಿದರೊಬ್ಬರು (ಅವರ ಹೆಸರು ಮರೆತಿದೆ) ಶ್ರೀ ಸ್ವಾಮಿಗಳನ್ನು ಬೇಟಿ ಮಾಡಿ ಹಿಂದೂ ಧರ್ಮದಂತೆ ಸಾಷ್ಟಾಂಗ ನಮಸ್ಕಾರ ಮಾಡಿ ಕಲೆಯ ಬಗ್ಗೆ ವಿಷಯ ತಿಳಿದು ಶಾಸ್ತ್ರೀಯವಾದ ಮುದ್ರೆಗಳು ಭಂಗಿಗಳ, ವಿವಿಧ ನಕ್ಷೆಗಳನ್ನು ಪಡೆದು ತಮ್ಮ ವಿದೇಶಿ ವಿಳಾಸವನ್ನು ಕೊಟ್ಟು ಅಲ್ಲಿಗೆ ಬರಮಾಡಿಕೊಳ್ಳಲು ತಮ್ಮ ಸ್ವಂತ ಖರ್ಚಿನಲ್ಲಿ ಭರಿಸುವುದಾಗಿ ತಿಳಿಸಿ ಆಶೀರ್ವಾದ ಪಡೆದು ಹೋದರು.

ಕಾಮಕಾಮೇಶ್ವರ ದೇವಾಲಯ

ಶ್ರೀ ಮಠದ ಪಕ್ಕದಲ್ಲಿ ಖಾಲಿ ನಿವೇಶನವಿತ್ತು. ಆ ನಿವೇಶನದಲ್ಲಿ ಶ್ರೀಮನ್ ಮಹಾರಾಜರ ಅಪ್ಪಣೆಯಂತೆ ಶ್ರೀ ಕಾಮ ಕಾಮೇಶ್ವರ ದೇವಾಲಯವನ್ನು ವಾಸ್ತು ಶಿಲ್ಪದ ಪ್ರಕಾರ ಕಲ್ಲಿನಲ್ಲಿ ನಿರ್ಮಿಸಿದರು. ಅನೇಕ ಶಿಲ್ಪಿಗಳನ್ನು ಕರೆಸಿ ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ, ಧ್ವಜಸ್ತಂಭ, ಮಹಾದ್ವಾರ

ಇವುಗಳನ್ನು ಸುಂದರವಾಗಿ ರಚಿಸಿರುತ್ತಾರೆ. ಗರ್ಭಗುಡಿಯಲ್ಲಿ ಮಧ್ಯೆ ಶಿವಲಿಂಗವನ್ನು ಮೂರು ಅಡಿ ಎತ್ತರದಲ್ಲಿ ಶಿವಲಿಂಗ, ಶಿವಲಿಂಗದ ಹಿಂಭಾಗದಲ್ಲಿ ಸುಮಾರು ಐದು ಅಡಿ ಎತ್ತರ ಪ್ರಭಾವಳಿ ಸಹಿತ ಕಾಮೇಶ್ವರ ಕಾಮೇಶ್ವರಿ ಮೂರ್ತಿಯನ್ನು ಸೃಷ್ಟಿಸಿರುತ್ತಾರೆ. ನವರಂಗದ ನಾಲ್ಕು ಕಂಬಗಳಲ್ಲಿ ಶ್ರೀ ಲಕ್ಷ್ಮಿ ಸರಸ್ವತಿ, ಪಾರ್ವತಿ, ಮೊದಲಾದ ದೇವತಾ ಮೂರ್ತಿಗಳನ್ನು ಒಳಗೊಂಡಿದೆ. ಹಳೇಬೀಡು, ಬೇಲೂರಿನಂತೆ, ಧರ್ಮ, ಅರ್ಥ, ಕಾಮ ಮೋಕ್ಷ ಚಿಹ್ನೆಯನ್ನು ದೇವಾಲಯ ಹೊಂದಿರುತ್ತದೆ. ಮುಖ ಮಂಟಪದಲ್ಲಿ ಏಳೂವರೆ ಅಡಿ ಉದ್ದ, ಐದು ಅಡಿ ಎತ್ತರ ನಾಲ್ಕುವರೆ ಅಡಿ ದಪ್ಪದ ನಂದೀಶ್ವರನನ್ನು ಸುಂದರವಾಗಿ ಕೆತ್ತಲಾಗಿದೆ. ಮುಖಮಂಟಪದ ಮುಂದೆ ಧ್ವಜ ಸ್ತಂಭವಿರುತ್ತದೆ. ಪ್ರಾಕಾರದಲ್ಲಿ ಪಂಚವಿಂಶತಿ (೨೫) ಶಿವಲೀಲೆಗಳ ಶಿಲ್ಪವನ್ನು ಐದು ಅಡಿ ಎತ್ತರದಮೇಲೆ ರಚಿಸಿದ್ದಾರೆ. ಮಹಾದ್ವಾರದ ಮೇಲ್ಭಾಗದಲ್ಲಿ ದುರ್ಗಾ, ಗಣಪತಿ, ಕ್ಷೇತ್ರಪಾಲ, ಅಭಯಂಕರ, ವಾಸ್ತುಪುರುಷ, ಮೃತ್ಯುಂಜಯ, ಲಕ್ಷ್ಮಿ ಮೂರ್ತಿಗಳನ್ನು ಬಹುಸುಂದರವಾಗಿ ಚಿತ್ರಿಸಿರುತ್ತಾರೆ. ಮೇಲ್ಕಂಡ ಮೂರ್ತಿಗಳಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶಾಸ್ತ್ರೀಯ ಹಾಗೂ ಆತ್ಮವಿಚಾರ ತುಂಬಿಸಿದ್ದಾರೆ.

ಶ್ರೀ ಮಠದ ಮುಂದೆ ಆನೆ ಕರೋಟಿಯಲ್ಲಿ ಸಾಕಷ್ಟು ಆನೆಗಳನ್ನು ಸಾಕುತ್ತಿದ್ದರು. ಆ ಸ್ಥಳ ಅರಮನೆಗೆ ಸೇರಿದಾಗಿತ್ತು. ಶ್ರೀಮನ್ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ವೇದಾಗಮ ಶಿಲ್ಪ ಶಾಸ್ತ್ರದ ಉದ್ಧಾರಕ್ಕಾಗಿ ಸುಮಾರು ೩ ಎಕರೆಯಷ್ಟು ಸ್ಥಳವನ್ನು ಕೊಡುಗೆಯಾಗಿ ಮಠಕ್ಕೆ ಕೊಟ್ಟರು. ಆ ಸ್ಥಳದಲ್ಲಿ ವೇದಾಗಮ ಶಿಲ್ಪ ಶಾಸ್ತ್ರ ಅಧ್ಯಯನಕ್ಕಾಗಿ ಭವ್ಯವಾದ ಗುರುಕುಲಾಶ್ರಮ ಕಟ್ಟಿಸಿದರು. ಸುಮಾರು ೫೦x೫೦ ಅಡಿಯ ಚೌಕಾಕಾರದ ಮಧ್ಯೆ ಕಾರಂಜಿವೇದಿಕೆಯನ್ನು ಸುಮಾರು ೩೦ ಅಡಿ ವಿಸ್ತೀರ್ಣದಲ್ಲಿ ವೃತ್ತಾಕಾರವಾದ ವೇದಿಕೆಯನ್ನು ಸೃಷ್ಟಿಸಿ ವೃತ್ತಾಕಾರ ವೇದಿಕೆಯಲ್ಲಿ ೩ ಅಡಿ ನೀರು ನಿಲ್ಲುವಂತೆ ಮಾಡಿ, ನಾಲ್ಕು ದಿಕ್ಕಿನಲ್ಲಿ ನಾಲ್ಕು ಬಸವ (ನಂದಿ)ಯನ್ನು, ವೇದಿಕೆ ಒಳಭಾಗವನ್ನು ೩ ಹಂತವಾಗಿ ವಿಂಗಡಿಸಿ ಅಲ್ಲಿ ನೂರೆಂಟು ಶಿವಲಿಂಗಗಳನ್ನು, ಅದರ ಮೇಲಿನ ನಾಲ್ಕನೆ ಅಂತದಲ್ಲಿ ಪೂರ್ವಾದಿಯಾಗಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಬ್ರಹ್ಮನನ್ನೂ (೫) ಐದನೇ ಭಾಗದಲ್ಲಿ ಈಶಾನ ಬ್ರಹ್ಮನನ್ನು ಸೃಷ್ಟಿಸಿ ಈಶಾನ ಬ್ರಹ್ಮನ ತಲೆಯ ಮೇಲೆ ಗಂಗೆಯನ್ನು ಇಟ್ಟು ಆ ಗಂಗೆಯಿಂದ ನೀರು ಕಾರಿ ಸದ್ಯೋಜಾತಾದಿ ಬ್ರಹ್ಮರ ಮೇಲೆ ಅಭಿಷೇಕವಾಗಿ ನಂತರ ನೂರೆಂಟು ಶಿವಲಿಂಗಗಳಿಗೆ 'ಒಂದು ಲಿಂಗದಿಂದ ಮತ್ತೊಂದು ಲಿಂಗಕ್ಕೆ ಅಭಿಷೇಕವಾಗುವ ಹಾಗೆ ಮಾಡಿ ಕಾರಂಜಿಕೊಳದಲ್ಲಿ ನಿಲ್ಲುವಂತೆ ರಚಿಸಲಾಗಿದೆ.

ಶ್ರೀಮನ್ ಮಹಾರಾಜರು. ಶ್ರೀ ಗುರುಕುಲದ ಉದ್ಘಾಟನೆಯನ್ನು ಸುಮಾರು ೧೯೪೯-೫೦ರಲ್ಲಿ ಮಾಡಿರುತ್ತಾರೆ. ಆ ಸಮಯಕ್ಕೆ ಈಶಾನಮೂರ್ತಿ ಪೂರ್ತಿಯಾಗದೆ ನಾಲ್ಕು ಮೂರ್ತಿಗಳು ಉಳಿಯಿತು. ಶ್ರೀ ಗುರುಕುಲ ಪ್ರಾರಂಭವಾದ ಮೇಲೆ ವೇದಾಧ್ಯಯನಕ್ಕ ಬ್ರ|| ಶ್ರೀ ವೆಂಕಟರಾವ್‌ರವರೂ, ಸಂಸ್ಕೃತಾಭ್ಯಾಸಕ್ಕೆ ವೇ|| ಬ್ರ|| ಶ್ರೀ ಗಂಗಾಧರಾಶಾಸ್ತ್ರಿಗಳೂ; ಶಿಲ್ಪ ಮತ್ತು ವೇದಾಂತ ವಿಷಯಕ್ಕೆ ಸ್ವಯಂ ಶ್ರೀಗಳೇ ಅಧ್ಯಾಪಕರಾಗಿದ್ದರು. ಶಿಲ್ಪದ ಜೊತೆ ಜಲವರ್ಣ, ತೈಲವರ್ಣ, ರೇಖಾಚಿತ್ರಗಳು, ಮುಂತಾದವುಗಳಲ್ಲಿ ಶಿಕ್ಷಣ ಕೊಡುತ್ತಿದ್ದರು, ಶಿಲ್ಪಗಳ ಅಧ್ಯಯನಕ್ಕೆ ಬೇಕಾಗುವ ಅನುಕೂಲಗಳನ್ನು ಮಾಡಿಕೊಡುತ್ತಿದ್ದರು. ಶಿಲ್ಪ ಶಾಸ್ತ್ರಾಧ್ಯಯನಕ್ಕಾಗಿ ಶಿಲ್ಪಾದರ್ಶ ಎಂಬ ಪುಸ್ತಕವನ್ನು ಅಚ್ಚು ಹಾಕಿ ವಿದ್ಯಾರ್ಥಿಗಳಿಗೆ ಕೊಟ್ಟು ಬಾಯಿ ಪಾಠ ಮಾಡಿಸುತ್ತಿದ್ದರು.

ಅರಮನೆಯ ಒಡ್ಡೋಲಗದಲ್ಲಿ (ದರ್ಬಾರ್ ಹಾಲ್) ಮೇಲ್ಭಾವಣಿಯಲ್ಲಿ ಸುಂದರ ಮೂರ್ತಿಗಳನ್ನು ದೊಡ್ಡ ಸೈಜಿನ ೩x೩ ತಾಮ್ರದ ರೇಖಿನಲ್ಲಿ ಬಿಡಿಸಿ ಸುಂದರವಾಗಿ ತೈಲವರ್ಣ ಹಾಕಿ ಲಗತ್ತಿಸಿರುತ್ತಾರೆ. ಒಡ್ಡೋಲಗದ ಭಿತ್ತಿಗಳಿಗೆ ೫x೬°ಅಡಿ ವಿಸ್ತೀರ್ಣದ (ಕ್ಯಾನ್ವಾಸ್)ನಲ್ಲಿ ಶ್ರೀಗಳು ಶಕ್ತಿ ದೇವತೆಗಳಾದ ದುರ್ಗಾ, ಚಾಮುಂಡೇಶ್ವರಿ, ಸರಸ್ವತಿ, ಲಕ್ಷ್ಮಿ ಮನೋನ್ಮನಿ ಇತ್ಯಾದಿ ತೈಲ ಚಿತ್ರಗಳನ್ನು ಬಹು ಸುಂದರವಾಗಿ ರಚಿಸಿರುತ್ತಾರೆ. ಇವುಗಳನ್ನು ನೋಡಲು ಆನಂದವಾಗುತ್ತದೆ. ಶ್ರೀಮನ್ ಮಹಾರಾಜರ ವರ್ಧಂತಿ ಬಂತೆಂದರೆ ಆ ಸಮಯಕ್ಕೆ ಸರಿಯಾಗಿ ಹಗಲು ರಾತ್ರಿ ಕುಳಿತು ೫x೬ ಸೈಜಿನ ಕ್ಯಾನ್ವಾಸ್‌ನಲ್ಲಿ ಚಿತ್ರ ರಚಿಸಿ ಶ್ರೀ ಪ್ರಭುಗಳಿಗೆ ಆನಂದವನ್ನುಂಟು ಮಾಡುತ್ತಿದ್ದರು.

ಪ್ರಭುಗಳಿಗೆ ಸಿಂಹಾಸನದ ಮೇಲೆ ಕೂರಲು ಇಕ್ಕಟ್ಟಾದುದರಿಂದ ಅದನ್ನು ದೊಡ್ಡದು ಮಾಡಿ ಸರಿಪಡಿಸುವ ಜವಾಬ್ದಾರಿ ಶ್ರೀ ಸ್ವಾಮಿಗಳಿಗೆ ಬಿತ್ತು, ಆ ಭಾರವನ್ನು ಆಗ ಅರಮನೆ ಕಂಟ್ರಾಕ್ಟರ್ ಆದ ಅಪ್ಪಾಜಪ್ಪಾಚಾರ್ಯರಿಗೆ ವಹಿಸಿದರು. ಬಂಗಾರದಲ್ಲಿ ಛತ್ರಿಯನ್ನು ಸುಲಕ್ಷಣವಾಗಿ ವಿಶಾಲ ಮಾಡುವುದು ಸಿಂಹಾಸನವನ್ನು ಕುಳಿತುಕೊಳ್ಳಲು ಅನುಕೂಲವಾಗುವಂತೆ ವಿಸ್ತಾರ ಮಾಡಿಸಿದರು.

ಭುವನೇಶ್ವರಿ ದೇವಾಲಯ

ಅರಮನೆಯ ಮುಂಭಾಗದ ಈಶಾನ್ಯ ದಿಕ್ಕಿನಲ್ಲಿ ಶ್ರೀ ಭುವನೇಶ್ವರಿ ದೇವಾಲಯವನ್ನು ಶ್ರೀ ಸ್ವಾಮಿಗಳ ಸಲಹೆ ಮೇರೆಗೆ ಪ್ರಭುಗಳು ಕಟ್ಟಿಸಿರುತ್ತಾರೆ. ಆ ದೇವಾಲಯವು ತ್ರಿಕೂಟಾಚಲವಾಗಿರುತ್ತದೆ. ದೇವಾಲಯದ ಗರ್ಭಗುಡಿಯಲ್ಲಿ ನಾಲ್ಕುವರೆ ಅಡಿ ಎತ್ತರದಲ್ಲಿ ಶ್ರೀ ಭುವನೇಶ್ವರಿ, ನವರಂಗದ ಮಧ್ಯೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಶ್ರೀ ರಾಜರಾಜೇಶ್ವರಿ ಮತ್ತು ಚಾಮುಂಡೇಶ್ವರಿ ಮೂರ್ತಿಗಳನ್ನು ಕಪ್ಪು ಕಲ್ಲಿನಲ್ಲಿ ಕಡೆದು ಪ್ರತಿಷ್ಠೆ ಮಾಡಿರುತ್ತಾರೆ. ಸ್ಥಾಪನಾ ಮುಹೂರ್ತದಲ್ಲಿ ಚಕ್ರವಿನ್ಯಾಸ, ರಕ್ತ

ವಿನ್ಯಾಸ, ಸುವರ್ಣ ವಿನ್ಯಾಸಾದಿಗಳಿಂದ ಪ್ರತಿಷ್ಠಾಪಿಸಿ ನೇತ್ರೋನ್ಮಲನ ಮಾಡಿ ಪ್ರಾಣ ಪ್ರತಿಷ್ಠೆ ಮಾಡಿರುತ್ತಾರೆ. ಇದಲ್ಲದೆ. ೨ ಅಡಿ ಎತ್ತರದ ಚರ ಮೂರ್ತಿಯನ್ನು ಬಹು ಸುಂದರವಾಗಿ ರಚಿಸಿರುತ್ತಾರೆ.

ಶ್ರೀ ಚಾಮುಂಡೇಶ್ವರಿ ಬೆಟ್ಟದ ಮೇಲೆ ಜ್ವಾಲಾಮಾಲಿನಿ ದೇವಿ ದೇವಾಲಯ ಇರುತ್ತದೆ. ಅದು ಶಿಥಿಲವಾಗಿ ಮೂರ್ತಿಯು ಒಂದೆಡೆ ವಾಲಿರುವುದರಿಂದ ಆ ಮೂರ್ತಿಯನ್ನು ತೆಗೆಸಿ ಜೀರ್ಣೋದ್ಧಾರ ಮಾಡುವ ಕಾರ್ಯವು ಶ್ರೀ ಸ್ವಾಮಿಗಳಿಗೆ ಬಂದಿತು, ಆ ಮೂರ್ತಿಯನ್ನು ತೆಗೆಸಿ ಒಳ್ಳೆಯ ಮುಹೂರ್ತದಲ್ಲಿ ಸ್ಥಾಪಿಸಿ ಪುನಃ ಪ್ರಾಣ ಪ್ರತಿಷ್ಠೆ ಮಾಡಿರುತ್ತಾರೆ. ಇದು ೧೯೫೫ರಲ್ಲಿ ನಡೆಯಿತು.

ಶ್ರೀ ಸಿದ್ಧಲಿಂಗ ಸ್ವಾಮಿಗಳ ಕಲಾ ಕೃತಿಗಳು ದೇಶ ವಿದೇಶ ಗಳಿಗೆ ರವಾನೆಯಾಗುತ್ತಿತ್ತು. ಆ ಪೈಕಿ ಬೆಂಗಳೂರಿನಲ್ಲಿ ಕೆಲವು ಕಡೆ ಇರುತ್ತದೆ. ಬೆಂಗಳೂರುನಗರ ವಸಂತಪುರದಲ್ಲಿ ಗಣ್ಯ ವ್ಯಕ್ತಿಗಳಾದ ಯಾದಾಳಂ ಸುಬ್ಬಯ್ಯ ಶೆಟ್ಟರು ಮತ್ತು ಮಕ್ಕಳು ಶ್ರೀಮಠದ ಮುಖಾಂತರವೇ ಪ್ರತಿಷ್ಠೆ ಮಾಡಿಸಿ ಪ್ರಾಣ ಪ್ರತಿಷ್ಠೆ ಮಾಡಿಸಿರುತ್ತಾರೆ. ಹಾಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ವಡಿಗೇನಹಳ್ಳಿ (ಈಗಿನ ವಿಜಯಪುರ) ಕುಗ್ರಾಮವಾಗಿ ಹಿಂದುಳಿದುದರಿಂದ. ಅದಕ್ಕೆ ಶಂಕು ಸ್ಥಾಪನೆ ಮಾಡಿ, ವಿಜಯಪುರ ಎಂದು ನಾಮಕರಣ ಮಾಡಿರುತ್ತಾರೆ. ಇದಲ್ಲದೆ ತಮಿಳು ನಾಡಿಗೆ ಸೇರಿದೆ 'ವಾಲಾಜ' ಎಂಬಲ್ಲಿ ಶಂಕುಸ್ಥಾಪನೆ ಮಾಡಿರುತ್ತಾರೆ.

ಒಂದು ವಿಚಿತ್ರ ಸಂಗತಿ ಎಂದರೆ, ಹಾಸನ ಜಿಲ್ಲೆ ಹಳ್ಳಿ ಯೊಂದರಲ್ಲಿ ದೇವಿ ವಿಗ್ರಹ ಮಾಡಿ ಕೊಡಲು ಒಬ್ಬ ವೈಶ್ಯರು ಹೇಳಿದರು, ದೇವಿ ವಿಗ್ರಹವನ್ನು ಧ್ಯಾನ ಶ್ಲೋಕದಲ್ಲಿ ತಯಾರಿಸಲಾಯಿತು. ಆ ವೈಶ್ಯರು ಮೂರ್ತಿಯನ್ನು ನೋಡಿ ಸಂತೋಷಪಟ್ಟು ಹೋದರು. ಪುನಃ ಒಬ್ಬ ಬ್ರಾಹ್ಮಣನ ಜೊತೆ ಬಂದು ಬ್ರಾಹ್ಮಣನ ಹೇಳಿಕೆಯಂತೆ ಇದು ದೇವಿ ವಿಗ್ರಹ ಆಗುವುದಿಲ್ಲ. ಈ ಮೂರ್ತಿಗೆ ಅಮೃತ ಕಲಶ ಕೂಡದು ಎಂದು ವೈಶ್ಯರಿಗೆ ಹೇಳಿದ ಮೇಲೆ ಹಿಂದು ಮುಂದು ನೋಡದ ಆ ವೈಶ್ಯರು, ಅಮೃತ ಕಲಶವನ್ನು ತೆಗೆದು ಹಾಕಿ ಎಂದು ಪಟ್ಟು ಹಿಡಿದು ಕೂತರು, ಎಷ್ಟು ಹೇಳಿದರು ಆ ವೈಶ್ಯ ಕೇಳಲೆ ಇಲ್ಲ. ಆ ವೈಶ್ಯರ ಉಪಟಳ ತಾಳಲಾರದೆ ಧ್ಯಾನ ಶ್ಲೋಕಕ್ಕೆ ಕಂದುಬಾರದಂತೆ ಬೇರೆ ವರ್ಗಾಯಿಸಿ ಮಾಡಿಕೊಟ್ಟರು. ದೇವಿ ವಿಗ್ರಹ ಪ್ರತಿಷ್ಠೆ ಸಮಯದಲ್ಲಿ ಶ್ರೀ ಸ್ವಾಮಿಗಳಿಗೂ ಆಹ್ವಾನ ಬಂದದುರಿಂದ ಶ್ರೀಸ್ವಾಮಿಗಳೂ ಆ ಪ್ರತಿಷ್ಠೆ ಸಮಯಕ್ಕೆ ಹೋದರು. ಅಲ್ಲಿ ವಯೋವೃದ್ದರು ಹಾಗೂ ಜ್ಞಾನ ವೃದ್ಧರೂ ಆದ ಬ್ರಾಹ್ಮಣ ಮೂರ್ತಿಯನ್ನು ಆಮೂಲಾಗ್ರವಾಗಿ ನೋಡಿ, ಈ ಮೂರ್ತಿದೇವಿ ವಿಗ್ರಹ ಆಗುದಿಲ್ಲವಲ್ಲ, ಯಾವ ಶಿಲ್ಪಿಗಳು ಇದನ್ನು ಕಡೆದರು. ಅವರಿಗೆ ಜ್ಞಾನ ಬೇಡವೆ ಎಂದು ಹೇಳಿದ ಮೇಲೆ ಸ್ವಾಮಿಗಳು ಆ ವೈಶ್ಯರನ್ನು ಕೇಳಿರಿ, ನಾವು ಎಷ್ಟು ಹೇಳಿದರು ಕೇಳದೆ ಬಲವಂತವಾಗಿ ತೆಗಿಸಿಬಿಟ್ಟರು. ಆದರೂ ದೇವಿಯ ಮೂರ್ತಿಯ ಬಗ್ಗೆ ಅನುಮಾನ ಬೇಡಿ. ವೈಶ್ಯರ ಸಮಾಧಾನಕ್ಕೆ ತಕ್ಕಂತೆ ಮಾಡಿ. ಅಮೃತಕಲಶವನ್ನು ಬೇರೆ ಕಡೆ ಇಟ್ಟಿರುವ ವಿಷಯವನ್ನು ತಿಳಿಸಿ, ತೋರಿಸಿದ ನಂತರ ಆವೃದ್ಧ ಬ್ರಾಹ್ಮಣರು ಸಂತೋಷಪಟ್ಟರು.

ಪ್ರತಿವರ್ಷ ಪುಷ್ಯ ಮಾಸ ಪೂರ್ಣಿಮಾದಿನ ಶ್ರೀ ನಂಜುಂಡ ಶಿವಯೋಗಿಗಳ ಆರಾಧನೆ ನಡೆಸುತ್ತಿದ್ದರು. ಪುಷ್ಯ ಪೂರ್ಣಿಮ ಹಿಂದಿನ ದಿನ ಸಿದ್ಧಪ್ಪಾಜಿಯವರ ಗದ್ದುಗೆಗೆ ಪೂಜೆ ಸಲ್ಲಿಸಿ ಪೂರ್ಣಿಮೆ ದಿನ ನಂಜುಂಡ ಶಿವಯೋಗಿಗಳ ಗದ್ದುಗೆಯಲ್ಲಿ ವಿಶೇಷ ಪೂಜೆ? ಅಂದು ಬೆಳಗ್ಗೆ ಪಂಚಾಮೃತ ಮತ್ತು ರುದ್ರಾಭಿಷೇಕ ಮಾಡಿ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಸುತ್ತಿದ್ದರು. ಅನ್ನಪೂರ್ಣೇಶ್ವರಿಯನ್ನು ಪೂಜಿಸಿ ನಂತರ ಶ್ರೀ ವಿಶ್ವಕರ್ಮ ಬ್ರಹ್ಮ ದಂಡವನ್ನು ಅನ್ನದ ರಾಶಿ ಮೇಲೆ ನಾಟುತಿದ್ದರು ಮತ್ತು ಊಟ ಬಡಿಸಲು ಅಪ್ಪಣೆ ಮಾಡುತ್ತಿದ್ದರು. ಸಾವಿರಾರು ಜನರು ಸಂತೋಷವಾಗಿ ಊಟಮಾಡುತ್ತಿದ್ದರು, ಅನ್ನ ರಾಶಿಮಾತ್ರ ಕಾಲಿಯಾಗುತ್ತಿರಲಿಲ್ಲ. ನಂಜನಗೂಡು, ಚಾಮರಾಜ ನಗರ, ಗುಂಡ್ಲುಪೇಟೆ, ಕೊಳ್ಳೆಗಾಲ ಇತ್ಯಾದಿ ಊರುಗಳಿಂದ ಸಹಸ್ರ ಸಹಸ್ರ ಜನರು ಭಕ್ತರು ಬಂದು ಪ್ರಸಾದ ಸ್ವೀಕರಿಸಿ ಆಶೀರ್ವಾದ ಪಡೆದು ಹೋಗುತ್ತಿದ್ದರು. ಅದೇ ಸಮಯದಲ್ಲಿ ಅರಮನೆಯಿಂದ ಸಕಲ ಮರ್ಯಾದೆಯೊಡನೆ ಶ್ರೀ ಸ್ವಾಮಿಗಳನ್ನು ಮಾನದಲ್ಲಿ ಕೂಡಿಸಿ ನಂಜುಂಡ ಶಿವಯೋಗಿಗಳ ಭಾವ ಚಿತ್ರವನ್ನು ರಥದ ಮೇಲೆ ಕೂರಿಸಿ ಪ್ರಮುಖ ರಾಜಬೀದಿಗಳಲ್ಲಿ ಸಕಲ ಮರ್ಯಾದೆಯೊಡನೆ ಉತ್ಸವ ನಡೆಯುತ್ತಿತ್ತು.

ರಾಜ್ಯದ ಅಭಿವೃದ್ಧಿ ಮತ್ತು ಶ್ರೀಮನ್‌ಮಹಾರಾಜರ ಶ್ರೇಯಸ್ಸಿಗಾಗಿ ಮಹಾ ಯಾಗವನ್ನು ಬಹಳ ಶ್ರದ್ಧಾಭಕ್ತಿಯಿಂದ ನಡೆಸುತ್ತಿದ್ದರು. ಅರಮನೆಯ ದೇವರ ಮನೆಯಾದ ಶ್ರೀನಗರ ಮಂಟಪದ ಎದುರು ನಡೆಸುತ್ತಿದ್ದರು. ಒಮ್ಮೆ ಗಾಯತ್ರಿ ಹೋಮವನ್ನು ಮತ್ತೊಂದು ಸಾರಿ ಕೋಟಿ ಪಂಚಾಕ್ಷರ ಯಾಗವನ್ನು ನಡೆಸಿದರು. ಅದಕ್ಕೆ ಸಾಲಾಶ ಕುಸುವನ್ನೆ ಬಹುವಾಗಿ ಕರಿಸಿದ್ದರ ಈ ಯಾಗ (೪೮) ನಲವತ್ತೆಂಟು ದಿನಗಳವರಿಗೂ ನಡೆಯಿತು. ಆ ಯಾಗದ ಆಚಾರ್ಯರನ್ನು ಶ್ರೀ ಸಿದ್ಧಲಿಂಗ ಸ್ವಾಮಿಗೂ ಋತ್ವಿಕರಾಗಿ ಅಸ್ವಾಜಪ್ಪಸ್ವಾಮಿಗಳೂ, ನಾಗಲಿಂಗ ಸ್ವಾಮಿಗಳು (ಅಯ್ಯನೂರು) ನಾಗೇಂದ್ರ ಸ್ಥಪತಿಗಳೂ, ನಾಗಲಿಂಗ ಮಿ. ಗಳು. ಮಹಾದೇವ ಸ್ವಾಮಿಗಳೂ ಮತ್ತು ಪುಟ್ಟಣ್ಣಾಚಾರಿಯು, ಋತ್ವಿಕರಾಗಿ ಭಾಗವಹಿಸಿದ್ದರು.

ಮಂಡ್ಯ, ಮದ್ದೂರು, ಮೈಸೂರು ಸುತ್ತಮುತ್ತಲ ಜನಗಳು ಬಹಳವಾಗಿ ಕಷ್ಟಪಡುತ್ತಿದ್ದರು. ಕಷ್ಟ ಹೇಗೆಂದರೆ ದನಗಳು ದೊಡ್ಡಿಯಲ್ಲಿ ಇದ್ದಕ್ಕಿದ್ದಂತೆ ಬೆದರುವುದೂ, ಮನೆಯಲ್ಲಿ

ಕೇಳಲಾರದಷ್ಟು ಕಷ್ಟ ಅನುಭವಿಸುತ್ತಿದ್ದವು ಮನೆಯಲ್ಲಿ ರಾತ್ರಿ ಹೊತ್ತು ಪಾತ್ರೆಗಳು ಚಲ್ಲಾಪಿಲ್ಲಿಯಾಗುವುದು, ಹಸುಗಳು ಸರಿಯಾಗಿ ಹಾಲು ಕೊಡದಿರುವುದೂ ಇತ್ಯಾದಿ, ಉಪದ್ರವ್ಯದಿಂದ ಮುಕ್ತರಾಗಲು ಶ್ರೀ ಸ್ವಾಮಿಗಳನ್ನು ಕಂಡು ಪರಿಹಾರ ಪಡೆಯುತ್ತಿದ್ದರು. ಇದಕ್ಕೆ ಪರಿಹಾರ ಯಂತ್ರ ಬರೆದು ವಿಭೂತಿಯನು ಮಂತ್ರಿಸಿ ಕೊಡುತ್ತಿದ್ದರು ಇದರಿಂದ ಅವರಿಗೆ ಉಪಟಳ ಕಡಿಮೆಯಾಗಿ ಅನುಕೂಲ ಕಾಣುತ್ತಿತ್ತು.

ಪವಾಡ ಪುರುಷ

೧೯೪೪ರ ಸಮಯದಲ್ಲಿ ಖ್ಯಾತ ನಾಟಕಕಾರರಾದ ಸುಬ್ಬಯ್ಯನಾಯ್ಡುರವರು ಮೈಸೂರಲ್ಲಿ ಶಿವರಾಂಪೇಟೆಯಲ್ಲಿ ರತ್ನಾವಳಿ ಥಿಯೇಟರ್‌ನಲ್ಲಿ ಭಕ್ತ ಅಂಬರೀಷ ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶನ ಮಾಡಲು, ಕರಪತ್ರ ಭಿತ್ತಿ ಪತ್ರಗಳನ್ನು ಹಂಚಿದ್ದರು. ಆ ಕಂಪನಿಯಲ್ಲಿ ಲಕ್ಷ್ಮಿದೇವಿಯವರೇ ಮುಂತಾದ ನುರಿತ ಕಲಾವಿದರಿದ್ದರು. ಶ್ರೀ ಸುಬ್ಬಯ್ಯ ನಾಯ್ಡುರವರಿಗೆ ನಡೆಯಲಾರದಷ್ಟು ಕಾಲುಗಳ ಬೇನೆಗೆ ಸಿಕ್ಕಿ ನಿಲ್ಲಲು ಕೂರಲು ಆಗದಷ್ಟು ಬೇನೆಗೆ ತುತ್ತಾದರು. ಕಾಲುಗಳು ಬಾತು ನಡೆಯಲಾರದಷ್ಟು ಹಿಂಸೆ ಪಡುತ್ತಿದ್ದರು. ವೈದ್ಯರಿಗೆ ತೋರಿಸಲು ಏನು ಖಾಯಿಲೆ ಇಲ್ಲ ವೆಂದು ಹೇಳಿದರು ಮೈಸೂರಿನಲ್ಲಿ ಇದ್ದ ಎಲ್ಲಾ ಖ್ಯಾತ ವೈದ್ಯರೆಲ್ಲಾ ಶ್ರೀ ನಾಯ್ಡುರವರನ್ನು ನೋಡಿ ಏನು ಖಾಯಿಲೆ ಇಲ್ಲವೆಂದು ತಿರ್ಮಾನಿಸಿದರು. ಮೈಸೂರಿನಲ್ಲಿ ಮಠದ ಸಮೀಪದಲ್ಲೆ ಇದ್ದ (ಲಾರಿ ಕಾಳಪ್ಪ) ನಂಜುಂಡಸ್ವಾಮಿ ಎಂಬುವರು (ಹೆಸರು ಗೊತ್ತಿಲ್ಲ) ಅವರು ನಾಟಕ ಕಂಪನಿಗೆ ಸೇರಿದವರೆ. ಎಲ್ಲ ಮುಗಿದಿದೆ ಕೊನೆಯಲ್ಲಿ ಶ್ರೀ ಸಿದ್ದಲಿಂಗ ಸ್ವಾಮಿಗಳನ್ನು ದರ್ಶನ ಮಾಡಿ, ಅವರ ಸಲಹೆಯನ್ನು ಪಡೆಯೋಣ ಎಂದ ಮೇಲೆ, ಲಕ್ಷ್ಮಿ ದೇವಿಯವರು, ಬೆಳಗ್ಗೆ ಹತ್ತು ಗಂಟೆಯ ಸಮಯದಲ್ಲಿ ಶ್ರೀ ಮಠಕ್ಕೆ ಬಂದು, ಶ್ರೀಮತಿ ವೀರಮ್ಮನವರನ್ನು ಭೇಟಿ ಮಾಡಿ ಇರುವ ವಿಷಯವನ್ನು ಕೂಲಂಕಷವಾಗಿ ತಿಳಿಸಿದರು. ಮಾತೃಶ್ರೀಯವರು ಶ್ರೀಗಳನ್ನು ಕಂಡು ಲಕ್ಷ್ಮಿದೇವಿಯವರ ಬಂದು ಹೇಳಿದ ವಿಷಯವನ್ನು ತಿಳಿಸಿದ ಮೇಲೆ, ಲಕ್ಷ್ಮಿದೇವಿಯವರಿಗೆ ತಿಳಿಸು, ರಾತ್ರಿ ೯ ಗಂಟೆಯ ಮೇಲೆ ಸುಬ್ಬಯ್ಯನಾಯ್ಡುರವರನ್ನು ಕರೆದು ಕೊಂಡು ಬರುವಂತೆ, ತಿಳಿಸು ಎದುರು. ಅದರಂತೆ, ಮರುದಿನ ರಾತ್ರಿ ೯ ಗಂಟೆಯಲ್ಲಿ ಸುಬ್ಬಯ್ಯ ನಾಯಿಡುರವರು ಸ್ಥೂಲ ಕಾಯರಾದುದರಿಂದ ಅವರಿಗಿಂತ ಬಲವಾದ ಇಬ್ಬರು ಕೈ ಎತ್ತಿಕೊಂಡು ಬಂದರು. ಶ್ರೀ ನಾಯಿಡುರವರು ಬಂದಾಗ ಶ್ರೀಮಾನ್ ಮಹಾರಾಜರ ಸೋದರಮಾವ ಶ್ರೀ ಮುದ್ದೇರಾಜು ಅರಸು ಶ್ರೀಗಳ ಜೊತೆ ಸಂಭಾಷಣೆ ಮಾಡುತ್ತಿದ್ದರು. ಅವರು ಹೋಗುವವರೆಗೂ ನಾಯಿಡುರವರು ಹೊರಗಡೆ ಕುಳಿತಿದ್ದು. ಅವರು ಹೋದ ಮೇಲೆ. ಇಬ್ಬರು ನಾಯಿಡುರವರನ್ನು ಎತ್ತಿಕೊಂಡು ಶ್ರೀಗಳ ಮುಂದೆ ಕೂರಿಸಿದರು. ರಾತ್ರಿ ಹತ್ತುಗಂಟೆಯವರೆಗೂ ಸಂಭಾಷಣೆ ಮಾಡಿ, ಶ್ರೀ ನಾಯಿಡುರವರೆಗೆ ಧೈರ್ಯಹೇಳಿ. ಸ್ವಲ್ಪ ಭಸ್ಮವನ್ನು ಅಭಿಮಂತ್ರಿಸಿ ನಾಯಿಡುರವರಿಗೆ ಕೊಟ್ಟು ಸ್ವಲ್ಪ ಬಾಯಿ ಹಾಗು ಊತವಿರುವ ಸ್ಥಳದಲ್ಲಿ ಉಜ್ಜಲು ತಿಳಿಸಿದರು.

ಸಾಷ್ಟಾಂಗ ನಮಸ್ಕಾರ ಮಾಡಿ ಶ್ರೀ ಸುಬ್ಬಯ್ಯ ನಾಯಿಡುವರು ಶ್ರೀಗಳನ್ನು ಕಂಡು ಹೊಸ ಚೇತನ ಬಂದಂತೆ ತಮ್ಮ ದರ್ಶನದಿಂದ ನನಗಿದ್ದ ಬೇನೆ ಕಡಿಮೆಯಾಯಿತೆಂದು, ಹೊಗಳಿ ಹೊರಟು ಹೋದರು. ಮರುದಿನ ಕೈಯಲ್ಲಿ (ಯಂತ್ರ) ಬರೆದು ಜೊತೆಯಲ್ಲಿ ಭಸ್ಮವನ್ನು ಅಭಿಮಂತ್ರಿಸಿ ನನ್ನ ಕೈ (ಪುಟ್ಟಣ್ಣಾಚಾರ್) ಕೊಟ್ಟು ಈ ಯಂತ್ರವನ್ನು ನಾಯಿಡುರವರ ಮಲಗುವ ಮಂಚಕ್ಕೆ ಕಟ್ಟಿ ಭಸ್ಮವನ್ನು ಬಾಯಿಗೆ ಮತ್ತು ನೋವಿರುವ ಸ್ಥಳಕ್ಕೆ ಹಚ್ಚಲು ಹೇಳಿದರು, ಅದರಂತೆ ಶ್ರೀ ಸುಬ್ಬಯ್ಯ ನಾಯಿಡುರವರು ನಡೆದರು. ಕೆಲ ದಿವಸ ಕಳೆದು ಮೇಲೆ ಶ್ರೀ ನಾಯಿಡುರವರು ಭಿತ್ತಿ ಪತ್ರ ಹಾಕಿದ ಸಮಯಕ್ಕೆ ಸರಿಯಾಗಿ ಗುಣವಾಗಿ, ಆ ಸಮಯದಲ್ಲಿ ಅವರ ನಿಗದಿ ಮಾಡಿದಂತೆ ನಾಟಕ ಪ್ರಾರಂಭಿಸಿದರು. ನನಗೂ ಆಹ್ವಾನ ಕೊಟ್ಟ ಪ್ರಕಾರ ಆ ದಿನ ಹೋಗಿ ನೊಡಲು ಥಿಯೇಟರು ಕಿತ್ತು ಹೋಗುವಷ್ಟು ಜನ ಸೇರಿದರು. ಸುಬ್ಬಯ ನಾಯಿಡುರವರು ಭಕ್ತ ಅಂಬರೀಷ ಪಾತ್ರಧಾರಿಯಾಗಿ ಬಹಳ ಚೆನ್ನಾಗಿ ಅಭಿನಯಿಸಿದರು. ಭಕ್ತ ಅಂಬರೀಷ ನಾಟಕವಲ್ಲದೆ ವಸಂತ ಸೇನ, ಸದಾರಮೆ ಮುಂತಾದ ನಾಟಕಗಳನ್ನು ಪ್ರದರ್ಶನಮಾಡಿ ಸಾಕಷ್ಟು ಹಣ ಗಳಿಸಿದರು. ಇವರ ಅಭ್ಯುದಯವನ್ನು ನೋಡಿ ಬಹಳ ಜನ ಸ್ವಾಮಿಗಳನ್ನು ನೋಡಲು ಬರುತ್ತಿದ್ದರು.

ಮಂಗಳೂರು ಶ್ರೀ ಕಾಳಿಕಾಂಬ ದೇವಾಲಯದ ಅಧ್ಯಕ್ಷ ಶ್ರೀ ಬಾಬು ರಾಯಾಚಾರ್ಯರ ಕೋರಿಕೆಯಂತೆ ಶ್ರೀ ಕಾಳಿಕಾ ದೇವಾಲಯ ಪಕ್ಕದಲ್ಲಿ ಶ್ರೀ ನಾಗಲಿಂಗ ಸ್ವಾಮಿಗಳ ಮಂದಿರ ಕಟ್ಟಿ ಆ ಮಂದಿರದಲ್ಲಿ ಶ್ರೀ ನಾಗಲಿಂಗ ಸ್ವಾಮಿಗಳ ಮೂರ್ತಿಯನ್ನು ರಚಿಸಿ, ಶುಭ ಮುಹೂರ್ತದಲ್ಲಿ ಪ್ರತಿಷ್ಠೆ ಮಾಡಿರುತ್ತಾರೆ. ದೇಶ ವಿದೇಶಗಳಿಂದ ರತ್ನಪಡಿ ವ್ಯಾಪರಸ್ತರು, ಶ್ರೀಗಳನ್ನು ಸಂದರ್ಶಿಸಿ, ಬೆಲೆ ಕಟ್ಟಿಸಿಕೊಂಡು ಹೋಗಲು ಬರುತ್ತಿದ್ದರು. ಅಮೂಲ್ಯ ರತ್ನಗಳನ್ನು ಬೆಲೆ ಮಾಡಿ, ಅರಮನೆಗೆ ಕೊಡಿಸುತ್ತಿದ್ದರು. ಗಂಜಾಂ ಬಸಪ್ಪವೆಂಬರು ಒಬ್ಬರಾಗಿದ್ದರು. ರತ್ನವನ್ನು ಕೊಡಿಸುವುದು ಬೆಲೆ ಕಟ್ಟಿಸಲು, ಬಹುಜನರು ಶ್ರೀಗಳನ್ನು ಸಂದರ್ಶಿಸಲು ಬರುತ್ತಿದ್ದರು ಮತ್ತು ರತ್ನ ಪರೀಕ್ಷೆಯ ವಿಷಯವಾಗಿ ಒಂದು ಪುಸ್ತಕವನ್ನು ಬರೆದಿರುತ್ತಾರೆ. ಅದು ಅಚ್ಚಾದಂತೆ ಕಾಣಲಿಲ್ಲ.

ಮುಂಬಾಯಿನ ಶ್ರೀಮಂತರೊಬ್ಬರು ಶ್ರೀಗಳ ಪಾದಪೂಜೆಯನ್ನು ಮುಂಬಾಯಿನ ಅವರ ಮನೆಯಲ್ಲಿ ಇಟ್ಟಿಕೊಂಡಿದುದರಿಂದ ಶ್ರೀಗಳು ಮುಂಬಾಯಿಗೆ ಹೋಗ ಬೇಕಾಯಿತು. ಮುಂಬಾಯಿ

ಯಲ್ಲಿ ಅದ್ದೂರಿಯಾಗಿ ಪೂಜೆ ಮಾಡಿ ಸನ್ಮಾನಿಸಿದರು. ಮುಂಬಾಯಿನ ಪ್ರವಾಸ ಮುಗಿಸಿಕೊಂಡು ಬಂದ ಮೇಲೆ ಶ್ರೀಗಳು ಅನಾರೋಗ್ಯದಿಂದ ಹಾಸಿಗೆ ಹಿಡಿದರು. ಏಳಲು ಆಗದೆ ಬಹಳ ಹಿಂಸೆ ಅನುಭವಿಸಬೇಕಾಯಿತು. ಶರೀರದ ಬಾದೆಯನ್ನು ತಡೆಯಲಾರದೆ ಶ್ವಾಸ ಬಂದನ ಮಾಡಿದರು. ಇದನ್ನರಿತ ಮಾತೃಶ್ರೀರವರು ಹಾಗೆ ಶ್ವಾಸ ಬಂದನ ಮೂಡಬೇಡಿ, ನಮ್ಮನ್ನೆಲ್ಲಾ ಅನಾಥರಾಗಿ ಮಾಡಬೇಡಿ ಎಂದು ಬಹು ವಿಧವಾಗಿ ಬೇಡಿಕೊಂಡರೂ ನಾಗಲಿಂಗ ಸ್ವಾಮಿಗಳು, ಇನ್ನೇನು ಎಲ್ಲಾ ಮುಗಿಯಿತೆಂದು ಕರ್ಪೂರ ಆರತಿ ಮಾಡಿದರು. ಮಾತೃಶ್ರೀಯವರ ಅಪ್ಪಣೆಯಂತೆ ನಾನು (ಪುಣ್ಯಾಚಾರ ಮತ್ತು ನಾಗಲಿಂಗಪ್ಪ ಇಬ್ಬರು) ಶ್ರೀ ಸ್ವಾಮಿಗಳ ಶಿಷ್ಯರಾದ ಡಾ|| ವಿ. ಆರ್. ನಾಯಿಡುರವರ ಮನೆಗೆ ಓಡಿದೆವು. ಶ್ರೀ ವಿ. ಆರ್. ನಾಯಿಡುರವರು ಕೆ. ಆರ್. ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಾದ್ದರು. ಅವರ ಮನೆಗೆ ಹೋದರೆ, ಮುಂಬಾಗಲಿಗೆ ಹೋಗುವಷ್ಟರಲ್ಲಿ ಒಂದು ದೊಡ್ಡನಾಯಿ ಬಂದು ನಮ್ಮನ್ನು ಬಿಡಲೆ ಇಲ್ಲ. ಕೊನೆಗೆ ಧೈರ್ಯ ಮಾಡಿ ನಾನು ಒಳ ನುಗ್ಗಿದೆ. ಮನೆಗೂ ಮುಂಬಾಲಿಗೂ ಸುಮಾರು ೮೦ ಅಡಿಗಳಷ್ಟಿತ್ತು ಸ್ವಲ್ಪದೂರ ಬರುವಷ್ಟರಲ್ಲಿ ನಾಯಿ ಬೊಗಳಿದ ಶಬ್ದ ಹೆಚ್ಚಾದ ಮೇಲೆ ಒಳಗಡೆ ಬಂದು ನಾಯಿಯನ್ನು ಕರೆದುಕೊಂಡು ಹೋದರು. ಡಾ|| ವಿ. ಆರ್. ನಾಯ್ಡು ರವರು ಮನೆಯಲ್ಲಿ ಇದ್ದರು. ಡಾಕ್ಟರಲ್ಲಿ ಬಂದ ವಿಷಯವನ್ನು ತಿಳಿಸಿದೆವು. ತಕ್ಷಣವೆ, ಅವರ ಕಾರನ್ನು ತೆಗೆದು ಕ್ಷಣಾರ್ಧದಲ್ಲಿ ಮಠ ಸೇರಿದೆವು. ಎಲ್ಲರು ದುಃಖದಲ್ಲಿದ್ದನ್ನು ನೋಡಿ ಡಾಕ್ಟರ್ ಸಮಾಧಾನಪಡಿಸಿ ಶ್ರೀಗಳ ನಾಡಿ ಪರಿಕ್ಷಿಸಿದ ನಂತರ. ಡಾಕ್ಟರ್ ಹೇಳಿದರು, ಶ್ರೀಗಳು ಶ್ವಾಸಬಂದನ ಮಾಡಿ ಸಮಾಧಿಯಲ್ಲಿರುತ್ತಾರೆ, ನೀವೇಕೆ ದುಃಖ ಪಡುತ್ತೀರೆಂದು ತಿಳಿಸಿದ ಮೇಲೆ ಸಮಾಧಾನವಾಯಿತು ಕೆಲವು ಗಂಟೆಗಳ ನಂತರ ಬಹಿರ್ಮುಖರಾದರು.

ಪಂಚಾಚಾರ್ಯ ಪ್ರೆಸ್ ಮಾಲೀಕರಾದ ಕಾಶೀನಾಥ ಸ್ವಾಮಿಗಳು ಒಂದು ವಾರದಲ್ಲಿ ಎರಡು ಮೂರು ಸಾರಿಯಾದರು ಮಠಕ್ಕೆ ಬರುತ್ತಿದ್ದರು. ಪಾರಮಾರ್ಥ ವಿಚಾರವಾಗಿ ಚರ್ಚೆ ಮಾಡುತ್ತಿದ್ದರು. ಕಾಶೀನಾಥ ಶಾಸ್ತ್ರಿಗಳು ಅನೇಕ ಧರ್ಮಗ್ರಂಥಗಳನ್ನು ರಚಿಸಿದ್ದರು. ರಾತ್ರಿ ೧೨ ಗಂಟೆಯ ಮೇಲೆ ಜಟಕಾ ಗಾಡಿತರಿಸಿ ಕೊಂಡು ಹೋಗುತ್ತಿದ್ದರು. ಕಾಶೀನಾಥ ಸ್ವಾಮಿಗಳ ಅಂತ್ಯವಾದ ಮೇಲೆ ಶ್ರೀ ನಂಜುಂಡ ಶಿವಯೋಗಿಗಳ ಗದ್ದುಗೆ ಹಿಂಬಾಗದಲ್ಲಿ ಸಮಾಧಿ ಮಾಡಿರುತ್ತಾರೆ.

ಶ್ರೀಮನ್‌ಮಹಾರಾಜರು ವರ್ಧಂತಿ ಮತ್ತು ನವರಾತ್ರಿ ಉತ್ಸವಗಳಲ್ಲಿ ನವದುರ್ಗಾದೇವಿ ಪೂಜೆಯನ್ನು ವಿಶೇಷವಾಗಿ ನಡೆಸುತ್ತಿದ್ದರು. ವರ್ಷ ಒಂದು ಸಾರಿ ಮತ್ತು ವಿಶೇಷ ಪೂಜೆ ಯಾದಾಗ ಶ್ರೀ ನವದುರ್ಗಾದೇವಿಯನ್ನು ಶ್ರೀನಗರ ಮಂಟಪದಲ್ಲಿ ಮಧ್ಯೆ ರತ್ನಾಖಚಿತ ಪೀಠದಲ್ಲಿ ಕೂರಿಸಿ ತಾವೂ ಬೆಳ್ಳಿಯ ಪೀಠದ ಮೇಲೆ ಕುಳಿತು ಪೂಜೆ ಮಾಡುತ್ತಿದ್ದರು. ಆಗ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಧಾರ್ಮಿಕರು ಇರುತ್ತಿದ್ದರು.

ಶ್ರೀ ಸಿದ್ದಲಿಂಗ ಸ್ವಾಮಿಗಳು ಅಂತ್ಯಕಾಲಕ್ಕೆ ಆರು ತಿಂಗಳು ಮುಂಚೆಯೆ, ತಮ್ಮ ಸಮಾಧಿಯನ್ನು ಗುರುಕುಲದ ಆವರಣದಲ್ಲೆ ಕಟ್ಟಿಸಿ ಅಂತ್ಯವಾದ ಮೇಲೆ, ಆ ಸಮಾಧಿಯಲ್ಲಿ ಸಮಾಧಿಸ್ಥಿತ ರಾದರು. ಶ್ರೀ ಸಮಾಧಿ ಸ್ಥಿತರಾದ ಮೇಲೆ ಕರೋಟಿಯಲ್ಲಿದ್ದ ಒಂದು ಆನೆ, ಸಮಾಧಿ ಸ್ಥಳಕ್ಕೆ ಬಂದು ಘೀಂಕರಿಸಿ ಪ್ರದಕ್ಷಿಣೆ ಮಾಡಿ ಗೌರವ ಕೋರಿ ಹೋಯಿತು. ಆನೆ ಬರುವುದನ್ನು ನೋಡಿದ ಜನರು ಬಹಳ ಭಯಭೀತರಾಗಿದ್ದರು. ಆದರೆ ಆ ಆನೆ ಯಾರಿಗೂ. ಯಾವ ವಿಧದಲ್ಲೂ ತೊಂದರೆ ಕೊಡದೆ ಸ್ವಕ್ಷೇತ್ರಕ್ಕೆ ಹೋಯಿತು.

ಶ್ರೀಗಳು ಏಳಲಾರದಷ್ಟು ನಿಶ್ಶಕ್ತರಾಗಿ ಹಾಸಿಗೆ ಹಿಡಿದ ಮೇಲೆ ಆಗಾಗ ಶ್ರೀಮನ್ ಮಹಾರಾಜರು ಬಂದು ನೋಡಿ ಧೈರ್ಯ ಹೇಳಿ ಹೋಗುತ್ತಿದ್ದರು. ಪ್ರಭುಗಳು ಬಂದಾಗಲೆಲ್ಲ ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಸಂತೈಸುತ್ತಿದ್ದರು.

❑



ರು ಶಿಲ್ಪ - ದಕ್ಷಿಣಾಮೂರ್ತಿ, ಸ್ಥಳ - ಶಂಬುಲಿಂಗನ ಬೆಟ್ಟ



ಶಂಬುಲಿಂಗನ ಬೆಟ್ಟದಲ್ಲಿರುವ ಶಿಲ್ಪ



ವಿಶ್ವಕರ್ಮಾ



ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಜಯಚಾಮರಾಜ ಒಡೆಯರ್‌ರವರೊಂದಿಗೆ ಗುರುಕುಲದ ಉದ್ಘಾಟನೆಯ ಸಮಾರಂಭದಲ್ಲಿ - ೧೯೫೪



ಮೈಸೂರು ಅರಮನೆಗೆ ಮಾಡಿಕೊಟ್ಟ ಚಾಮುಂಡೇಶ್ವರಿ ವಿಗ್ರಹದೊಂದಿಗ




ಮೈಸೂರು ಅರಮನೆಯ ಭುವನೇಶ್ವರಿ ದೇವಸ್ಥಾನದ ಪ್ರತಿಷ್ಠಾಪನಾ ಸಮಾರಂಭದಲ್ಲಿ



‘ಶ್ರೀ ಭುವನೇಶ್ವರಿ’ ಅರಮನೆ, ಮೈಸೂರು



ವದುರ್ಗಾ’ ಚಿನ್ನದ ವಿಗ್ರಹ, ಮೈಸೂರು ಅರಮನೆ



ಶ್ರೀ ಪರಕಾಲ ಮಠದ ಸ್ವಾಮಿಗಳು




ಶಿಲ್ಪ ಸಿದ್ಧಲಿಂಗ ಸ್ವಾಮಿಗಳು



ಪ್ರತಿಮೆ



'ಗುರುಕುಲ'ದ ಉದ್ಘಾಟನೆಯಲ್ಲಿ




ಕಾಮ ಕಾಮೇಶ್ವರಿ ದೇವಾಲಯ, ಮೈಸೂರು



ಬೆಂಗಳೂರಿನಲ್ಲಿ ನಡೆದ ಉತ್ಸವ



ಮೈಸೂರು ಗುರುಕುಲದ ಮುಂಭಾಗ



ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಗದ್ದುಗೆ, ಮೈಸೂರು ಗುರುಕುಲ

ನಾನು ಕಂಡಂತೆ ನನ್ನ ಗುರುಗಳು

- ಸಿ. ಪರಮೇಶ್ವರಾಚಾರ್

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಶಿಲ್ಪಕಲೆಗೆ ಹೆಸರುವಾಸಿಯಾಗಿದ್ದು, ಅನೇಕ ಶಿಲ್ಪಿಗಳು ಕರ್ನಾಟಕ ಶಿಲ್ಪಕಲೆಗೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ ಅಂತಹವರಲ್ಲಿ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಒಬ್ಬರು. ನಮ್ಮ ತಾತನವರಾದ ರಥಶಿಲ್ಪ ಲಿಂಗಣ್ಣಾಚಾರ್ಯರು ಶ್ರೀ ಸಿದ್ಧಲಿಂಗಸ್ವಾಮಿಗಳ ಸಮಕಾಲೀನರು ಮತ್ತು ನನ್ನ ಸೋದರ ಮಾವ ಎಲ್. ಈಶ್ವರಾಚಾರ್ಯರು ಶ್ರೀ ಸ್ವಾಮಿಗಳವರ ಮುಖ್ಯ ಶಿಷ್ಯರಾಗಿದ್ದರು. ನಮ್ಮ ತಂದೆಯವರ ಜೊತೆಯಲ್ಲಿ ನಾನು ಚಿಕ್ಕವನಾಗಿದ್ದಾಗ, ತಾತನವರ ಗುರುಗಳ ಆರಾಧನೆಯಲ್ಲಿ ಹೋಗಿ ಶ್ರೀ ಸ್ವಾಮಿಯವರ ದರ್ಶನ ಪಡೆಯುತ್ತಿದ್ದೆ ಹಾಗೂ ಅವರ ವಿಚಾರಗಳನ್ನು ಹಿರಿಯರಿಂದ ಕೇಳಿ ತಿಳಿದುಕೊಳ್ಳುತ್ತಿದ್ದೆನು. ಅಂದು ಶ್ರೀಯವರ ಮಠವು ಈಗಿನಂತಿರಲಿಲ್ಲ. ಒಂದು ಹಳೆಯ ಛತ್ರದಂತೆ ಇದ್ದು, ಬಾಗಿಲ ಎದುರಿಗೆ ದೊಡ್ಡ ಕಿಟಕಿಯಿತ್ತು. ಪಕ್ಕದಿಂದ ಒಳಗೆ ಪ್ರವೇಶ ಮಾಡಬೇಕಿತ್ತು. ಅಲ್ಲಿ ಅನ್ನಸಂತರ್ಪಣೆ ನಡೆಯಲು ದೊಡ್ಡ ಹಜಾರವಿತ್ತು. ಎದುರಿಗೆ ಕರಸ್ಥಳ ನಾಗಲಿಂಗಸ್ವಾಮಿಗಳ ಲಿಂಗ ರೂಪದ ಗರ್ಭಗುಡಿಯಿದ್ದು, ಪಕ್ಕದಲ್ಲಿ ಶ್ರೀ ನಂಜುಂಡ ಶಿವಯೋಗಿಗಳ ಪ್ರತಿಮೆಯಿತ್ತು. ಹಿಂದುಗಡೆಯಲ್ಲಿ ಶಿಲ್ಪಕರ್ಮಕ್ಕೆ ಅನುಗುಣವಾಗಿ ಒಂದು ಆವರಣವಿದು. ಪಕ್ಕದಲ್ಲೇ ಗುರುಗಳ ಗೃಹಸ್ಥಾಶ್ರಮವಿತ್ತು.

ಈಗಿರುವ ನೂತನ ಮಠವನ್ನು ಮೈಸೂರು ಮಹಾರಾಜರ ಆಜ್ಞೆಯ ಮೇರೆಗೆ ಕಟ್ಟಲ್ಪಟ್ಟಿತು. ಕಾರಣ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಹೋದರಿ ಶ್ರೀ ಸ್ವಾಮಿಯವರ ಗುರುಗಳಾಗಿದ್ದ ಶ್ರೀ ನಂಜುಂಡ ಶಿವಯೋಗಿಗಳ ಶಿಷ್ಯರು, ಅವರ ಇಚ್ಛೆಯಂತೆ ನೂತನ ಮಠವನ್ನು ಕಟ್ಟಿಸಿಕೊಟ್ಟಿದ್ದರು. ಗುರು ಶಿಷ್ಯರ ಸಮಾಧಿಗಳು ಒಟ್ಟಿಗೆ ಇರುವುದನ್ನು ಚಾಮುಂಡೇಶ್ವರಿ ಬೆಟ್ಟದ ತಪ್ಪಲಲ್ಲಿ ಈಗಲೂ ನೋಡಬಹುದು. ಅರಮನೆ, ಗುರುಮನೆ ಸಂಪರ್ಕ ಹಿಂದಿನಿಂದಲೂ ಹೊಂದಿತ್ತು ಎಂಬುದಕ್ಕೆ ಹಲವಾರು ನಿದರ್ಶನಗಳಿವೆ. ಶ್ರೀ ಸ್ವಾಮಿಗಳ ಮುಂದಾಲೋಚನೆಯಂತೆ ನೂತನ ಮಠದ ಅಧಿಷ್ಠಾನದಲ್ಲೇ ಅವರ ಅಭಿಲಾಷೆಯಂತೆ ೧೮ ಅಡಿ ಎತ್ತರದ ಶಿಲೆಯನ್ನು, ನಿಂತಿರುವ ಪಂಚವಕ್ತ್ರೇಶ್ವರ ಮೂರ್ತಿಯನ್ನು ಸ್ಥಾಪಿಸಲು ಒಳಗೆ ಸಾಗಿಸಿದ್ದರೆನ್ನುತ್ತಾರೆ. ಅದು ಈಗಲೂ ಒಳಗೆ ಇರುವುದನ್ನು ಕಾಣಬಹುದು. ಅಲ್ಲದೆ ಅಪರೂಪವಾದ ರಥ ಸಮೇತ ಅಧಿದೇವತ ಪ್ರತ್ಯಧಿ ದೇವತೆಗಳನ್ನೊಳಗೊಂಡ ನವಗ್ರಹ ಮೂರ್ತಿಗಳ ಮಾದರಿಯನ್ನು ಕಡೆದಿದ್ದರು. ಅವುಗಳನ್ನು ಪೂರ್ತಿಗೊಳಿಸಲಾಗಲಿಲ್ಲ.

ಶ್ರೀ ಸ್ವಾಮಿಗಳು ಆಗಾಗ ವಿರಾಮದ ವೇಳೆಯಲ್ಲಿ ಅವರ ಹಿಂದಿನ ಕಥೆಯನ್ನು ಹೇಳುತ್ತಿದ್ದರು. ಈಗಿರುವ ಮಠವನ್ನು ಸ್ಥಾಪಿಸುವ ಮೊದಲು ಅವರು ಮೈಸೂರಿನ ಮಂಡಿಮೊಹಲ್ಲಾದಲ್ಲಿರುವ ಪಾಪಮ್ಮನ ಛತ್ರದಲ್ಲಿದ್ದು, ಅಲ್ಲಿ ಬಹಳಷ್ಟು, ಶಿಲಾ ಮೂರ್ತಿಗಳನ್ನು ರಚಿಸುತ್ತಿದ್ದರೆಂದು ಈಗಿರುವ ಮಠಕ್ಕೆ ಬದಲಾಯಿಸುವಾಗ ಹಲವಾರು ಭಿನ್ನವಾಗಿ ಒಡೆದು ಹೊದ ಮೂರ್ತಿಗಳನ್ನು ಅಲ್ಲೇ ನೆಲದಲ್ಲಿ ಹುದುಗಿಸಿರುವುದಾಗಿ ಹೇಳಿದರು. ಅವರ ಬಾಲ್ಯದಲ್ಲಿ ಮಾಡಿದ ವಿಘ್ನೇಶ್ವರನ ವಿಗ್ರಹ ಈಗಲೂ ಅಲ್ಲೇ ಉಳಿದಿದೆ. ಅವರು ಹೇಳಿದ ಮೇಲೆ ನಾನು ಸಹ ಹೋಗಿ ನೋಡಿದೆ. ಆ ಛತ್ರದ ಎದುರಿಗಿರುವ ಶ್ರೀ ಕಾಳಿಕಾಂಬ ಕಮಠೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಸ್ಥಾಪನೆಗೊಂಡಿರುವ ಐದು ಅಡಿಗಳ ಎತ್ತರದಲ್ಲಿ ಪಂಚ ಋಷಿಗಳ ಸಮೇತ ಇರುವ ವಿಶ್ವಕರ್ಮ ಮೂರ್ತಿ, ಈ ಮೂರ್ತಿಯ ವಿಶೇಷವೆಂದರೇ ಶಿಲ್ಪದ ಹಿಂಭಾಗ ಮುಂಭಾಗ ಎರಡು ಕಡೆಯೂ ಕಡೆಯಲ್ಪಟ್ಟದ್ದು, ಇಂತಹ ಶಿಲಾಮೂರ್ತಿ ಬೇರೆಲ್ಲೂ ಕಾಣಲು ಸಿಗುವುದಿಲ್ಲ. ಅಲ್ಲದೆ ಆಂಧ್ರದಲ್ಲಿರುವ ಪೋತ ಲೂರು ಶ್ರೀ ವೀರಬ್ರಹ್ಮೇಂದ್ರ ಸ್ವಾಮಿಗಳ ಶಿಲಾಪ್ರತಿಗಳು, ಶ್ರೀ ಸಿದ್ಧಪ್ಪಾಜಿ ಸ್ವಾಮಿಗಳ ಮತ್ತು ಲಿಂಗೋದ್ಭವ ಮೂರ್ತಿಗಳು ಶ್ರೀ ಸ್ವಾಮಿಗಳಿಂದ ನಿರ್ಮಿಸಿದ್ದು ಮತ್ತು ಇವರ ಅಣ್ಣನವರು ರಥಾರೂಢ ನವಗ್ರಹ ಮೂರ್ತಿಗಳನ್ನು ನಿರ್ಮಿಸಿದರೆಂದು ಹೇಳಿದರು. ಆ ದೇವಾಲಯದ ಮುಖ್ಯಸ್ಥರಾದ ವಾಸ್ತುಕಲಾ ಸೇವಾಸಕ್ತ ಟಿ. ಚೆಲುವಾಚಾರ್ಯರ ಕೋರಿಕೆಯ ಮೇರೆಗೆ ಅಲ್ಲಿಯ ಆವರಣದಲ್ಲಿ ಉಪನ್ಯಾಸವನ್ನು ನೀಡುತ್ತಿದ್ದುದನ್ನು ನಾನು ಚಿಕ್ಕವನಾಗಿದ್ದಾಗ ನಮ್ಮ ತಾತನವರ ಸಂಗಡ ಹೋಗಿ ಕೇಳುತ್ತಿದ್ದೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ರಾಜ್ಯ ಸಭೆಯ ವಿನ್ಯಾಸವನ್ನು ಬದಲಾಯಿಸುವ ಸಂದರ್ಭದಲ್ಲಿ ಶ್ರೀ ಸ್ವಾಮಿಗಳು ರಾಜ್ಯಸಭೆ ದೇವೇಂದ್ರ ಸಭೆಯಂತೆ ಇರಬೇಕು, ಹಿಂಸೆ ಅಸಭ್ಯತೆ ಇರಬಾರದೆಂದು ಅರಸರಿಗೆ ವಿವರಿಸಿ, ದೇವಲೋಕದಲ್ಲಿ ಇರಬೇಕಾದ ದೃಶ್ಯಗಳನ್ನು ಅಳವಡಿಸಿ ಮೇಲ್ಛಾವಣಿಗೆ ಕಿರುಚಿತ್ರವನ್ನು ರಚಿಸಿಕೊಟ್ಟರು. ಆಗ ಅರಮನೆಯ ಚಿತ್ರಕಲಾವಿದರಾಗಿ ನೇಮಕಗೊಂಡಿದ್ದ ಮಹಾರಾಷ್ಟ್ರದ ಪೂನಾದ ಕಲಾವಿದ ಶ್ರೀ ಲಕ್ಷ್ಮಣ ಕೃಷ್ಣರವರಿಗೆ ವಹಿಸಿದರು. ಸ್ವಾಮಿಗಳಿಂದ ಚಿತ್ರ ಬರೆಸಬೇಕೆಂಬ ಆಶೆ ಇಟ್ಟಿದ್ದ ಮಹಾರಾಜರು ದರ್ಬಾರ್ ಹಾಲಿನ ಹಿಂಭಾಗದ ಕೌನ್ಸಿಲ್ ಹಾಲಿನಲ್ಲಿ ಚಿತ್ರ ರಚಿಸಲು ನೀಡಿದರು. ಅದರಲ್ಲಿ ಸ್ವಾಮಿಗಳ ಶಿಷ್ಯರು, ನಮ್ಮ ತಾತನವರು ಭಾಗವಹಿಸಿದ್ದರಿಂದ ನನಗೆ ನೆನಪಿದೆ.

ಜಗದ್ಗುರು ಕರಸ್ಥಳ ನಾಗಲಿಂಗ ಸ್ವಾಮಿಗಳು ಮೈಸೂರಿನ ಅಕ್ಕಪಕ್ಕದಲ್ಲಿ ಪವಾಡ ಪುರುಷರಾಗಿದ್ದರೆಂದು ಮಠದ ಹಿರಿಯರಿಂದ ಕೇಳಿದ್ದೇನೆ. ಕರಸ್ಥಳವಾಡಿ, (ಕಳಸ್ತವಾಡಿ ಈಗ) ನಾಗನಹಳ್ಳಿ ನಾಗಲಿಂಗೇಶ್ವರ ದೇವಾಲಯ, ತಪಸ್ಸು ಮಾಡುತ್ತಿದ್ದ ಕುಂತಿಬೆಟ್ಟ ಮತ್ತಿತರ ಅವರ ಹೆಸರಿನ ಊರುಗಳು ಈಗಲೂ ಪ್ರಚಾರದಲ್ಲಿವೆ. ಮೈಸೂರಿನ ರಾಮಾನುಜ ರಸ್ತೆಯಲ್ಲಿ ಜಗದ್ಗುರು ಕರಸ್ಥಳ ನಾಗಲಿಂಗ ಸ್ವಾಮಿಗಳ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಹಿಂದಿನಿಂದಲೂ ಮೈಸೂರು ಅರಸರ ಸಂಪರ್ಕವಿದ್ದುದರಿಂದ ಶ್ರೀ ಜಯಚಾಮರಾಜೇಂದ್ರ ಒಡೆಯರಿಗೆ ಶಿವದೀಕ್ಷೆ ಕೊಟ್ಟು ರಾಜಗುರುಗಳಾದರು. ಅಲ್ಲದೆ ಅನೇಕ ಪಂಡಿತರಿಗೆ, ಶಾಸ್ತ್ರಜ್ಞರಿಗೆ ಸಾಹಿತಿಗಳಿಗೆ, ಸಂಗೀತಗಾರರಿಗೆ ಆಸ್ಥಾನದಲ್ಲಿ ಅವಕಾಶ ಮಾಡಿಕೊಟ್ಟರು ಹಾಗೂ ಅನೇಕ ಗ್ರಂಥಗಳನ್ನು ರಚಿಸಲು ನೆರವಾದರು. ಹೆಸರಾಂತ ಸಂಗೀತ ವಾಗ್ಗೇಯಕಾರರಾದ ದಿ॥ ವಾಸುದೇವಾಚಾರ್ಯರು ಶ್ರೀ ನಾಗಲಿಂಗ ಸ್ವಾಮಿಗಳನ್ನು ಕುರಿತು ರಚಿಸಿರುವ ಕೀರ್ತನೆಗಳು ಜನಪ್ರಿಯವಾಗಿದ್ದು, ಪ್ರತಿ ಸೋಮವಾರ ಸಂಜೆ ಶ್ರೀವಾಸು ದೇವಾಚಾರ್ಯರು ಸ್ವಾಮಿಗಳ ಸಮ್ಮುಖದಲ್ಲಿ ಹಾಡುತ್ತಿದ್ದರು. ಸ್ವಾಮಿಗಳ ಪುತ್ರರಾದ ಶ್ರೀ ನಾಗೇಂದ್ರ ಸ್ಥಪತಿಗಳು ಮೃದಂಗ ನುಡಿಸುತ್ತಿದ್ದರು. ಒಮ್ಮೆ ತಮಿಳುನಾಡಿನ ಪ್ರಸಿದ್ಧ ಸಂಗೀತಗಾರ ಹಾಗೂ ಸಿನಿಮಾ ನಟರಾದ ಎಂ. ಕೆ. ತ್ಯಾಗರಾಜ ಭಾಗವತ್ ರವರಿಗೆ ವಾಸುದೇವಾಚಾರ್ಯರು ಸ್ವಾಮಿಯವರ ಸಮ್ಮುಖದಲ್ಲಿ ಶಾಸ್ತ್ರೀಯ ಸಂಗೀತ ರಚನೆಯ ವಿವರವನ್ನು ತಿಳಿಸುತ್ತಿದ್ದನ್ನು ನಾನು ಮತ್ತಿತ್ತರರು ನೋಡಿದ್ದೇವೆ. ಇನ್ನು ಅನೇಕ ವಿಚಾರಗಳು ನನ್ನ ಜೀವನದಲ್ಲಿ ಮರೆಯಲಾರದ ಘಟನೆಗಳಾಗಿವೆ.

ಶ್ರೀ ಸ್ವಾಮಿಗಳು ಮೈಸೂರು ಮಹಾರಾಜರಿಗೆ ನಿಮ್ಮ ರಾಜ್ಯಾಧಿಕಾರದಲ್ಲಿ ಒಂದೆರೆಡು ದೇವಾಲಯಗಳನ್ನು ಕಟ್ಟಿಸಿದರೆ, ನಿಮ್ಮ ಹೆಸರು ಶಾಶ್ವತವಾಗಿ ಇರುವುದೆಂದು ಚೋಳಾ ಪಾಂಡ್ಯ, ಪಲ್ಲವ, ಚಾಲುಕ್ಯ ಮತ್ತು ವಿಜಯನಗರ ರಾಜರನ್ನೂ ನೆನಪು ಮಾಡುವುದು, ದೇವಾಲಯಗಳು ಎಂದು ರಾಜರ ಆದೇಶದಂತೆ ಶಾಸ್ತ್ರೀಯವಾಗಿ ದೇವಾಲಯದ ವಾಸ್ತುಕಲೆ ರೇಖಾ ಚಿತ್ರವನ್ನು ಸಿದ್ಧಪಡಿಸಿ, ಕಲಾತ್ಮಕ ವಾಗಿ ಮೂರ್ತಿಶಿಲ್ಪಗಳನ್ನು ಅಳವಡಿಸಿದರು. ಇದು ಹೊಯ್ಸಳರ ಕಾಲದ ಶಿಲ್ಪಾಚಾರ್ಯರಾದ ಜಕಣಾಚಾರಿ ಮತ್ತು ಸಂಗಡಿಗರಿಂದ ನಿರ್ಮಿತವಾದ ದೇವಾಲಯವನ್ನು ಜ್ಞಾಪಕಕ್ಕೆ ತರುತ್ತಿತ್ತು. ದೇವಾಲಯದ ಕೆಲಸ ನಡೆಯುತ್ತಿದ್ದಾಗ ವೀಕ್ಷಿಸಿದ ಜನರು ಶ್ರೀ ಸ್ವಾಮಿಯವರನ್ನು ಆಧುನಿಕ ಜಕಣಾಚಾರ್ಯರೆಂದು ಕರೆದರು. ಅದರಂತೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರವರು ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ, ಗಾಯತ್ರಿ ಹಾಗೂ ಗುರುಗಳ ಮಠದ ಪಕ್ಕದಲ್ಲಿ ಕಾಮೇಶ್ವರ ಕಾಮೇಶ್ವರಿ ದೇವಾಲಯಗಳನ್ನು ಕಟ್ಟಿಸಲು ಅನುವಾದರು.

ಭುವನೇಶ್ವರಿ ದೇವಸ್ಥಾನದ ಪ್ರಾರಂಭ

ಮೊದಲ ಬಾರಿಗೆ ಮೈಸೂರು ಅರಮನೆಯ ಆವರಣದಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಅಭಿಲಾಷೆಯಂತೆ ಕರ್ನಾಟಕ ಮಾತೆ ಭುವನೇಶ್ವರಿ ದೇವಿಯ ದೇವಾಲಯವು ಪ್ರಾರಂಭವಾಯಿತು. ಶ್ರೀ ಗುರುಗಳ ಮೇಲ್ವಿಚಾರಣೆಯಂತೆ ಅರಮನೆ ಕಂಟ್ರಾಕ್ಟರ್‌ರಾಗಿದ್ದ ವಾಸ್ತುಕಲಾ ಸೇವಾಸಕ್ತ ಟಿ. ಚಲುವಾಚಾರ್ಯರು (ಅಪ್ಪಾಜಪ್ಪನವರು) ದೇವಾಲಯದ ಕೆಲಸವನ್ನು ವಹಿಸಿಕೊಂಡರು. ಆಗ ಕಗ್ಗಲ್ಲು ದೊಡ್ಡಬಳ್ಳಾಪುರದಿಂದ ತರಿಸಬೇಕಾಗಿತ್ತು. ಅದರಲ್ಲಿ ಮಟ್ಟ ಕೆಲಸವೂ, ಕಪ್ಪು ಕಲ್ಲಿನಲ್ಲಿ ಮೂರ್ತಿ ಶಿಲ್ಪಗಳು, ಗಾರೆಯ (ಸುಧಾ ಶಿಲ್ಪ) ಗೋಪುರದ ಕುಸುರಿಕೆಲಸಗಳೂ ಹಾಗೂ ಮರದ ಬಾಗಿಲು ಕೆತ್ತನೆಯ ಕುಸುರಿ ಕೆಲಸ ಇತ್ಯಾದಿ ಎಲ್ಲಕ್ಕೂ ಸೇರಿ ಆರುವರೆ ಲಕ್ಷರೂಪಾಯಿಗಳೆಂದು ಕೇಳಿದ್ದೇನೆ. ಆ ಸಂದರ್ಭದಲ್ಲಿ ರಾಜಾಶ್ರಯದಲ್ಲಿ ಕೆಲಸ ಮಾಡುವುದೇ ಸ್ವರ್ಗವೆಂದು, ಭಕ್ತಿಯಿಂದ ದುಡಿಯುತ್ತಿದ್ದರು. ಕೆಲವು ವರ್ಷದಲ್ಲಿ ದೇವಾಲಯವೂ ಮುಗಿಯಿತು. ಶ್ರೀಮನ್ ಮಹಾರಾಜರ ನೇತೃತ್ವದಲ್ಲಿ ವಿಗ್ರಹಗಳ ಪ್ರಾಣ ಪ್ರತಿಷ್ಠಾಪನೆ, ನೇತ್ರೋನ್ಮಿಲನ, ಕುಂಭಾಭಿಷೇಕದವರಿಗೂ ಶ್ರೀ ಸ್ವಾಮಿಯವರು ನೆರವೇರಿಸಿದರು. ಆ ಸನ್ನಿವೇಶದಲ್ಲಿ ಮೈಸೂರಿನ ನಾಗರೀಕರೆಲ್ಲರೂ ಸಂತೋಷಪಟ್ಟರು. ಮೇಲ್ಕಂಡ ದೇವಾಲಯದ ವಿಗ್ರಹ ಮಾಡುತ್ತಿರುವಾಗ ನಡೆದ ಒಂದು ಘಟನೆ ಏನೆಂದರೆ. ಚಾಮುಂಡೇಶ್ವರಿ ದೇವಿಯ ವಿಗ್ರಹ ನಾನು ಮಾಡುತ್ತಿದ್ದಾಗ ನನ್ನ ಅಜಾಗರೂಕತೆಯಿಂದ ಬಲಕೈಯ್ಯ ಸರ್ಪಾಶ್ತ್ರವು ಮುರಿಯಿತು. ಆಗ ನಾನು ದಿಗ್‌ಭ್ರಾಂತನಾದೆ ಸ್ಥಪತಿಗಳು ನೋಡಿ ಭಯ ಪಡಬೇಡ ಅದು ಉಪಾಂಗ, ಬೆಳ್ಳಿ ಕಟ್ಟಿನಿಂದ ಶಿಲಾಟಂಕ ಮಾಡಬಹುದು ಎಂದು ಸಂತೈಸಿದರು ಈ ವಿಷಯ ಹೇಗೋ ಸ್ವಾಮಿಗಳಿಗೆ ತಿಳಿಯಿತು. ಅವರು ಬಂದು ವೀಕ್ಷಿಸಿ ಬಲಭಾಗದ ಕೈಯಲ್ಲಿ ದೊಡ್ಡ ಕಠಾರಿ ಇದ್ದುದನ್ನು ಸರ್ಪಾಶ್ರಮವನ್ನಾಗಿ

ಪರಿವರ್ತಿಸಿದರು. ಸರ್ಪದ ಬಾಲ ಉಳಿದಿರುವುದನ್ನು ಕಠಾರಿಯನ್ನಾಗಿ ಮಾಡಿದರು. ಉದಾಹರಣೆಗೆ, ಧ್ಯಾನ ಶ್ಲೋಕದಲ್ಲಿ ಇಂಥಾ ಹಸ್ತದಲ್ಲಿ ಇಂಥಾದ್ದೇ ಆಯುಧ ಇರಬೇಕೆಂದು ಹೇಳಿಲ್ಲ, ಬಲಭಾಗದ ಹಸ್ತಗಳಲ್ಲಿ ಇಂಥಾದ್ದೇ ಆಯುಧ ಇರಬೇಕೆಂದು ಹೇಳಿಲ್ಲ ಬಲಭಾಗದ ಹಸ್ತಗಳಲ್ಲಿ ಇಂಥಾ ಆಯುಧಗಳು ಇರಬೇಕೆಂದು ಮಾತ್ರ ಹೇಳಿದೆ ಎಂದು ಹೇಳಿ ಸಂದರ್ಭಾನುಸಾರ ಶಾಸ್ತ್ರೋಕ್ತವಾಗಿ ಸರಿಪಡಿಸುವುದು ಹೇಗೆ ಎನ್ನುವ ವಿಚಾರಗಳನ್ನು ಹೇಳಿದರು. ಅವರು ಹೇಳುತ್ತಿದ್ದ ಒಂದೊಂದೂ ಮಾತು ಈಗ ನನಗೆ ಉಪಯೋಗವಾಗುತ್ತಿದೆ. ಇದೇ ಸಮಯದಲ್ಲಿ ರಾಮಾನುಜ ರಸ್ತೆಯಲ್ಲಿ (ಆನೆಕರೋಟಿ ಬೀದಿ) ಕಾಮೇಶ್ವರ ಕಾಮೇಶ್ವರಿ ದೇವಾಲಯದ ಕಟ್ಟಡವೂ ಪ್ರಾರಂಭವಾಗಿತ್ತು ದೊಡ್ಡ ಬಳ್ಳಾಪುರದ ಕಗ್ಗಲ್ಲಿನಿಂದ ಮಟ್ಟ ಕೆಲಸವೂ ನಡೆಯುತ್ತಿತ್ತು ಅಧಿಷ್ಠಾನದ ಕುಸುರಿ ಕೆಲಸಗಳನ್ನು ನಾವೆಲ್ಲರೂ ಮಾಡುತ್ತಿದ್ದೆವು.

ಶ್ರೀಯವರ ಮಠದಲ್ಲಿ ಚಿಕ್ಕ ಹುಡುಗನಿಂದಲೂ ಇದ್ದು ಕೆಲಸ ಕಲಿತ ದಿ|| ಬಸವಣ್ಣ ಕಾರಣಾಂತರವಾಗಿ ಮಠವನ್ನು ಬಿಟ್ಟು ಸ್ವತಂತ್ರನಾದ. ಕಾಮೇಶ್ವರ ಕಾಮೇಶ್ವರಿ ದೇವಾಲಯದ ಕೆಲಸದಲ್ಲಿ ಭಾಗವಹಿಸಲಾಗಲಿಲ್ಲ. ಶ್ರೀ ಗುರುಗಳು ನಿಯೋಜಿಸಿದ ಗಾಯತ್ರಿ ದೇವಾಲಯದ ಕೆಲಸವನ್ನು ರಾಜಕೀಯವಾಗಿ ತನ್ನ ದಾಗಿಸಿಕೊಂಡು ನನ್ನನ್ನೂ ಕೂಡ ಮಠ ಬಿಟ್ಟು ಬರುವ ಹಾಗೆ ಪ್ರೇರಿಪಿಸಿದ. ಹಲವು ಆಶೆಗಳನ್ನು ವ್ಯಕ್ತಪಡಿಸಿದ. ಋಣಾನುಬಂಧ ನಾನು ಅದಕ್ಕೆ ಒಪ್ಪಲಿಲ್ಲ. ಮಠದಲ್ಲಿ ಶಿಲ್ಪಿಗಳಿಲ್ಲಾ, ಕಾಮೇಸ್ವರ ಕಾಮೇಶ್ವರಿ ದೇವಾಲಯವು ಸಮಯಕ್ಕೆ ಸರಿಯಾಗಿ ಪೂರ್ತಿಯಾಗುವುದಿಲ್ಲ ಎಂಬ ದೂರು, ಕೂಡ ಹಬ್ಬಿತ್ತು. ಈ ವಿಷಯ ತಿಳಿದು ನಾಗೇಂದ್ರ ಸ್ಥಪತಿಗಳಿಗೆ ಮುಖ ಕೆಟ್ಟಿತು. ಆಗನ ನನ್ನನ್ನು ಕುರಿತು "ನಿನ್ನ ಕಡೆಯ ಕೆಲಸಗಾರರಿದ್ದರೆ ಕರೆದು ಕೊಂಡು ಬಾಪ್ಪಾ" ಎಂದರು. ನಾನು, ಮದ್ರಾಸಿನಲ್ಲಿದ್ದ ನನ್ನ ಅಣ್ಣ, ಸೋದರ ಮಾವನನ್ನು ಕರೆದುಕೊಂಡು ಬಂದು ಸ್ಥಳಿಯ ನನ್ನ ಸಂಬಂಧಿಗಳನ್ನು ಒಟ್ಟುಗೂಡಿಸಿ ಕಾಮೇಶ್ವರ ಕಾಮೇಶ್ವರಿ ದೇವಾಲಯ ಪೂರ್ತಿ ಯಾಗಲು ಹಗಲೂ ಇರುಳೂ ಕಷ್ಟಪಟ್ಟು ದುಡಿದೆವು, ದೇವಾಲಯದ ಪ್ರಾಣ ಪ್ರತಿಷ್ಠೆಯು ಬೆಳಗಿನ ಬ್ರಾಹ್ಮ ಲಗ್ನದಲ್ಲಿ ನಾಗೇಂದ್ರ ಸ್ಥಪತಿಗಳಿಂದ ಆಯಿತು, ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಪೂಜಿಸಲ್ಪಟ್ಟಿತು. ನಂತರ ಮಧ್ಯವರ್ತಿಗಳು ದೇವಾಲಯವನ್ನು ಆಕ್ರಮಿಸಿಕೊಂಡರು. ರಾಜರೂ ಕೂಡ ರಾಜ ಪ್ರಮುಖರಾಗಿ (ಗೌರ್‍ನರ್) ಮದ್ರಾಸಿಗೆ ತೆರಳಿದರು. ಮದ್ರಾಸಿಗೆ ಹೋದ ಮೇಲೆ ಮದುರೆ ದೇವಾಲಯಕ್ಕೆ ಒಂದು ಲಕ್ಷ ರೂಪಾಯಿಗಳು ಕಾಣಿಕೆಯಾಗಿ ನೀಡಿದರೆಂದು ಪತ್ರಿಕೆಯಲ್ಲಿ ಓದಿದೆ, ಆಗ ನನಗನಿಸಿತು, ಆ ಒಂದು ಲಕ್ಷ ರೂಪಾಯಿಗಳನ್ನು ಕಾಮೇಶ್ವರ ಕಾಮೇಶ್ವರಿ ದೇವಾಲಯದ ಮಹಾದ್ವಾರ ಅರ್ಧಕ್ಕೆ ನಿಂತಿರುವ ಗೋಪುರದನ್ನು ಕಟ್ಟಿಸಿದ್ದರೆ ಚೆನ್ನಾಗಿತ್ತು. ಈ ದೇವಾಯವೂ ಪೂರ್ತಿಯಾಗುತ್ತಿತ್ತು ಎಂದು ಕೊಂಡೆ. ಎಲ್ಲವೂ ದೈವ ಲೀಲೆ. ನಂತರ ನಾಗೇಂದ್ರ ಸ್ಥಪತಿಗಳಿಗೆ ಕೆಲಸಗಾರರನ್ನು ಇಟ್ಟುಕೊಂಡು ಮುಂದೂರಿಸಲಾಗಲಿಲ್ಲ. ಆಗ ನಾನು ಮತ್ತಿತರರು ಬೆಂಗಳೂರನ್ನು ಸೇರಬೇಕಾಯಿತು. ಕೆಲವು ದಿನಗಳ ನಂತರ ಗುರುಕುಲವನ್ನು ಸರ್ಕಾರದ ನೆರವಿನಿಂದ ಶಿಲ್ಪಕಲಾ ಶಾಲೆಯಾಗಿ ಪರಿವರ್ತಿಸಲು ನಾಗೇಂದ್ರ ಸ್ಥಪತಿಗಳು, ಅಂದಿನ ಮುಖ್ಯ ಮಂತ್ರಿ ಶ್ರೀ. ಬಿ.ಡಿ. ಜತ್ತಿಯವರಿಂದ ಉದ್ಘಾಟನೆಮಾಡಿಸಿ ನನ್ನನ್ನು ಶಾಲೆಯ ಮುಖ್ಯೋದಧ್ಯಾಯನಾಗಿ ನಿರ್ವಹಿಸಲು ಹೇಳಿದರು. ನಾನು ಬೆಂಗಳೂರನ್ನು ಸೇರಿದ ಮೇಲೆ ಮೈಸೂರಿಗೆ ಹೋಗಲು ಇಷ್ಟಪಡಲಿಲ್ಲ. ಮುಂದೆ ಏನು ಕಾರಣವೊ, ಆ ಶಾಲೆ ನಡೆಯಲಿಲ್ಲ. ನನ್ನನ್ನೂ ಆಶ್ರಯಿಸಿ ಕೊಂಡು ಬೆಂಗಳೂರಿಗೆ ಬಂದ ಕೆಲವು ಕಲಾವಿದರನ್ನು ವಿಧಾನಸೌದಾ, ಮತ್ತು ಡಿಸೈನ್ ಸೆಂಟರಿನಲ್ಲಿ ಅನುವು ಮಾಡಿಕೊಟ್ಟೆ.

ಕೆಲವು ವರ್ಷಾನಂತರ ನಾನು ಶ್ರೀಯವರ ಮಠಕ್ಕೆ, ಹೋಗಿ ಅಮ್ಮಾವು ಅಂದರೆ ಶ್ರೀ ಸ್ವಾಮಿಯವರ ಧರ್ಮಪತ್ನಿ ವೀರಮ್ಮ) ಮಹಾದೇವ ಸ್ವಾಮಿಯವರನ್ನು ಕಂಡಾಗ "ಏನಯ್ಯ! ಸ್ವಾಮಿಯವರು ನಿನ್ನಾ ಭವಿಷ್ಯವನ್ನು ಆಗಾಗ್ಗೆ ಹೇಳುತ್ತಿದ್ದರು, ಪರಮೇಶ್ವರ ಆ ಹುಡುಗ ಕಲೆಯಲ್ಲಿ ಮುಂದುವರೆದು ಹೆಸರು ಸಂಪಾದಿಸುತ್ತಾನೆ. ಅವನಿಗೆ ಒಳ್ಳೆಯ ಭವಿಷ್ಯವಿದೆ ಎಂದು ಹೇಳುತ್ತಿದ್ದರು ಕಣಯ್ಯಾ, ಅವರು ಹೇಳುತ್ತಿದ್ದಂತೆ ಪ್ರಶಸ್ತಿ ಸಂಪಾದಿಸಿದೆ ಎಂದು ಹೇಳಿ ಆಶೀರ್ವದಿಸಿದರು. (ಪಾದ ಮುಟ್ಟಿ ನಮಸ್ಕರಿಸುವುದು ಶ್ರೀಯವರ ಮಠದ ಪದ್ಧತಿ) ಅದರಂತೆ ಅವರ ಅನುಗ್ರಹದಿಂದ ನಾಲ್ಕು ಜನರ ಎದುರಿಗೆ ನಾನು ನಿಲ್ಲುವಂತಾಗಿದೆ.

ಶ್ರೀಯವರು ಶಿಲ್ಪ ಕಲಾ ಶಾಲೆಗೆ ಮಧ್ಯಾಹ್ನದ ಮೇಲೆ ಬರುತ್ತಿದ್ದರು. ಆಗ ಅವರು ಎಲ್ಲಾ ಕೃತಿಗಳನ್ನು ನೋಡಿ, ಕೆಲವು ತಿದ್ದಪಡಿಗಳನ್ನು ಹೇಳುತ್ತಿದ್ದರು. ಅನಂತರ ಅವರು ವಿಗ್ರಹವನ್ನು ಕಡೆಯಲು ಕುಳಿತುಕೊಂಡರೇ, ಸಂಪೂರ್ಣ ಕತ್ತಲೆಯಾದರೂ ಕೆಲಸ ನಿಲ್ಲಿಸುತ್ತಿರಲಿಲ್ಲ. ನಮ್ಮಗಳಿಗೆ ಕಣ್ಣುಕಾಣಿಸದೆ ಎದ್ದು ಅವರ ಬಳಿ ಹೋದಾಗ "ಏನಯ್ಯಾ" ಎಂದು ಹೇಳಿ, ಸಮಯ ವಾಗಿರುವುದನ್ನು ಮನಗಂಡು ಕೆಲಸ ನಿಲ್ಲಿಸುತ್ತಿದ್ದರು. ಶಿಲ್ಪಕ್ಕೆ ಸಂಬಂಧಿಸಿದ ಆ ಸಮಯದಲ್ಲಿಯೂ ಸೂಕ್ಷ್ಮ ವಿಚಾರ, ಸುಲಭೋಪಾಯ, ತಪ್ಪಾದರೇ ತಿದ್ದುವುದು ಹೇಗೆ, ಇನ್ನೂ ಅನೇಕ ಶಾಸ್ತ್ರ ಸಂಬಂಧವಾದ ವಿಚಾರಗಳನ್ನು ಹೇಳುತ್ತಿದ್ದರು. ಅವರಿಗೆ ಮಹಾರಾಜರಿಂದ ಪ್ಲೈಮತ್‌ಕಾರ್ ದೊರಕಿತು.

ಅವರು ಶ್ರೀಮಠದ ಪೀಠಾಧಿಕಾರಿಯಾಗಿ ಶ್ರೀ ಮಹದೇವ ಸ್ವಾಮಿಯವರನ್ನು, ಸರ್ವಾಧಿಕಾರಿಯಾಗಿ ಶ್ರೀ ನಾಗೇಂದ್ರ ಸ್ಥಪತಿಯವರನ್ನು ನೇಮಕ ಮಾಡಿ, ಕಾಮಕಾಮೇಶ್ವರಿ ದೇವಾಲಯದ ಕೆಲಸವು ಇವರ ನೇತೃತ್ವದಲ್ಲಿ ಮುಂದುವರೆಯಿತು.

ಅರ್ಧಕ್ಕೆ ನಿಂತಿದ್ದ ಮೂಲ ವಿಗ್ರಹದ ಕೆಲಸ ನಾನು ಪೂರ್ತಿ ಮಾಡಿದೆ. ಅಲ್ಲಿನ ದೇವಾಲಯದಲ್ಲಿ ಬೃಹತ್ ಪ್ರಮಾಣದ ನಂದಿ ವಿಗ್ರಹ ಪ್ರಮುಖವಾದದ್ದು ಮತ್ತು ಶಿವಲೀಲೆಗಳು, ಕಲಾತ್ಮಕ ವಾದ ನವರಂಗ ಹಾಗೂ ಮುಖಮಂಟಪ, ಮಹಾದ್ವಾರದಲ್ಲಿ ಅಳವಡಿಸಿರುವ ಲಕ್ಷ್ಮೀ, ಸರಸ್ವತಿ, ಶಿವಪಾರ್ವತಿಯರ ಪಟ್ಟಿಕೆ, ದುರ್ಗಾ, ಗಣಪತಿ, ಕ್ಷೇತ್ರಪಾಲ, ಅಭಯಶಂಕರ, ವಾಸ್ತುಪುರುಷ, ಮೃತ್ಯಂಜಯ ಮುಂತಾದವು ಬೇಲೂರು ದೇವಾಲಯವನ್ನು ಹೋಲುತ್ತದೆ. ಈ ದೇವಾಲಯವು ೧೯೫೫ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಉದ್ಘಾಟಿಸಲ್ಪಟ್ಟಿತು. ಆದರೆ ಮಹಾದ್ವಾರದ ಗೋಪುರವು ಅರ್ಧಕ್ಕೆ ನಿಂತಿತ್ತು.ತಿರುಪತಿ ಕ್ಷೇತ್ರದ ಶ್ರೀ ವೇಂಕಟೇಶ್ವಾರ ಸ್ವಾಮಿಗೆ ಧರಿಸಲು ರತ್ನ ಖಚಿತ ಬಂಗಾರದ ಕಿರೀಟದ ಮಾದರಿಯನ್ನು ಬಣ್ಣದ ಚಿತ್ರದಲ್ಲಿ ಚಿತ್ರಿಸಿ ಕೊಟ್ಟಿದ್ದರು ಆಸಂದರ್ಭದಲ್ಲಿ ಶ್ರೀ ಸ್ವಾಮಿಯ ವಿಗ್ರಹವನ್ನು ಅಲಂಕಾರರಹಿತ ಪೂರ್ಣ ಪ್ರತಿಮೆಯನ್ನು ದರ್ಶಿಸುವ ಅವಕಾಶವನ್ನು ದೇವಸ್ಥಾನದ ಅಧಿಕಾರಿಗಳು ಒದಗಿಸಿ ಕೊಟ್ಟಿದ್ದರಂತೆ. ಸ್ವಾಮಿವರಿಗೆ ಶ್ರೀ ವೇಂಕಟೇಶ ಸ್ವಾಮಿಯ ಅಂಗಸೌಷ್ಟವನ್ನು ಒಂದು ದಿನ ವರ್ಣಿಸಿದರು

ಭಾರತಾದ್ಯಂತ ಶಿಲಾ ಮೂರ್ತಿಗಳು, ದೇವಾಲಯಗಳು ಶ್ರೀ ಸಿದ್ಧಲಿಂಗ ಸ್ವಾಮಿಗಳ ನೇತೃತ್ವದಲ್ಲಿ ನಿರ್ಮಾಣಗೊಂಡಿವೆ. ಅನೇಕ ವಿದೇಶದ ಸಂಸ್ಕೃತ ಪಂಡಿತರಿಗೆ ಮತ್ತು ಭಾರತದ ವಾಸ್ತುಶಿಲ್ಪಿಗಳು, ಸಂಸ್ಕೃತ ಪಂಡಿತರು, ಕಲಾವಿದರು ಮುಂತಾದವರು ಇವರಿಂದ ಅನೇಕ ಸಲಹೆಗಳನ್ನು ಪಡೆಯುತ್ತಿದ್ದರು. ಅಲ್ಲದೆ ಜೋತಿಷ್ಯ, ಯಂತ್ರತಂತ್ರ, ಶಾಸ್ತ್ರದಲ್ಲಿ, ಆಗಮ ಶಾಸ್ತ್ರದಲ್ಲಿ ಪ್ರಸಿದ್ಧರಾಗಿದ್ದ ಇವರು, ಗೃಹಶಾಂತಿಯ ಬಗ್ಗೆ ಜನ ಸಲಹೆ ಪಡೆಯುತ್ತಿದ್ದರು. ಅವರ ಖ್ಯಾತಿ ಎಷ್ಟಿತ್ತು ಎಂದರೇ, ಕಾಶಿ ವಿಶ್ವವಿದ್ಯಾಲಯದಲ್ಲಿ ಇವರ ಭಾವಚಿತ್ರವು ಮಹಾಪಂಡಿತರ ಸಾಲಿನಲ್ಲಿ ಅಲಂಕರಿಸಿದೆ. ಅರಮನೆಯಲ್ಲಿ ನಡೆಯುತ್ತಿದ್ದ ಸಾಹಿತ್ಯ ವಿದ್ವತ್ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು ಮತ್ತು ಇವರನ್ನು ಬೆಳ್ಳಿ ಮಂಟಪದಲ್ಲಿ ಅಲಂಕರಿಸಿ ಪೂಜಿಸುತ್ತಿದ್ದರು. ಬೇರೆ ರಾಜಮಹಾರಾಜರ ಆಸ್ಥಾನ ಮಹಾಪಂಡಿತರು ಆಗಮಿಸಿ, ಇವರ ದರ್ಶನ ಪಡೆದು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಸಂಪ್ರದಾಯ ಬದ್ಧವಾಗಿ ಶಿಲ್ಪಕೃತಿಗಳನ್ನು ರಚಿಸುವ ಮಾತು ಹಾಗಿರಲಿ; ಶಿಲ್ಪಶಾಸ್ತ್ರದ ಬಗ್ಗೆ ನಮಗೆ ತಿಳುವಳಿಕೆ ಕೊಡುವವರೂ ಇಲ್ಲವಾದರು ಈ ಮರಳುಗಾಡಿನಲ್ಲಿ ನಮಗೆ ಸಿಕ್ಕ ಜಲಾಶಯ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳು. ಇವರು ಮೈಸೂರು ಅರಮನೆಯ ಪ್ರಾಕಾರದಲ್ಲಿ ಕಟ್ಟಿರುವ ಹಲವಾರು ದೇವಲಾಯ ಗಳು, ಆನೇಕರೋಟಿ ಬೀದಿಯಲ್ಲಿ ಕಟ್ಟಿರುವ "ಕಾಮೇಶ್ವರ ದೇವಾಲಯ"ವೂ ಇವರ ಅಸಾಮಾನ್ಯ ಜ್ಞಾನ, ಅಸಾಧಾರಣ ಶಿಲ್ಪದ ದ್ಯೋತಕಗಳಾಗಿವೆ.

ಶ್ರೀ ಸ್ವಾಮಿಗಳವರ ಪುಣ್ಯ ಕ್ಷೇತ್ರ ದರ್ಶನ

ಶ್ರೀ ಗುರುಗಳ ಅಪೇಕ್ಷೆಯೆಂತೆ ಶ್ರೀಮನ್ ಮಹಾರಾಜರು, ಕಲಾತ್ಮಕವಾದ ದೇವಾಲಯ ಹಾಗೂ ಕಾಶೀಕ್ಷೇತ್ರ ದರ್ಶನಕ್ಕೆ ಒಂದು ಪ್ಲೈಮತ್ ಕಾರ್ ವಾಹನವನ್ನು ದಯ ಪಾಲಿಸಿದರು. ಅವರ ಬಹುದಿನದ ಆಸೆಯಂತೆ ಶ್ರೀಯವರು ಅವರ ಪುತ್ರ ನಾಗೇಂದ್ರ ಸ್ಥಪತಿ ಮತ್ತು ಊಟೋಪಚಾರಗಳಿಗೆ ಕೆಲವು ಶಿಷ್ಯರನ್ನು ಜೊತೆಗೂಡಿ ಶುಭದಿನದಲ್ಲಿ ಹೊರಟರು. ಆದರೆ ವಿಧಿಲೀಲೆ ಬೇರೆಯಾಗಿತ್ತು. ಮೈಸೂರನ್ನು ಬಿಟ್ಟು ಉತ್ತರ ಕರ್ನಾಟಕ ಮಾರ್ಗವಾಗಿ ಪ್ರಖ್ಯಾತ ಚಾಲುಕ್ಯ ಶಿಲ್ಪಕಲೆ ಬಾದಾಮಿ, ಮಹಾಕೂಟ, ಪಟ್ಟದಕಲ್, ಐಹೊಳೆ ಮತ್ತಿತರ ಕ್ಷೇತ್ರಗಳನ್ನು ವೀಕ್ಷಿಸಿ, ಹಳ್ಳ ಕೊಳ್ಳಗಳನ್ನು ಹಾದೂ ಬೊಂಬಾಯಿ ನಗರವನ್ನು ಸೇರುವಷ್ಟರಲ್ಲಿ ಅವರ ದೇಹಸ್ಥಿತಿ ವಿಷಮಿಸಿತ್ತೆಂದು ಕೇಳಿದೆ. ಮುಂದೆ ಸಾಗಲಾರದೆ, ಮೈಸೂರಿಗೆ ಹಿಂದಿರುಗ ಬೇಕಾಯಿತೆಂದು ಸ್ಥಪತಿಯವರು ವಿವರಿಸಿಕೆಲವು ರೇಖಾಚಿತ್ರ ಗಳನ್ನೂ ತೋರಿಸಿದರು. ವಾಪಸ್ ಆದ ಮೇಲೆ ವಿಶ್ರಾಂತಿಯನ್ನು ಆಶ್ರಯಸಿದರು. ನಂತರ ಅವರ ಅಂತಿಮಕಾಲ ನಿಶ್ಚಿತವಾಗಿದೆ ಎಂದು ಭಾವಿಸಿ, ಗುರುಕುಲದ ಬಲಭಾಗದ ಆವರಣದಲ್ಲಿ ಅಂತ್ಯ ಸಂಸ್ಕಾರ ನಡೆಯಲು ಶ್ರೀಯವರ ಅಪ್ಪಣೆ ಮೇರೆಗೆ ಸಮಾಧಿಯನ್ನು ನಿರ್ಮಿಸಬೇಕಾಯಿತು. ಒಂದು ದಿನ ಸ್ವಾಮಿಯವರೇ ಒಂದು ಸಮಾಧಿಯನ್ನು ವೀಕ್ಷಿಸಿ, ಮುಂದೇನು ಮಾಡಬೇಕೆಂಬ ವಿಷಯ ಗಳನ್ನೂ ಪುತ್ರ ನಾಗೇಂದ್ರ ಸ್ಥಪತಿಯರಿಗೆ ವಿವರಿಸುತ್ತಿದ್ದನ್ನು ನೋಡಿ ವ್ಯಥೆಯಾಯಿತು. ನಂತರ ಅವರ ಅಂತಿಮ ದಿವಸ, ಅವರ ತಮ್ಮ ಶ್ರೀ ಅಪ್ಪಾಜಿ ಸ್ವಾಮಿಗಳ ಪುತ್ರ ಮಹಾದೇವ ಸ್ವಾಮಿಗಳಿಗೆ ಪೀಠಾಧ್ಯಕ್ಷ ಪಟ್ಟವನ್ನು ಶಾಸ್ತ್ರೋಕ್ತವಾಗಿ ಮಾಡಿಸಿ, ತಮ್ಮ ಪುತ್ರ ನಾಗೇಂದ್ರ ಸ್ಥಪತಿಗಳಿಗೆ ಸರ್ವಾಧಿಕಾರವನ್ನು ನೀಡಿದರು. ನಂತರ ಒಂದು ದಿವಸ ಅವರು ಯೋಗಾಸನದಲ್ಲಿ ಸಮಾಧಿ ಗ್ರಸ್ತರಾಗಿ ದ್ರೆಂದು ತಿಳಿಯಿತು. ನಂತರ ಅವರು ಯೋಗ ಮುದ್ರೆಯಿಂದ ಹಿಂದಿರುಗಿ ಸಮಾಧಾನ ಪಡಿಸಿದರಂತೆ. ೧೯೫೨ ಜೇಷ್ಠಮಾಸ ದಲ್ಲಿ ಶ್ರೀಯವರು ಸಾನಿಧ್ಯ ಸೇರಿದರು. ಅಂದು ಶ್ರೀಮನ್ ಮಹಾರಾಜರು ಊರಿನಲ್ಲಿಲ್ಲ ವಾದ್ದರಿಂದ ಶ್ರೀಯವರ ಸಮಾಧಿಯನ್ನು ಗುರುಕುಲದಲ್ಲಿ ನಡೆಯಲು ಕೆಲವು ವಿರೋಧಿಗಳು ಪ್ರತಿಭಟಿಸಿದರು. ದೂರ ಸಂಪರ್ಕದ ಕರೆಯಿಂದ ಮಹಾರಾಜರ ಅಪ್ಪಣೆ ಪಡೆದು ರಾಜ ಬೀದಿಗಳಲ್ಲಿ ರಾಜ ಮರ್ಯಾದೆಯಿಂದ ವೇದೋಕ್ತ ಮಂತ್ರಗಳೊಡನೆ ಪಾಲಿಕೆಯಲ್ಲಿಳವಡಿಸಿ ಮೆರವಣಿಗೆ ಮಾಡಿ, ಮಧ್ಯಾಹ್ನದ ವೇಳೆಯಲ್ಲಿ, ವಿಧಿವತ್ತಾಗಿ ಸಮಾಧಿ

ಮಾಡಲಾಯಿತು. ಆ ಸನ್ನಿವೇಶ ಎಲ್ಲರನ್ನು ದುಃಖ ತಪ್ತರನ್ನಾಗಿ ಮಾಡಿತು.

ಸ್ವಾಮಿಗಳು ಶಿವೈಕ್ಯರಾದ ನಂತರ ರಾಮಾನುಜಾ ರಸ್ತೆಯಲ್ಲಿರುವ (ಅನೇಕರೋಟಿ ಬೀದಿ) ಕಾಮೇಶ್ವರ-ಕಾಮೇಶ್ವರಿ ದೇವಾಲಯವು ಶ್ರೀ ಸಿದ್ಧಲಿಂಗಸ್ವಾಮಿಗಳು ಸೃಷ್ಟಿಸಿದ ನಕ್ಷೆಯಂತೆ ನೆರವೇರಲಿಲ್ಲ. ದೇಹಾಕಾರೋದೇಗುಲ ಎಂಬ ತತ್ವವನ್ನುನುಸರಿಸಿ ಗರ್ಭ ಗೃಹ, ಕಂಠದ್ವಾರ, ನವರಂಗಾ, ಮುಖ ಮಂಟಪದ, ಬಲಿಪೀಠಾ, ಧ್ವಜ ಸ್ತಂಭ, ಮಹಾದ್ವಾರ, ಪ್ರಾಕಾರಾದಿ ಗೋಪುರಗಳನ್ನು ಅಳವಡಿಸಿದ್ದರು. ಇವುಗಳೆಲ್ಲವೂ ಕಗ್ಗಲ್ಲಿನಿಂದ ನಿರ್ಮಿತವಾಯಿತು. ಅಧಿಷ್ಠಾನವನ್ನು ಹೊಯ್ಸಳಶಿಲ್ಪವನ್ನು ಹೋಲುವ ಆನೆಪಾಲು, ಸಿಂಹಶಾರ್ದೂಲ, ಅಶ್ವಸಾಲು, ವ್ಯಾಳಿ ಸಮೇತ ಹಂಸಪಕ್ಷಿ ಮಧ್ಯ ಹೂಬಳ್ಳಿಗಳ ಪಟ್ಟಿಕೆಗಳನ್ನು ಕಪ್ಪು ಕೃಷ್ಣ ಶಿಲೆಯಲ್ಲಿ ತಯಾರಿಸಲು ಚಿತ್ರಿಸಿದ್ದರು. ಅವುಗಳೆಲ್ಲವೂ ಕಗ್ಗಲ್ಲಿನಿಂದ ಮಟ್ಟವಾಗಿ ಮಾಡಬೇಕಾಯಿತು. ಗರ್ಭಗೃಹದಲ್ಲಿ ಲಿಂಗರೂಪ ನಿರಾಕಾರ ಪೀಠವನ್ನು ೩೧/.೨ ಅಡಿಗಳ ಎತ್ತರದಲ್ಲಿ ಕಡೆಯಲಾಯಿತು. ಈ ಲಿಂಗದ ವಿಶೇಷವೇನೆಂದರೆ ಎತ್ತರದಲ್ಲಿ ಮೂರು ಭಾಗ ಮಾಡಿ (ಒಂದು ಭಾಗ ಚತುರ್ ಕೋಣ) ಕೆಳಗಿನ ಭಾಗ (ನಾಲ್ಕು ಮೂಲೆ) ಮಧ್ಯದ ಭಾಗ ಎಂಟುಮೂಲೆ, ಮೇಲಿನಭಾಗ ವೃತ್ತಾಕಾರ. ಮಾಡಿ, ಮೂಲ ತೋ ಬ್ರಹ್ಮ ರೂಪಾಯ ಮಧ್ಯತೋ ವಿಷ್ಣು ರೂಪಿಣಿ ಅಗ್ರತಣಿವ ರೂಪಾಯಿ ಶ್ಲೋಕದಂತೆ ಕಡೆಯಲ್ಪಟ್ಟಿದೆ. ಲಿಂಗದ ಹಿಂಭಾಗದಲ್ಲಿ ಆಕಾರ ಮೂರ್ತಿ ಕಾಮೇಶ್ವರ ಕಾಮೇಶ್ವರಿ ವಿಗ್ರಹ ೫೧/೨ ಅಡಿಎತ್ತರದಲ್ಲಿ ಸ್ಥಾಪಿಸಲಾಗಿದೆ, ನವರಂಗದಲ್ಲಿ ನಾಲ್ಕು ಆಧಾರ ಕಂಬಗಳನ್ನೂ ಹೊಯ್ಸಳ ಶೈಲಿಯಲ್ಲಿ ಮಾಡಿ, ಅದರಲ್ಲಿ ಪ್ರದೋಷ ತಾಂಡವನೃತ್ಯದ ಕೆತ್ತನೆಯನ್ನು ಮಾಡಲಾಗಿದೆ. ಅಂದರೆ ಸ್ವರ್ಣ ಸಿಂಹಾಸನದಲ್ಲಿ ಪಾರ್ವತೀದೇವಿ ಆಸೀನಾಳಾಗಿರುತ್ತಾಳೆ. ಅವಳ ಸಮ್ಮುಖದಲ್ಲಿ ಶಿವನು ತಾಂಡವನೃತ್ಯ ಮಾಡುತ್ತಾನೆ. ದೇವದೇವತೆಗಳೆಲ್ಲರೂ ವಾದ್ಯಗಾರರಾಗಿ ವಿವಿಧ ಭಂಗಿಯಲ್ಲಿ ಸ್ಥಾನಿಕರಾಗಿರುತ್ತಾರೆ. ಇದು ಬಹುರಮ್ಯವಾದ ಕಲ್ಪನೆ. ಈ ಕಂಬಗಳಲ್ಲಿ ಸ್ವಾಮಿಗಳು ಚಿತ್ರಿಸಿದಂತೆ ಕೆತ್ತಲಾಗದೇ ೨೫ ಬಾಗ ಮಾತ್ರ ಮಾಡಲಾಯಿತು. ಕಾರಣ ಹಣದ ಮುಗಟ್ಟು. ನಾಲ್ಕು ಕಂಬಗಳ ಮಧ್ಯ ಈಗಿರುವ ಅಷ್ಟದಿಕ್ಪಾಲಕರೂ, ದ್ವಾದಶಿರಾಶಿಗಳು. ನವಗ್ರಹಗಳ ಪಟ್ಟಿಕೆಗಳನ್ನು ಮುಖ ಮಂಟಪಕ್ಕೆ ಮಾಡಿ ನವರಂಗಕ್ಕೆ ಅಳವಡಿಸಲಾಯಿತು. ಆ ಜಾಗ ಖಾಲಿ ಇರುತ್ತದೆ. ಇದೇ ರೀತಿ ಇನ್ನೂ ಅನೇಕ ಕೆಲಸಗಳನ್ನು ಮೊಟಕು ಮಾಡಲಾಯಿತು. ಮಹಾರಾಜರೂ ಈ ದೇವಾಲಯ ನಿರ್ಮಾಣಕ್ಕೆ ೭ಲಕ್ಷ ರೂಪಾಯಿಗಳನ್ನು ನಿಗದಿ ಪಡಿಸಿದರೆದು ಕೇಳಿದ್ದೇನೆ. ನನಗೆ ಸರಿಯಾಗಿ ಗೊತ್ತಿಲ್ಲ. ಇದರಲ್ಲಿ ದೊಡ್ಡ ಬಳ್ಳಾಪುರದಿಂದ ತರಿಸುತ್ತಿದ್ದ ಕಗ್ಗಲ್ಲಿಗೇ ಬಹಳ ಹಣ ಖರ್ಚಾಗುತ್ತಿತ್ತು. ಕೆಲಸಗಾರರಿಗೆ ದಿನ ಕೂಲಿ ಕೊಡುತ್ತಿದ್ದದ್ದು ಕಡಿಮೆ. ದೇವಾಲಯವನ್ನು ಕಂಟ್ರಾಕ್ಟ್ ತೆಗೆದುಕೊಂಡಿದ್ದ ಚಿಕ್ಕ ಚಲುವಾಚಾರ್‍ಯರು ಬೀದಿ ಪಾಲಾದರು. ನಾ ಕಂಡಂತೆ ನಾಗೇಂದ್ರ ಸ್ಥಪತಿಗಳಿಗೆ ಕೆಲಸಕ್ಕೆ ತಕ್ಕಂತ ಹಣ ಪಡೆಯುವುದು ಗೊತ್ತಿಲ್ಲವೆಂದು ಕಾಣುತ್ತದೆ. ನಗರ ಕೆಲವು ಬುದ್ಧಿ ಜೀವಿಗಳು ಮಹಾರಾಜರು ಹಣವನ್ನೆಲ್ಲಾ ದೇವಾಲಯ ಕಟ್ಟಲು ವ್ಯಯಮಾಡುತ್ತಿದ್ದಾರೆ ಎಂದು ದೂಷಿಸಿದ ಜನರು, ದೇವಾಲಯ ಕಟ್ಟಿದ ಮೇಲೆ ಈಗ ವ್ಯಸನ ಮಾಡುತ್ತಿದ್ದಾರೆ, ಮತ್ತು ಮಹಾರಾಜರನ್ನೂ ಶ್ರೀ ಸ್ವಾಮಿಗಳನ್ನು ತೆಗಳುತ್ತಿದ್ದವರೂ, ಈಗ ಹೊಗಳುತ್ತಿದ್ದಾರೆ. ಇದರಲ್ಲಿ ಭಾಗವಹಿಸಿದ ಶಿಲ್ಪಿಗಳಿಗೆ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿರಲಿಲ್ಲ. ಬೇಲೂರು, ಹಳೇಬೀಡು ಶಿಲ್ಪಗಳನ್ನು ನೋಡಿ ಆತೊರೆಯುತ್ತಿದ್ದ 'ನಾನು ಇಂಥಾ ಕೆಲಸ ಮಾಡಲು ಅವಕಾಶ ಸಿಕ್ಕಿತಲ್ಲಾ ಎಂಬುದೇ ತೃಪ್ತಿ'.

❑

ಬಹುಮುಖ ಪ್ರತಿಭೆಯ ಕಲಾವಿದ

- ಎನ್. ಮರಿಶಾಮಾಚಾರ್

"ಪ್ರಪಂಚದಲ್ಲಿರುವ ಮಾನವಕೋಟಿಯ ಅಜ್ಞಾನವು ನಿವಾರಣೆಯಾಗಿ ಸರ್ವರಿಗೂ ಜ್ಞಾನೋದಯವಾಗಲೆಂಬ ಸದುದ್ದೇಶದಿಂದ ಶ್ರೀ ವೇದವ್ಯಾಸಮಹರ್ಷಿಗಳು ವೇದ, ಉಪನಿಷತ್ತು, ಇವುಗಳ ಅರ್ಥವನ್ನೇ ವಿವರಿಸಿ ಬೋಧಿಸುವ ಬ್ರಹ್ಮಸೂತ್ರ, ಮಹಾಪುರಾಣಗಳು, ಉಪಪುರಾಣಗಳು, ಮಹಾಭಾರತ, ಶಿವರಹಸ್ಯ ಇವೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿ, ಸರ್ವರಿಗೂ ಅಧ್ಯಾತ್ಮಜ್ಞಾನವು ವೃದ್ಧಿಯಾಗುವಂತೆ ಮಾಡಿರುವರು. ವ್ಯಾಸಮಹರ್ಷಿಪ್ರಣೀತಗಳಾದ ಈ ಗ್ರಂಥರಾಜಗಳು ಶೈವ, ವೈಷ್ಣವ, ಶಾಕ್ತ ಮುಂತಾದ ಮತಗಳ ಸರ್ವೋತ್ಕೃಷ್ಟತೆಯನ್ನು ಸ್ಪಷ್ಟವಾಗಿ ತಿಳಿಸಿ, ಆಯಾ ಮತತತ್ವಗಳನ್ನು ಶ್ರದ್ಧಾಭಕ್ತಿಯಿಂದ ಅನುಷ್ಠಾನಕ್ಕೆ ತರಲು ಅತ್ಯಂತ ಸಹಕಾರಿಗಳಾಗಿರುತ್ತವೆ. ಇಷ್ಟೇಲ್ಲದೆ, ಕೆಲವು ಗ್ರಂಥಗಳಲ್ಲಿ ಸರ್ವಮತಗಳಿಗೂ ಸರ್ವೇಶ್ವರನೊಬ್ಬನೇ ಕರ್ತೃ ; ಶಿವ, ವಿಷ್ಣು, ಶಕ್ತಿ ಎಂಬ ಕಲ್ಪನೆಯು ಉಪಾಧಿಯಿಂದ ಉಂಟಾಗಿದೆ ಎಂಬುದನ್ನೂ ವ್ಯಾಸರು ಸ್ಥಿರಪಡಿಸಿರುವರು. ಭಕ್ತಿ, ಜ್ಞಾನ, ವೈರಾಗ್ಯ ಇವುಗಳನ್ನು ಸಂಪಾದಿಸಿ ತನ್ಮೂಲಕ ಪರಮಾತ್ಮಸಾಕ್ಷಾತ್ಕಾರವನ್ನು ಪಡೆದು, ಜನಸಮುದಾಯವು ಐಹಿಕಾಮುಷ್ಮಿಕ ಸುಖಗಳೆರಡನ್ನೂ ಅನುಭವಿಸಲೆಂಬುದೇ, ವ್ಯಾಸಮಹಾಮುನಿಗಳ ಉದ್ದೇಶ." ಈ ವಿಷಯವನ್ನು ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಶ್ರೀ ಶಿವಗೀತೆಯ ಪುಸ್ತಕಕ್ಕೆ ಬರೆದ ಮುನ್ನುಡಿಯ ಕೆಲವು ಮಾತುಗಳು. ಶ್ರೀಯುತರು ಚಿತ್ರ, ಶಿಲ್ಪ ಕಲಾವಿದರು, ಗುರುಗಳಾಗಿ, ರಾಜರ್ಷಿಯಾಗಿ ಮತ್ತು ಲೇಖಕರಾಗಿ ಅವರ ಸೇವೆ ಅಪಾರವಾದುದು.

ಶ್ರೀ ಶಿವಗೀತೆಯ ಪುಸ್ತಕದ ಬಗ್ಗೆ ತಮ್ಮ ಪ್ರಸ್ತಾವನೆಯಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು "ಪ್ರಕೃತ ಈ ಶಿವಗೀತೆಯು ಪದ್ಮಪುರಾಣದ ಒಂದುಭಾಗ ಹದಿನಾರು ಅಧ್ಯಾಯಗಳಿಂದ ಕೂಡಿದ ಈ ಶಿವಗೀತೆಯು, ಬ್ರಹ್ಮ ವಿದ್ಯಾಬೋಧಕವಾದ ಒಂದು ಉಪನಿಷತ್ತಿನಂತಿರುವುದು. ಇದರಲ್ಲಿ ಅನೇಕ ಉಪನಿಷತ್ತುಗಳ ವಾಕ್ಯಗಳೂ, ಮಂತ್ರಶ್ರುತಿಗಳೂ, ಶ್ಲೋಕರೂಪಗಳಾಗಿ ಕಂಡುಬರುತ್ತಿವೆ. ಶ್ರೀರಾಮಚಂದ್ರನು ಪತ್ನೀವಿರಹವನ್ನು ಪಡೆದು ಲಕ್ಷ್ಮಣನೊಡನೆ ಆತ್ಮಹತ್ಯೆಗೆ ಅನುವಾದಾಗ, ಅಗಸ್ತ್ಯ ಮಹರ್ಷಿಗಳು ಶ್ರೀರಾಮನ ಸಮೀಪಕ್ಕೆ ಬಂದು. ನಾನಾರೀತಿಯಿಂದ ಸಮಾಧಾನ ಮಾಡಿ, ವಿರಜಾದೀಕ್ಷೆಯನ್ನು ಪಡೆದು ಪಾಶುಪತವ್ರತವನ್ನಾಚರಿಸಿ, ವೇದಸಾರ ಶಿವಸಹಸ್ರ ನಾಮಗಳನ್ನು ಪಾರಾಯಣಮಾಡಿ, ದುಃಖನಿರ್ಮುಕ್ತನಾಗುವಂತೆ ಉಪದೇಶ ಮಾಡುವರು. ಮಹರ್ಷಿಗಳ ಉಪದೇಶದಂತೆ ಶ್ರೀರಾಮನು ಮಹಾಪಾಶುಪತ ವ್ರತವನ್ನು ಕೈಕೊಂಡು, ಪರಮೇಶ್ವರನನ್ನು ಮೆಚ್ಚಿಸಿ, ಅವನ ಸಾಕ್ಷಾತ್ಕಾರದಿಂದ ವಿಶ್ವ ರೂಪವನ್ನೇ ಪರಶಿವನ ಸಾಕಾರಮೂರ್ತಿಯಲ್ಲಿ ದರ್ಶನಮಾಡಿ, ಶಿವದತ್ತ ವರಮಹಿಮೆಯಿಂದ ರಾವಣಾದಿಗಳನ್ನು ಕೊಲ್ಲುವಂತಹ ಸಾಮರ್ಥ್ಯವನ್ನು ಪಡೆದನೆಂಬುದೇ ಇಲ್ಲಿಯ ಕತೆಯು ನಾನಾರೀತಿಯ ಮನಃಕ್ಲೇಶಕ್ಕೆ ಒಳಗಾಗಿ ಪರಿತಪಿಸುವ ಶ್ರೀರಾಮನಿಗೆ ಪರಶಿವನು ವಿಭೂತಿವಿಸ್ತರ ಯೋಗ, ವಿಶ್ವರೂಪಸಂದರ್ಶನಯೋಗ, ದೇಹೋತ್ಪತ್ತ್ಯಾದಿ ನಿರೂಪಣೆ, ದೇಹಸ್ವರೂಪ ನಿರೂಪಣೆ, ಜೀವಸ್ವರೂಪ ನಿರೂಪಣೆ, ಉಪಾಸನಾವಿಧಿ, ಮೋಕ್ಷಯೋಗ, ಭಕ್ತಿಯೋಗ, ಇವೇ ಮೊದಲಾದ ಮುಕ್ತಿಪ್ರದಗಳಾದ ವಿಷಯಗಳನ್ನು ಸುಲಭವಾಗಿ ದೃಷ್ಟಾಂತನಿರೂಪಣಪೂರ್ವಕ ಉಪದೇಶಿಸಿರುವನು. ಈ ಉಪದಶೇ ಕ್ರಮವು ಪ್ರತಿಯೊಬ್ಬ ನಾಸ್ತಿಕನಿಗೂ ಬೋಧಪ್ರದವಾದ ಪಾಠದಂತಿರುವುದು. ಸಗುಣೋಪಾಸನೆಯು ನಿರ್ಗುಣೋಪಾಸನೆಗೆ ಎಷ್ಟರಮಟ್ಟಿನ ಸಹಕಾರಿಯುಗುವುದೆಂಬುದನ್ನು ಇಲ್ಲಿ ನಾವು ದೃಷ್ಟಾಂತಪೂರ್ವಕವಾಗಿ ತಿಳಿದು ಕೊಳ್ಳಬಹುದು. ಶಮದಮಾದಿಗಳಿಂದ ಚಿತ್ತಶುದ್ಧಿಯನ್ನು ಪಡೆದು, ಅನಂತರ ಸದ್ಗುರೂಪದೇಶದಿಂದ ಬ್ರಹ್ಮಜ್ಞಾನವನ್ನಾರ್ಜಿಸಿ, ಪರಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುವುದೇ ಜೀವನ್ಮುಕ್ತಿಯ ಕ್ರಮವೆಂದು ಬೋಧಿಸಿ, ಈ ಜೀನ್ಮುಕ್ತಿಯನ್ನು ಸಾಧಿಸಲು ಸುಲಭವಾದ ಭಕ್ತಿಯೋಗವನ್ನು ನಿರೂಪಿಸುವನು. ಭಕ್ತಿಯೆಂದರೆ ತಾನು ಮಾಡಿದ ಸಮಸ್ತ ಕರ್ಮಗಳನ್ನು ಈಶ್ವರಾರ್ಪಣಮಾಡಿ, ಪರಮಾತ್ಮನಲ್ಲಿ ನಿವೇದನಮಾಡುವುದೇ ಪರಮಭಕ್ತಿ ಸ್ವರೂಪ. ಭಕ್ತಿಯು ಸಾಕಾರ ಬ್ರಹ್ಮನನ್ನು ಉಪಾಸನೆ ಮಾಡುವುದಾದರೂ, ಅದರಿಂದ ದೊರೆಯುವುದು ನಿರಾಕಾರ

ಬ್ರಹ್ಮ ಜ್ಞಾನವೇ; ಇದರಲ್ಲಿ ಸಂಶಯವಿಲ್ಲ. ಆದ್ದರಿಂದ ಯಾರು ಬ್ರಹ್ಮಜ್ಞಾನವನ್ನು ಸಾಧಿಸಲು ಅಸಮರ್ಥರೋ, ಬ್ರಹ್ಮ ಜ್ಞಾನೋಪದೇಶವು ಯಾರಿಗೆ ಸರಿಯಾದ ಗುರುವಿನಿಂದ ದೊರೆಯಲಾರದೋ, ಅಂತಹವರು ಭಕ್ತಿಮಾರ್ಗದಲ್ಲಿ ಹೋಗಿ ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂಬುದೇ ಈ ಗ್ರಂಥದ ಮುಖ್ಯಾಭಿಪ್ರಾಯ.

ಈ ಶಿವಗೀತೆಯು ಪ್ರಪಂಚದಲ್ಲಿ ಕಂಡುಬರುವ ಎಲ್ಲಗೀತೆಗಳಿಗೂ ಮೂಲ ಪ್ರತಿಯಂತಿದೆ. ಇದರಲ್ಲಿರುವ ಅನೇಕ ವಿಷಯಗಳು ಇತರಗೀತೆಗಳಲ್ಲಿ ಚರ್ವಿತಚರ್ವಮವಾಗಿ ಬಂದಿವೆ. ಉದಾಹರಣೆಗೆ, 'ಯತ್ಕರೋಷಿ ಯದಶ್ನಾಸಿ;' 'ಅಪಿಚೇತ್ಸು ದುರಾಚಾರೋ' ಇತ್ಯಾದಿ ಅನೇಕಶ್ಲೋಕಗಳು ಭಗವದ್ಗೀತೆ ಯಲ್ಲಿಯೂ ಬಂದಿವೆ. ಶಿವಗೀತೆಯಲ್ಲಿ ಬ್ರಹ್ಮಜ್ಞಾನವನ್ನು. ಉಪದೇಸಿಸಿರುವ ಮಾರ್ಗವೇ ಭಗವದ್ಗೀತೆಯಲ್ಲಿಯೂ ಅನುಸರಿಸಲ್ಪಟ್ಟಿರುವುದು. ಶಿವಗೀತೆಯ ವಿಶ್ವರೂಪದರ್ಶನವೇ ಭಗವದ್ಗೀತೆಯ ವಿಶ್ವರೂಪದರ್ಶನ. ಭಗವದ್ಗೀತೆಯಲ್ಲಿ ಹೇಳಿರುವ ಅನೇಕ ಮಾರ್ಗಗಳು ಒಂದು ವೇಳೆ ಓದುವವರ ಮನಸ್ಸಿಗೆ ಕಠಿನವಾಗಿ ಕಂಡುಬರಬಹುದು.

ಶಿವಗೀತೆಯಲ್ಲಿ ಭಕ್ತಿ, ಜ್ಞಾನ, ಇವೆರಡಕ್ಕೇ ಪ್ರಾಶಸ್ತ್ಯ ಕೊಟ್ಟು, ಸಾಮಾನ್ಯ ಮಾನವನೂ ಸುಲಭವಾಗಿ ಅನುಸರಿಸುವಂತಹ ಮಾರ್ಗವನ್ನು ಉಪದೇಶಿಸಿದ್ದಾರೆ. ವಿರಜಾದೀಕ್ಷಾಕ್ರಮ, ಪಾಶುಪತವ್ರತವಿಧಾನ, ಇವೆರಡನ್ನು ಮತ್ತಾವಗ್ರಂಥದಲ್ಲಿಯೂ ಇಷ್ಟು ಸುಲಭವಾಗಿ ತಿಳಿಸಿಲ್ಲ. ಅರ್ಥವನ್ನರಿತು ಶ್ರದ್ಧಾ ಭಕ್ತಿಯಿಂದ ಈ ಗೀತೆಯನ್ನು ಮನಃಪೂರ್ವಕವಾಗಿ ಓದಿದವರು ಇದರಲ್ಲಿ ಹೇಳಿರುವ ವಿಷಯಗಳನ್ನು ನಿಜವಾಗಿಯೂ ತಮ್ಮ ಜೀವನ ಮಾರ್ಗದಲ್ಲಿ ಅನುಷ್ಠಾನಕ್ಕೆ ತರಬಹುದು. ಅದರಿಂದ ಪರಮೇಶ್ವರಾನುಗ್ರಹವನ್ನು ಪಡೆದು, ಪರಬ್ರಹ್ಮಸಾಕ್ಷಾತ್ಕಾರವನ್ನು ಸಾಧಿಸಬಹುದು. ಈ ಶಿವಗೀತೆಯು, ಕಥಾಸರಣಿಯಲ್ಲಿ, ಉಪದೇಶವಿಧಾನದಲ್ಲಿ, ವಿಷಯನಿರೂಪಣೆಯಲ್ಲಿ, ಬಾಲ ವೃದ್ಧರಿಗೂ ಉಪಯೋಗವಾಗುವಂತೆ ರಚಿತವಾಗಿದೆ. ದೇಹೋತ್ಪತ್ತಿ ಕ್ರಮ, ದೇಹದಸ್ವರೂಪ, ಇವುಗಳನ್ನು ಇಲ್ಲಿ ಓದುವಾಗ ಪ್ರತಿಯೊಬ್ಬರಿಗೂ ತಮ್ಮ ತಮ್ಮ ದೇಹದಲ್ಲಿ ಜುಗುಪ್ಸೆಯುಂಟಾಗದೇ ಇರದು. ಹೀಗೆ ಇಹಪರಸಾಧಕವಾಗಿ, ಪರಮೇಶ್ವರಪ್ರೋಕ್ತವೆನಿಸಿ, ಬಹುವಿಷಯಗಳಿಂದ ಗರ್ಭಿತವಾಗಿರುವ ಶೈವಗ್ರಂಥರತ್ನ ವಾದ ಈ ಶಿವಗೀತೆಯು ಕನ್ನಡದಲ್ಲಿ ಪರಿವರ್ತನೆಯಾಗಿ ಬಂದಿರುವುದ ರಿಂದ ಸರ್ವಜನಾದರಣೀಯವಾಗಿ ಹರಡುವುದರಲ್ಲಿ ಸಂಶಯವೆ ಇಲ್ಲ ಎಂದು ಅರ್ಥಪೂರ್ಣವಾಗಿ ಬರೆದಿದ್ದಾರೆ. ಅನೇಕ ಪುಸ್ತಕಗಳಿಗೆ ಸಂಪಾದಕತ್ವ ವಹಿಸಿರುವ ಸ್ವಾಮಿಗಳಿಗೆ, ಕನ್ನಡ ಭಾಷೆಯ ಬಗ್ಗೆ ಅವರಿಗಿದ್ದ ಕಾಳಜಿ ಮತ್ತು ಸಂಸ್ಕೃತವನ್ನರಿಯದ ಜನಸಾಮಾನ್ಯಕ್ಕೆ, ಕನ್ನಡಿಯ ಗಂಟಿನಂತೆ ಪುಸ್ತಕ ಮಾತ್ರದಲ್ಲಿದ್ದು, ಇದು ಕರಗತವಾಗಿ ಇದರಿಂದ ಸರ್ವರೂ ಜ್ಞಾನವನ್ನು ಪಡೆಯಲೆಂಬ ಸದುದ್ದೇಶದಿಂದ, ಕನ್ನಡ ಭಾಷೆಗೆ ಅಡಿಯಿಟ್ಟು, ಕನ್ನಡ ಜನಾಂಗಕ್ಕೆ, ಮಹೋಪಕಾರವೆನ್ನಗಿಸಿದೆ ಮತ್ತು ಕನ್ನಡ ಭಾಷೆಗೆ ಪರಿವರ್ತಿತವಾಗಿ ಕನ್ನಡಿಗರೆಲ್ಲರಿಗೂ ಸುಲಭವಾಗಿ ದೊರೆಯುವಂತಾಗಬೇಕು ಎಂದಿದ್ದಾರೆ. ಅಲ್ಲದೆ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರ ಬಗ್ಗೆ ಅಪಾರ ಗೌರವವಿದ್ದು. "ಮಹಾಪ್ರಭುಗಳ ಪ್ರೋತ್ಸಾಹ ದಿಂದಲೂ, ಸಂಪೂರ್ಣ ಸಹಾಯದಿಂದಲೂ ಅನೇಕ ಪ್ರಾಚೀನ ಗ್ರಂಥಗಳು ಪ್ರಕಾಶಕ್ಕೆ ಬರುವಂತೆ ಮಾಡಿದ್ದಾರೆ ಎಂದು ಗೌರವದಿಂದ ಬರೆದಿದ್ದಾರೆ.

ಸ್ವಾಮಿಗಳು ಅನೇಕ ಪುಸ್ತಕಗಳಿಗೆ ಸಂಪಾದಕರಾಗಿ ಕೆಲಸ ಮಾಡಿರುವುದು ತಿಳಿದು ಬರುತ್ತದೆ. ಅವುಗಳಲ್ಲಿ 'ಗುರುಗೀತಾ' ಪುಸ್ತಕವು ಒಂದು. ಈ ಪುಸ್ತಕಕ್ಕೆ ಬರೆದ ಪ್ರಸ್ತಾವನೆಯಲ್ಲಿ "ಸಂಸಾರ ಸಾಗರದ ಮಹಾಸುಳಿಗಳಿಗೆ ಸಿಕ್ಕಿ ಸುತ್ತುವ ಜನಸಮುದಾಯವು ಶಾಂತವಾದ ಪರಮಾತ್ಮ ಸಾನ್ನಿಧ್ಯವನ್ನು ಪಡೆಯಬೇಕಾದರೆ, ಆಸ್ತಿಕ ಧರ್ಮವನ್ನೇ ಅವಲಂಬಿಸಿಬೇಕು. ಆಸ್ತಿಕ ಧರ್ಮವೇ ನಮಗೆ ನಮ್ಮ ಪ್ರಾಚೀನರು ಗಳಿಸಿಕೊಟ್ಟಿರುವ ಸ್ಥಿರವಾದ ನಿಧಿ. ಅದು ನಾನಾಮುಖವಾಗಿ ಬೆಳೆದಿದೆ. ವೇದ, ಶಾಸ್ತ್ರ,ಪುರಾಣ ಇವು ಆಸ್ತಿಕಧರ್ಮವನ್ನು ಬೆಳಗಿಸುವ ವಿಸ್ತಾರವಾದ ಉದ್ಯಾನಗಳು. ಇವು ವಿಶಾಲವಾಗಿ ಬೆಳೆದು ಸಮಸ್ತ ಮಾನವರಿಗೂ ವಿಹಾರಸ್ಥಳ ಗಳೆನಿಸಿವೆ. ಆದರೇನು! ಈ ಸುಂದರ ವನಗಳು ಬಹಳ ದೊಡ್ಡವು. ಈ ಗ್ರಂಥರಾಶಿಯನ್ನೆಲ್ಲಾ ಪೂರ್ಣವಾಗಿ ಅಧ್ಯಯನಮಾಡಿ, ಅದರ ಸಾರಾಸಾರವನ್ನೆಲ್ಲಾ ಗ್ರಹಿಸಿ, ಆತ್ಮಜ್ಞಾನವ್ನು ಸಾಧಿಸಲು ಎಲ್ಲರಿಗೂ ಸಾಧ್ಯವಾಗದು. ಅದರಲ್ಲಿಯೂ ಹಾಹಾಕಾರದಿಂದ ಸ್ವಾರ್ಥ ಪರರಾಗಿ ಚಂಚಲ ಮನಸ್ಸಿನಿಂದ ಹಾರಾಡುವ ಇಂದಿನ ಜನತೆಗಂತೂ ಸಾಧ್ಯವೇ ಇಲ್ಲ. ಪ್ರಪಂಚವು ಆಸ್ತಿಕಧರ್ಮ ವಿಷಯದಲ್ಲಿ ಕ್ರಮಕ್ರಮವಾಗಿ ವಿಮುಖವಾಗುವುದೆಂಬುದನ್ನು ಸರ್ವಜ್ಞರಾದ ನಮ್ಮ ಮಹರ್ಷಿಗಳು ಮೊದಲೇ ಅರಿತು, ಪ್ರತಿ ಪುರಾಣದಲ್ಲಿಯೂ ಒಂದೊಂದು ಭಾಗವನ್ನು ಶಾಸ್ತ್ರಸಾರವನ್ನಾಗಿ ಮಾಡಿ ನಿರೂಪಿಸಿರುವರು. ಆ ಭಾಗಗಳನ್ನು ಪೂರ್ಣವಾಗಿ ಓದುವುದರಿಂದಲೇ ಆಸ್ತಿಕ ಧರ್ಮಸ್ವರೂಪವು ತಿಳಿದಂತಾಗುವುದು. ಅಂತಹ ಮುಖ್ಯಭಾಗಗಳೇ ಗೀತೆಗಳು.

ಈಗ ಮಹಾಭಾರತವು ಐದನೆಯ ವೇದವೆಂಬ ವಿಶೇಷ ಖ್ಯಾತಿಯನ್ನು ಪಡೆದಿರುವುದು ಅಧ್ಯಾತ್ಮದ ತಿರುಳಾಗಿರುವ ಭಗವದ್ಗೀತೆಯಿಂದ ಹಾಗೆಯೇ ಪದ್ಮ ಪುರಾಣದ ಮಹಿಮೆಯು ಬೆಳಗುತ್ತಿರುವುದು ಶಿವಜ್ಞಾನ ದೀಪದಂತಿರುವ ಶಿವಗೀತೆ ಯೊಂದರಿಂದಲೇ. ಈ ಗುರುಗೀತೆಯಿಂದ ಸ್ಕಾಂದಪುರಾಣವೇ ಅಜ್ಞಾನ ತಿಮಿರ ಭಾಸ್ಕರನಂತೆ ಪ್ರಕಾಶಕ್ಕೆ ಬಂದಿದೆ. ಹೀಗೆಯೇ ಸೂರ್ಯಗೀತೆ, ದತ್ತಾತ್ರೇಯ ಗೀತೆ, ಶುಕಗೀತೆ ಇತ್ಯಾದಿ

ಗೀತಾಗ್ರಂಥಗಳು ವೇದಾಂತ ಜ್ಞಾನದ ಸಾರವಾಗಿ ನಿಂತಿವೆ. ಈ ಗೀತೆಗಳಲ್ಲಿ ಎಲ್ಲ ಸಂಶಯಕ್ಕೂ ಉತ್ತರವಿದೆ. ಎಲ್ಲ ವ್ಯಾಧಿಗಳಿಗೂ ಒಂದೇ ಔಷಧವಾದ ಸಂಜೀವಿನಿಯಂತೆ, ಸಕಲ ಮಾನವರಿಗೂ, ಈ ಗೀತೆಗಳು ಧರ್ಮೋಪದೇಶಕಗಳಾಗಿವೆ. ಪ್ರತಿಗೀತೆಗಳಲ್ಲಿಯೂ ಒಂದೊಂದು ವೈಶಿಷ್ಟ್ಯವಿದೆ. ಎಲ್ಲಗೀತೆಗಳಲ್ಲಿಯೂ ವಿಷಯವು ಸಂಭಾಷಣಾ ರೂಪದಿಂದಿರುವುದು. ಆ ಸಂಭಾಷಣೆಯಲ್ಲಿ ಭಾಗವಹಿಸುವವರಿಬ್ಬರೂ ದೇವಾಂಶ ಪುರುಷರೇ. ದೇವರಲ್ಲಿ, ದೇವತಾ ಕಾರ್ಯದಲ್ಲಿ ಜಗತ್ತಿನ ಸೃಷ್ಟಿಸ್ಥಿತಿ ಲಯಕರ್ಮಗಳಲಿ, ಸಾಮಾನ್ಯವಾಗಿ ಎಲ್ಲರಿಗೂ ಯಾವ ಯಾವ ಸಂಶಯ ಗಳಿರುವುವೋ, ಅದೇ ಸಂಶಯಗಳಿಗೆ ಉತ್ತರವನ್ನು ಹೇಳಿ ಎಲ್ಲ ಗೀತೆಗಳೂ ಆಸ್ತಿಕರ ಮನಸ್ಸನ್ನು ಸಮಾಧಾನಗೊಳಿಸುವುವು. ಈ ಗೀತೆಗಳಲ್ಲಿ ಬರುವ ಕೆಲವು ವಾಕ್ಯಗಳಂತೂ ಪ್ರಭು ಸಮ್ಮಿತೆಯ ವೇದವಾಕ್ಯಗಳಂತೆ, ಆಜ್ಞಾ ರೂಪದಲ್ಲಿರುವುವು. ಅಸನ್ಮಾರ್ಗಾ ವಲಂಬಿಗಳಿಗೆ ಆ ಮಾತುಗಳು ಚಾವಟಿಯ ಪೆಟ್ಟಿನಂತೆ ಎಚ್ಚರಿಕೆ ಕೊಡುವುವು. ಉದಾಹರಣೆಗೆ, ಈ ಗುರುಗೀತೆಯಲ್ಲಿ ಗುರುಗಳ ಮತ್ತು ಸಂನ್ಯಾಸಿಗಳ ಸ್ವರೂಪವನ್ನು ವಿವರಿಸುತ್ತಾ, ಅವರನ್ನು ಪರಬ್ರಹ್ಮಸ್ವರೂಪರೆಂದು ಸಿದ್ಧಾಂತಗೊಳಿಸಿ.

> ಗುರುರೇಕೋ ಜಗತ್ಸರ್ವಂ ಬ್ರಹ್ಮವಿಷ್ಣುಶಿತಿವಾತ್ಮಕಂ।
> ಗುರೋಃ ಪರತರಂ ನಾಸ್ತಿ ತಸ್ಮಾತ್ಸಂಪೂಜಯೇದ್ಗುರುಂ॥

ಇತ್ಯಾದಿ ಶ್ಲೋಕಗಳಿಂದ ಅವರನ್ನು ವಿಶೇಷವಾಗಿ ಶ್ಲಾಘಿಸಿದರು. ಆದರೆ ಯಾರು ಆತ್ಮ ಜ್ಞಾನಿಗಳಲ್ಲವೋ, ಯಾರು ಸ್ವಾರ್ಥದೃಷ್ಟಿಯಿಂದ ಜ್ಞಾನಿಯಂತೆ ನಟಿಸುವರೋ ಅವರು ನಿಜವಾಗಿಯೂ ಸಂನ್ಯಾಸಿಗಳಲ್ಲ; ವೇಷಧಾರಿಗಳು.

> ಸತ್ಕಾರಮಾನ ಪೂಜಾರ್ಥಂ ದಂಡಕಾಷಾಯಧಾರಕಃ।
> ಸ ಸಂನ್ಯಾಸೀ ನ ವಕ್ತವ್ಯಃ ಸಂನ್ಯಾಸೀ ಜ್ಞಾನತತ್ಪರಃ।
> ವಿಜಾನಂತಿ ಮಹಾವಾಕ್ಯಂ ಗುರೋಶ್ಚರಣಸೇವಯಾ।
> ತೇ ವೈ ಸಂನ್ಯಾಸಿನಃ ಪ್ರೋಕ್ತಾ ಇತರೇ ವೇಷಧಾರಿಣಃ॥

ಹೀಗೆಂದು ನಿರ್ದಾಕ್ಷಿಣ್ಯವಾಗಿ ಖಂಡಿಸಿಬಿಡುವರು. ವೇದೋಪನಿಷತ್ತುಗಳಲ್ಲಿ ಬರುವ ವಿಷಯುವೇ ಇಲ್ಲಿ ಬರುವುದಾದರೂ ಇಲ್ಲಿ ಬರೆದಿರುವ ಕ್ರಮವು ಬಹು ಸುಲಭವಾದುದು; ಲಲಿತವಾದುದು. ಓದುವಾಗಲೇ ಎಲ್ಲರಿಗೂ ಅರ್ಥವಾಗುವಂತೆ ಲೌಕಿಕವಾದ ಉದಾಹರಣೆಗಳಿಂದ ದುರ್ಜ್ಞೇಯ ವಾದ ಆತ್ಮಸ್ವರೂಪವನ್ನು ಸುಲಭವಾಗಿ ವಿವರಿಸಿರುವರು

> ಸಮುದ್ರೇ ವೈ ಯಥಾ ತೋಯಂ ಕ್ಷೀರೇ ಕ್ಷೀರಂ ಜಲೇ ಜಲಂ।
> ಭಿನ್ನೇ ಕುಂಭೇ ಯಥಾಕಾಶಂ ತಥಾತ್ಮಾ ಪರಮಾತ್ಮನಿ॥
> ತಥೈವ ಜ್ಞಾನವಾನ್ ಜೀವಃ ಪರಮಾತ್ಮನಿ ಸರ್ವದಾ॥

ನೀರಿನಲ್ಲಿ ನೀರು ಸೇರುವಂತೆ, ಹಾಲಿನಲ್ಲಿ ಹಾಲು ಐಕ್ಯವಾಗುವಂತೆ, ಘಟಾಕಾಶವು ವಿಶಾಲಾಕಾಶವಾಗುವಂತೆ, ಜೀವನು ಬ್ರಹ್ಮಜ್ಞಾನಸಾಧನೆಯಿಂದ ಪರಬ್ರಹ್ಮನೇ ಆಗುವನು, ಎಂಬ ಲೌಕಿಕದೃಷ್ಟಾಂತವು ಎಷ್ಟು ಸುಲಭವಾಗಿ ಅದ್ವೈತತತ್ತ್ವವನ್ನು ಮನಸ್ಸಿಗೆ ತಂದುಕೊಡುವುದು? ಇದೇ ರೀತಿ, ಭಕ್ತಿ, ಜ್ಞಾನ, ವೈರಾಗ್ಯ ಇವುಗಳನ್ನು ಸಾಧಿಸುವವರಿಗೆ, ಅನೇಕ ವಿಷಯಗಳು ಯುಕ್ತಿಯುಕ್ತವಾಗಿ ಇಂತಹ ಗೀತಾಗ್ರಂಥಗಳಲ್ಲಿ ವಿಫುಲವಾಗಿ ದೊರೆಯುವುವು.

ನಮಗೆ ದೊರೆತಿರುವ ಎಲ್ಲ ಗೀತೆಗಳಿಗೂ ಗುರುಗೀತೆಯನ್ನೇ ಆದಿಯೆಂದೂ, ಮುಖ್ಯವೆಂದೂ ಹೇಳಬಹುದಾಗಿದೆ. ಏಕೆಂದರೆ ಯಾವ ಗೀತೆಗಳ ಗೂಢಾರ್ಥವಾದರೂ ಗುರ್ವನುಗ್ರಹವಿಲ್ಲದೆ ಸಿದ್ಧಿಸಲಾರದು. ಸದ್ಗುರುವು ದೊರೆಯದಿದ್ದರೆ ಏನಿದ್ದರೂ ಎಲ್ಲವೂ ವ್ಯರ್ಥವೇ ಸರಿ. ಸೂರ್ಯನಿಲ್ಲದ ಜಗತ್ತಿನಂತೆ, ದೀಪವಿಲ್ಲದ ಕೋಣೆಯಂತೆ, ಜೀವವಿಲ್ಲದ ದೇಹದಂತೆ, ಗುರುವಿಲ್ಲದ ವಿದ್ಯೆಯು ವ್ಯರ್ಥವೆನಿಸುವುದು. ಆದರೆ ಎಲ್ಲರಿಗೂ ಸರಿಯಾದ ಗುರುವು ಲಭಿಸುವುದು ಕಷ್ಟ. ಗುರುವಿನ ಉಪದೇಶ ಪಡೆಯುವವರಿಗೆ ಸದ್ಗುರುವಿನ ಸ್ವಭಾವ ತಿಳಿದಿರಬೇಕು. ಸದ್ಗುರೂಪದೇಶವಿಲ್ಲದೆ ಮೋಕ್ಷಜ್ಞಾನವು ಎಂದಿಗೂ ದೊರೆಯಲಾರದು. ಅದಕ್ಕಾಗಿ ಮೋಕ್ಷಾಪೇಕ್ಷೆಯುಳ್ಳವರೂ ಮೊದಲು ಈ ಗುರುಗೀತೆಯನ್ನೋದಿ, ಅದರಲ್ಲಿ ಹೇಳಿರುವ ಲಕ್ಷಣಗಳಿಂದ ಸದ್ಗುರುವನ್ನು ಅರಸಿ, ಆ ಗುರುವಿನ ಅನುಗ್ರಹಕ್ಕೆ ಪಾತ್ರರಾಗಿ ಮುಕ್ತಿ ಮಾರ್ಗವನ್ನು ಪಡೆಯಬೇಕು. ಈ ಗುರುಗೀತೆಯು, "ಸದ್ಗುರುವನ್ನು ಪರಮಾತ್ಮ ನೆಂದರಿಯಬೇಕು" ಎಂಬ ತತ್ತ್ವವನ್ನು ಸಾರುತ್ತಾ ಮೊದಲಿನಿಂದಲೂ ಸಾಧಕನು ಗುರುಭಕ್ತಿಯಲ್ಲಿ ಸ್ಥಿರಬುದ್ಧಿಯುಳ್ಳ ವನಾಗುವಂತೆ ಮಾಡುತ್ತದೆ. ಶಿಷ್ಯನು ಗುರುವನ್ನು ಟೀಕೆಮಾಡ ಕೂಡದು. ಗುರುವಿನ ಗುಣಾವಗುಣಗಳನ್ನು ಶಿಷ್ಯನು ಗಮನಿಸ ಬಾರದು. ಪರಮೇಶ್ವರ ಭಾವನೆಯಿಂದ ಗುರುವನ್ನು ಆದರಿಸಬೇಕು; ಹಾಗೆಯೇ ಸದ್ಗುರುವೂ ಸಹ ಶಿಷ್ಯಾದಿಗಳಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಕೇವಲ ಆತ್ಮಧ್ಯಾನನಿರತನಾಗಿರಬೇಕು. ಅಷ್ಟೇ ಅಲ್ಲದೆ ತಾನು ಆತ್ಮ ಸಾಕ್ಷಾತ್ಕಾರ ಮಾಡಿ ಕೊಂಡಿರುವಂತೆ ಶಿಷ್ಯನಿಗೂ ಆತ್ಮಜ್ಞಾನ ವನ್ನುಂಟುಮಾಡಬೇಕು. ಇತ್ಯಾದಿ ಕರ್ತವ್ಯಾಂಶಗಳನ್ನು ಸೂಚಿಸಿ ಈ ಗುರುಗೀತೆಯು ಗುರುಶಿಷ್ಯರಿಬ್ಬರಿಗೂ ಪ್ರಬೋಧ ಜನಕವಾಗಿರುತ್ತದೆ.

ನಿರ್ಗುಣನಿರಾಕಾರವಾದ ಪರಬ್ರಹ್ಮವು ಸಗುಣವಾಗಿ ನಾನಾರೂಪದಿಂದ ಜಗತ್ತಿನಲ್ಲಿ ಕಂಡುಬರುವುದಾದರೂ, ನಿರ್ಗುಣಬ್ರಹ್ಮನು, ದೇಹಧಾರಿಯಾಗಿ ಸ್ವಸ್ವರೂಪವನ್ನರಿತು ಸಂಚರಿಸುತ್ತಿರುವುದು ಗುರುರೂಪದಿಂದಲೇ. ಇದರಲ್ಲಿ ಸಂಶಯವಿಲ್ಲ. ನಮ್ಮ ಸ್ಥೂಲದೃಷ್ಟಿಗೆ ಈಗ ಯಾರು ಯಾರು ಜನರ ಅಜ್ಞಾನ ನಿವೃತ್ತಿಗಾಗಿ ಶ್ರಮಿಸಿ ಸಿದ್ಧಿಯನ್ನು ಕಂಡಿರುವರೋ ಅವರೆಲ್ಲರೂ ಗುರ್ವನುಗ್ರಹದಿಂದ ಪ್ರಕಾಶಿತರಾದವರೇ. ಪರಾಶರ ಪುತ್ರರಾದ ವ್ಯಾಸರು, ವ್ಯಾಸ ಶಿಷ್ಯರಾದ ಜೈಮಿನಿಮಹರ್ಷಿಗಳು,

ಗೋವಿಂದಭಗವತ್ಪಾದರ ಅನುಗ್ರಹ ಪಾತ್ರರಾದ ಶ್ರೀ ಶಂಕರಾಚಾರ್ಯರು, ಪ್ರಭುದೇವರ ಶಿಷ್ಯರಾದ ಬಸವೇಶ್ವರದೇವರು, ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ವಿವೇಕಾನಂದರು, ಇವರೆಲ್ಲರೂ ಶ್ರೀ ಗುರು ಪ್ರಸಾದದಿಂದಲೇ ಲೋಕಪೂಜ್ಯ ರಾದವರು. ಗುರುಗೀತೆಯಲ್ಲಿ ಗುರ್ವನುಗ್ರಹ ಫಲವನ್ನು ಓದುವಾಗ, ಮೇಲೆ ಹೇಳಿದ ಮಹನೀಯರ ಸ್ಮರಣೆಯು ಬರದೇ ಇರಲಾರದು. ಹೀಗೆ ಸರ್ವೇಶ್ವರನೂ, ಸರ್ವಾಂತರ್ಯಾಮಿಯೂ ಆದ ಪರಮಾತ್ಮನ ಸ್ವರೂಪವು ಪ್ರತ್ಯಕ್ಷವಾಗಬೇಕಾದರೆ ಗುರುವೆಂಬ ತೇಜೋ ಮೂರ್ತಿಯು ಬೇಕೇಬೇಕು. ಪರಶಿವನ ಅನುಗ್ರಹವನ್ನು ಗುರುವು ತಡೆಯಬಲ್ಲನು. ಅಂದರೆ ಶಿವದ್ರೋಹಿಗಳನ್ನು ಗುರುವು ಉದ್ಧರಿಸಬಲ್ಲನು. ಆದರೆ ಗುರು ದ್ರೋಹಿಗಳನ್ನು ಶಿವನುದ್ಧರಿಸಲಾರನು ಎಂಬ ಮಾತು ಇದೇ ಗುರುಗೀತೆಯಲ್ಲಿಯೇ ಇರುವುದು. ಇದರಿಂದ ಸದ್ಗುರುವು ಪರಶಿವಸ್ವರೂಪನಷ್ಟೇನಲ್ಲ. ಅದಕ್ಕಿಂತಲೂ ಅಧಿಕನೆಂದು ಹೇಳಿದಂತಾಗುವುದು. ಇದನ್ನರಿತೇ ಸತ್ಯ ಹರಿಶ್ಚಂದ್ರನು ಗುರುವಾದ ವಿಶ್ವಾಮಿತ್ರನಿಗೆ ಬಹಳವಾಗಿ ಹೆದರಿದನು. ಸದ್ಧರ್ಮನಿರತನಾಗಿ, ಶಿವಾನುಗ್ರಹಕ್ಕೆ ಪೂರ್ಣ ಪಾತ್ರನಾಗಿದ್ದ ಹರಿಶ್ಚಂದ್ರನು ವಿಶ್ವಾಮಿತ್ರನನ್ನು ತಿರಸ್ಕರಿಸಿ ಬಹುದಾಗಿದ್ದಿತು. ಹಾಗೆ ಮಾಡಲಿಲ್ಲ. ಏಕೆಂದರೆ ಗುರುವು ಶಿವನಿಗಿಂತಲೂ ಅಧಿಕನೆಂಬ ಭಾವ ಅವನಲ್ಲಿತ್ತು. ಕೊನೆಗೂ ಹರಿಶ್ಚಂದ್ರರಾಜನು ಗುರ್ವನುಗ್ರಹದಿಂದಲೇ ಮುಕ್ತಿಯನ್ನು ಗಳಿಸಿದನು. ಹೀಗೆ ಸಚ್ಚರಿತರಾಗಿ ಸತ್ಪುರುಷರು ವಿದೇಹ ಕೈವಲ್ಯವನ್ನು ಹೊಂದಿದ ಮಹಾಪುರುಷರ ದಿವ್ಯಜೀವನಕ್ರಮವನ್ನರಿತು, ಈ ಗುರುಗೀತೆಯನ್ನು ಓದಿದವರು ನಿಜವಾಗಿಯೂ ಗುರುವು ಯಾರು? ಗುರುವಿನ ಮಹಿಮೆ ಸಾಮರ್ಥ್ಯಗಳೇನು? ಎಂಬುದನ್ನು ಪೂರ್ಣವಾಗಿ ಮನಗಾಣುವರು." ಎಂದು ಬರೆದಿದ್ದಾರೆ.

ಕರ್ನಾಟಕದಲ್ಲಿ ಅನೇಕ ಚಿತ್ರ, ಶಿಲ್ಪಕಲಾ ವಿದರು ತಮ್ಮ ಕಲಾ ನೈಪುಣ್ಯದಿಂದ ಚಿರಸ್ಥಾಯಿಯಾಗಿ ಇಂದಿಗೂ ಅವರ ಹೆಸರು ಶಾಶ್ವತವಾಗಿ ಉಳಿದು ಬಂದಿದೆ. ಅದರಂತೆ ಶಿಲ್ಪಿ ಸಿದ್ಧಲಿಂಗ ಸ್ವಾಮಿಗಳು ರಚಿಸಿದ ಚಿತ್ರ, ಶಿಲ್ಪಗಳು ಎಂದೆಂದಿಗೂ ಇತಿಹಾಸದ ಪುಟದಲ್ಲಿ ಸೇರುತ್ತದೆ. ಆದರೆ ನಾವು ರಾಜರವಿವರ್ಮನಿಗೆ ನೀಡಿದ ಮನ್ನಣೆಯನ್ನು ಶ್ರೀ ಸ್ವಾಮಿಗಳಿಗೆ ನೀಡಲಿಲ್ಲವೆಂದರೇ ತಪ್ಪಾಗಲಾರದು. ಇವರು ರಚಿಸಿರುವ ಅನೇಕ ಚಿತ್ರಗಳು, ರಾಜ ರವಿವರ್ಮನ ಚಿತ್ರಗಳಿಗೆ ಸರಿಸಾಟಿಯಾಗಿ ನಿಲ್ಲುವಂತಹವು ಇಂದಿಗೂ ಈ ಚಿತ್ರಗಳನ್ನು ಮೈಸೂರಿನ ಅರಮನೆಯಲ್ಲಿ ಕಾಣಬಹುದು.

ಮೈಸೂರಿನ ರಾಮಾನುಜ ರಸ್ತೆಯು ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳ ಕಾರ್ಯಕ್ಷೇತ್ರವಾಗಿತ್ತು ಮತ್ತು ಪ್ರತಿ ನಿತ್ಯ ಅನೇಕ ದೇವ ದೇವಿಯರ ವಿವಿಧ ಅಳತೆಗಳ ಶಿಲಾ ಮೂರ್ತಿಗಳು, ಗುರುಕುಲಾಶ್ರಮದಿಂದ ಹೋಗುತ್ತಿದ್ದ ದೃಶ್ಯ ಸರ್ವೆ ಸಾಮಾನ್ಯ ವಾಗಿತ್ತು. ಈ ವಿಗ್ರಹಗಳು ಕರ್ನಾಟಕವಲ್ಲದೆ, ಭಾರತದ ವಿವಿಧ ರಾಜ್ಯಗಳಿಗೂ ಹೋಗುತ್ತಿದ್ದವು. ತಮ್ಮ ಕಲಾ ಪ್ರೌಢಿಮೆಯಿಂದ ಮತ್ತು ವಿದ್ವತ್ತಿನಿಂದ ಪ್ರಸಿದ್ಧರಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಕರ್ನಾಟಕದ ಕಲಾ ಚರಿತ್ರೆಯಲ್ಲಿ ಎಂದೆಂದಿಗೂ ಉಳಿಯುವಂತಹ ಕಲಾವಿದರು.

❑

ಶಿಲ್ಪಸಿದ್ಧಾಂತಿಗಳು ಪ್ರತಿಭಾವಂತ ಶಿಲ್ಪಿಗಳಾಗಿದ್ದಂತೆ ಉತ್ತಮ ಚಿತ್ರಗಾರರೂ ಹೌದು. ನನ್ನ ಅವರ ಪರಿಚಯವಾಗಲು ಅವರ ಚಿತ್ರಗಳೇ ಕಾರಣ.


-ಅ. ನ. ಕೃ

✣ ✣ ✣

ಶಿಲ್ಪ ಸಿದ್ಧಾಂತಿಗಳು ಜೀವನದಲ್ಲಿ ಬಹಳ ಮುಂದೆ ನಡೆದರು. ಇವರು ಒಂದು ಮಠದ ಆಚಾರ್ಯರಾದುದಲ್ಲದೆ, ಪ್ರಭುಗಳ ಪೂರ್ಣ ಕಟಾಕ್ಷಕ್ಕೆ, ಪಾತ್ರರಾದರು. ಅರಮನೆಯ ವರ್ತುಲದಲ್ಲಿ ಇವರ ಮಾತು ವೇದ ವಾಕ್ಯವಾಯಿತು.


-ಅ. ನ. ಕೃ.

ಈ ಪುಸ್ತಕದ ಲೇಖಕರು



ಸಿ. ಪರಮೇಶ್ವರಾಚಾರ್

ಕರ್ನಾಟಕದ ಶಿಲ್ಪಕಲಾ ಕೀರ್ತಿ ಪತಾಕೆಯನ್ನು ವಿದೇಶಗಳಲ್ಲಿ ಮೆರೆಸಿದವರಲ್ಲಿ ಸಿ. ಪರಮೇಶ್ವರಾಚಾರ್ ಮುಖ್ಯರಾದವರು. ಹೆಸರಾಂತ ಶಿಲ್ಪಿಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಶಿಷ್ಯರಾಗಿ, ಶಾಸ್ತ್ರೋಕ್ತವಾಗಿ ಶಿಲ್ಪಕಲಾಭ್ಯಾಸ ಮಾಡಿದರು. ಮೈಸೂರಿನ ಭುವನೇಶ್ವರಿ ಮತ್ತು ಕಾಮಕಾಮೇಶ್ವರಿ ದೇವಾಲಯದ ಶಿಲ್ಪ ಕಾರ್ಯಗಳಲ್ಲಿಪಾಲುಗೊಂಡು, ನಂತರ ವಿಧಾನ ಸೌಧದ ರಚನೆಯ ವೇಳೆಯಲ್ಲಿ ಅಲ್ಲಿಯ ಮರಗೆತ್ತನೆ ಮತ್ತು ಗಾರೆಯ ವಿನ್ಯಾಸಗಳ ಮೇಲ್ವಿಚಾರಕರಾಗಿದ್ದರು. ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಅನೇಕ ಶಿಲ್ಪಗಳನ್ನು ರಚಿಸಿದ್ದು ಜಗತ್‌ಪ್ರಸಿದ್ಧವಾಗಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಇವರಿಗೆ ಕರ್ನಾಟಕ ಸರ್ಕಾರ ನೀಡುವ 'ಜಕಣಾಚಾರಿ' ಪ್ರಶಸ್ತಿ ವಿಜೇತರು ಮತ್ತು ಪ್ರಸ್ತುತ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರು. ತಮ್ಮ ಗುರುಗಳ ಬಗ್ಗೆ ಅನಿಸಿಕೆಗಳನ್ನು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.



ಕೆ. ಸಿ. ಪುಟ್ಟಣ್ಣಾಚಾರ್

ಮೈಸೂರಿನಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ 'ಗುರುಕುಲ'ದಲ್ಲಿ ವೇದ, ಸಂಸ್ಕೃತ, ಚಿತ್ರ ಮತ್ತು ಶಿಲ್ಪಕಲೆಯನ್ನು ಕಲಿತ್ತಿದ್ದು, ಸ್ವಾಮಿಗಳ ಆಪ್ತ-ಶಿಷ್ಯರಲ್ಲಿ ಒಬ್ಬರಾಗಿದ್ದರು. ಅನಂತರ ಬೆಂಗಳೂರಿಗೆ ಬಂದು ಶಿಲ್ಪಗಳ ನಿರ್ಮಾಣದಲ್ಲಿ ತೊಡಗಿ, ಹೆಚ್ಚಾಗಿ ಹೊಯ್ಸಳ ಶೈಲಿಯ ಶಿಲ್ಪಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಅನೇಕ ಶಿಲ್ಪಗಳು ದೇಶ ವಿದೇಶಗಳಲ್ಲಿವೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ೧೯೯೭ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ತಮ್ಮ ಪೂಜ್ಯ ಗುರುಗಳ ಬಗ್ಗೆ ಕೆಲವು ವಿಷಯಗಳನ್ನು ಬರೆದಿದ್ದಾರೆ.



ಎಲ್. ಶಿವಲಿಂಗಪ್ಪ

ಸಾಹಿತ್ಯ, ಚಿತ್ರ, ಶಿಲ್ಪ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಎಲ್. ಶಿವಲಿಂಗಪ್ಪನವರು ಬಹುಮುಖ ಪ್ರತಿಭೆಯುಳ್ಳವರು. ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಗುರುಕುಲದಲ್ಲಿ ಚಿತ್ರ ಮತ್ತು ಶಿಲ್ಪಗಳ ಅಭ್ಯಾಸ ಮಾಡಿ, ನಂತರ ಬೆಂಗಳೂರಿನ ಎಂ.ಟಿ.ವಿ. ಆಚಾರ್ಯರವರಲ್ಲಿ ಉನ್ನತ ಚಿತ್ರಕಲಾ ಶಿಕ್ಷಣ ಪಡೆದಿದ್ದಾರೆ. ಮರಳಿನಲ್ಲಿ ಶಿಲ್ಪ, ಥರ್ಮೋಕೋಲ್‌ನಲ್ಲಿ ಶಿಲ್ಪ ರಚಿಸುತ್ತಿರುವುದು ಇವರ ವಿಶೇಷ. ಇವರು ಬರೆದ ಲೇಖನಗಳು, ಕಲಾ ವಿಮರ್ಶೆಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಹಾಗೂ ಛಾಯಾಗ್ರಾಹಕರು. ವಸತಿ ಸೌಕರ್ಯವುಳ್ಳ ಕಲಾ ವಿದ್ಯಾಲಯ ಸ್ಥಾಪಿಸಿ, ಕಲಾ ಶಿಕ್ಷಣ ಪಡೆಯುವವರಿಗೆ ಅವಕಾಶವೊದಗಿಸಿದ್ದಾರೆ. ಎಂ.ಟಿ.ವಿ. ಆಚಾರ್ಯರು ಸ್ಥಾಪಿಸಿದ ಅಂಚೆ ಕಲಾ ಶಿಕ್ಷಣ ಸಂಸ್ಥೆಯಾದ ಆಚಾರ್ಯ ಚಿತ್ರ ಭವನದ ಗೌರವ ಪ್ರಾಚಾರ್ಯರಾಗಿ ಶ್ರಮಿಸುತ್ತಿದ್ದಾರೆ. ಪ್ರಸ್ತುತ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿರುವ ಇವರು, ಶ್ರೀ ಸಿದ್ಧಲಿಂಗಸ್ವಾಮಿಗಳ ವ್ಯಕ್ತಿತ್ವ ದರ್ಶನವನ್ನು ಸಮಗ್ರವಾಗಿ ಬರೆದಿದ್ದಾರೆ.



ಎನ್. ಮರಿಶಾಮಾಚಾರ್

ಚಿತ್ರ, ಶಿಲ್ಪ, ಕಲಾ ಸಾಹಿತ್ಯ ಮತ್ತು ಸಂಘಟಕರಾಗಿರುವ ಎನ್. ಮರಿಶಾಮಾಚಾರ್, ಕರ್ನಾಟಕದ ಸಮಕಾಲೀನ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಕೆನ್ ಕಲಾ ಶಾಲೆಯಲ್ಲಿ ಕಲಾ ಶಿಕ್ಷಣ ಪಡೆದ ನಂತರ, ಬರೋಡಾದಲ್ಲಿ ಪ್ರೊ. ಕೆ. ಜಿ. ಸುಬ್ರಮಣ್ಯನ್‌ರವರಲ್ಲಿ ಕಲಾಭ್ಯಾಸ ರಾಷ್ಟ್ರದ ಪ್ರಮುಖ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿರುವ ಇವರಿಗೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ದೆಹಲಿಯ ಐಫೆಕ್ಸ್, ಚಿತ್ರಕಲಾ ಪರಿಷತ್ತು ಮತ್ತು ಹಿಮಾಚಲ ಪ್ರದೇಶದ ಅಖಿಲ ಭಾರತ ಕಲಾಪ್ರದರ್ಶನಗಳಲ್ಲಿ ಐ.ಆರ್.ಇ.ಡಿ.ಎ. ನವದೆಹಲಿಗಳಿಂದ ಪ್ರಶಸ್ತಿ ಪಡೆದಿದ್ದು, ಹದಿನಾರಕ್ಕೂ ಹೆಚ್ಚು ಕಲಾ ಪುಸ್ತಕಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಅಲ್ಲದೆ ಮೂರು ಬಾರಿ ತಮ್ಮ ಪುಸ್ತಕಗಳಿಗೆ ಲಲಿತಕಲಾ ಅಕಾಡೆಮಿಯ ಬಹುಮಾನ, ಆರ್ಯಭಟ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಶಸ್ತಿಗಳು ಬಂದಿದೆ. ಕನ್ನಡದಲ್ಲಿ ಕಲಾ ಸಾಹಿತ್ಯ ಬೆಳೆಯಲು ಇವರ ಕಾಣಿಕೆ ಅಪಾರವಾದುದು. ಪ್ರಸ್ತುತ ಕೇಂದ್ರ ಲಲಿತಕಲಾ ಅಕಾಡೆಮಿಗೆ ರಾಜ್ಯದ ಕಲಾವಿದರ ಪ್ರತಿನಿಧಿಯಾಗಿರುವ ಇವರು, ಈ ಪುಸ್ತಕದ ಸಂಪಾದಕರಾಗಿ, ಲೇಖಕರಾಗಿದ್ದಾರೆ.